Mysore Land Revenue (Second Amendment)Bill, 1969.

Motion to Consider—(Debate contd.)

Sri B. P. KADAM (Karwar).—Yesterday I was telling that this amending Bill will not serve any purpose. The Government wants to show favour to some zones. In sub-clause (u) of section 114 A, it is stated like this:

> "The Government, for reasons to be recorded in writing, is of the opinion that in any zone, the settlement of land revenue requires modification, it may, by order, direct the revision of settlement of land revenue in such zone,.. ..."

Then notices will be served by the authorities under the newly proposed Section 122A, and then under the newly proposed Section 122 (B), the Deputy Commissioner (i) may *suo motu* at any time and (ii) shall, on the application of any person aggrieved by the land revenue assessed within a period of thirty days, from the date of service of the notice under Section 122 A,......"

I think this will have a great political pressure. The Political parties will have greater influence in such zones. The vested interests will have greater influence over the Government. Therefore, justice cannot be sought fairly at the hands of the officialdom whether it is at the hands of the Deputy Commissioner or at the hands of the Divisional Commissioner. Only a particular class of people will enjoy the benefit and the poorer section will have to suffer always. Considered by these standards, I think this will serve no purpose.

Then of course, the land assessment envisaged under this Bill or in the earlier survey settlement is not the final thing. Over and above the land tax, we have got the health cess, the local fund cess, the education cess and also other things like the betterment levy and water rate, though they come under a separate legislation. Therefore, the best thing would be for the Government to withdraw this Bill in the present form and appoint a Committee to review the entire policy of land revenue so as to exempt uneconomic holdings.

As I said, yesterday, it must be the duty of the Government to see that uneconomic holdings are exempted from the land tax. Otherwise, the assurance given by the Government that they desire to bring a new amending Bill and have a comprehensive legislation to see that justice is done to all the regions concerned, will not be fulfilled.

Sir, I do not wish to take much time and thanking you for giving me this opportunity, I resume my seat.

(MR. DEPUTY SPEAKER in the Chair)

† ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ).—ಮಾನ್ಯ ಸಭಾಪತಿಗಳೇ, ಮಾನ್ಯ ರೆವಿನ್ಯೂ ಸಚಿವರು ಮಂಡಿಸಿರುವ ಈ ರೆವಿನ್ಯೂ ಮಸೂದೆ ತಿದ್ದುಪಡಿಗೆ ಬೆಂಬಲವನ್ನು ಕೊಡುತ್ತಾ ಈ

(ಶ್ರೀ ಡಿ. ಎಂ. ಸಿದ್ದಯ್ಯ)

ಭೂಕಂದಾಯವನ್ನು ಪುನರ್ವಿಮರ್ಶೆ ಮಾಡಿದಾಗ ಇದು ಸರಿಯಾಗಿ ಆಗಿಲ್ಲ ಎನ್ನತಕ್ಕಂಥ ಅಭಿಪ್ರಾಯವನ್ನು ಈ ಮಾನ್ಯ ಸಭೆಯಲ್ಲಿ ಹಿಂದೆ ಚರ್ಚೆಗೆ ಬಂದಾಗ, ಬಹಳ ಜನ ಸದಸ್ಯರು ಸೂಚಿಸಿದ್ದರ ಫಲವಾಗಿ ಅದರಲ್ಲಿ ಇದ್ದಂಥ ನ್ಯೂನತೆಗಳನ್ನು ಸರಿಪಡಿಸುವ ಉದ್ದೇಶದಿಂದ ಒಂದು ಸಮಗ್ರವಾದ ತಿದ್ದುಪಡಿಯನ್ನು ಮಾನ್ಯ ರೆವಿನ್ಯೂ ಸಚಿವರು ಈ ಸಭೆಯ ಮುಂದೆ ಇಟ್ಟಿದ್ದಾರೆ. ಈ ಒಂದು ತಿದ್ದುಪಡಿ ಸಮಗ್ರವಾದ ದೃಷ್ಟಿಯಿಂದ ಕೂಡಿದೆ ಎನ್ನತಕ್ಕಂಥಾದ್ದನ್ನು ನಾನು ಸಮರ್ಥಿಸುವುದಕ್ಕೆ ಇಚ್ಛೆಪಡುತ್ತೇನೆ. ಅದು ಹೇಗೆ ಎಂದರೆ ರೆವಿನ್ಯೂ ರೀಸೆಟಲ್‌ಮೆಂಟ್ ಆದಂಥ ಕಾಲದಲ್ಲಿ ಅನೇಕ ಜೋನ್‌ಗಳನ್ನು ಮಾಡಿ ಸರ್ಕಾರದವರು ಬೇಕಾದಷ್ಟು ಹಣವನ್ನು ಖರ್ಚು ಮಾಡಿ ಈ ಒಂದು ರೀಸೆಟಲ್‌ಮೆಂಟನ್ನು ಮಾಡಿಸಿದರು. ಆದರೆ ಅವಾಗ್ಗೆ ಈ ರೀಸೆಟಲ್‌ಮೆಂಟ್ ಒಂದೊಂದು ಕಡೆ ಒಂದೊಂದು ರೀತಿ ನಡೆಯಿತು. ಕೆಲವು ಕಡೆ ಕಂದಾಯದ ಬಗ್ಗೆ ಒಂದಕ್ಕೆ 4 ರಷ್ಟು 5 ರಷ್ಟು ಜಾಸ್ತಿಯಾಗಿದೆ ಎಂದು ಮತ್ತು ಇದರಿಂದ ರೈತರಿಗೆ ತೊಂದರೆಯಾಗಿದೆ ಎನ್ನುವ ಪರಿಸ್ಥಿತಿ ಸರ್ಕಾರದ ಮುಂದೆ ವಿಮರ್ಶೆಗೆ ಬಂದಾಗ ಸರ್ಕಾರದವರು ಉದಾರ ದೃಷ್ಟಿಯಿಂದ ಪರಿಶೀಲಿಸಿ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಈ ಒಂದು ರೀಸೆಟಲ್‌ಮೆಂಟ್ ಕೆಲಸ ವಿಪರೀತವಾಗಿದೆ ಎನ್ನುವ ಮಾತನ್ನು ಈ ಮಾನ್ಯ ಸಭೆಗೆ ತಿಳಿಸುತ್ತೇನೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಹೆಗ್ಗಡದೇವನಕೋಟೆ, ಪಿರಿಯಾ ಪಟ್ಟಣ, ಹುಣಸೂರು ತಾಲ್ಲೂಕುಗಳಲ್ಲಿ ಮಾಡಿರುವ ರೀಸೆಟಲ್‌ಮೆಂಟ್ ಹೀಗಿದೆ—

Class of land—

Dry land present Revenue as per first Revision Settlement 1,94,091.

Proposed Revenue increase 5,60,711.

Increase in levy 3,82,620.

Percentage of increase in Land Tax 408 per cent,

ಇದು ಬಹುಶಃ ಅತ್ಯಾಶ್ಚರ್ಯಕರವಾದ ಸಂಗತಿ. ಒಂದಕ್ಕೆ ನಾಲ್ಕರಷ್ಟು ಕಂದಾಯವನ್ನು ಜಾಸ್ತಿ ಮಾಡಿರತಕ್ಕದ್ದು, ರೀಸರ್ವೆ ಸೆಟಲ್‌ಮೆಂಟಿನವರು ಯಾವ ಆಧಾರದಿಂದ ಮಾಡಿದರೋ ಅದು ನಮಗೆ ಅರ್ಥವಾಗುವುದಿಲ್ಲ.

ಎರಡನೆಯದು ಅದೇ ಭಾಗದಲ್ಲಿ ವೆಟ್ ಲ್ಯಾಂಡ್ಸ್ 1/16 ಭಾಗ, ಪ್ರೆಸೆಂಟ್ ರೆವೆನ್ಯೂ 45,735 ರೂಪಾಯಿ, ಪ್ರಪೋಸ್ಡ್ ರೆವಿನ್ಯೂ 1,12,149 ರೂಪಾಯಿ, ಇನ್‌ಕ್ರೀಸ್ ಇನ್ ರೆವೆನ್ಯೂ 66,414 ರೂಪಾಯಿ, 245 ಪರ್ಸೆಂಟ್ ಜಾಸ್ತಿಯಾಗಿವೆ. ಇದು ಮೊದಲನೇ ಗ್ರೂಪ್. ಎರಡನೇ ಗ್ರೂಪ್ ತೆಗೆದುಕೊಂಡರೆ ಡ್ರೈಲ್ಯಾಂಡಿಗೆ 64,071 ರೂಪಾಯಿ ಇದ್ದರೆ ರೀಸರ್ವೆ ಸೆಟಲ್‌ಮೆಂಟಿನಲ್ಲಿ 3,34,454 ರೂಪಾಯಿ ಮಾಡಿದ್ದು ಹೆಚ್ಚಾಗಿರತಕ್ಕುದು 1,70,383 ರೂಪಾಯಿ ಅಂದರೆ 366 ಪರ್ಸೆಂಟ್ ಜಾಸ್ತಿಯಾಗಿದೆ. ಹಾಗೆಯೇ ವೆಟ್‌ಲ್ಯಾಂಡ್ಸ್ ತೆಗೆದುಕೊಂಡರೆ 282 ಪರ್ಸೆಂಟ್ ಜಾಸ್ತಿಯಾಗಿದೆ. ಒಟ್ಟು 2,51,598 ರೂಪಾಯಿ ಹಿಂದಿನ ಕಂದಾಯವಿದ್ದರೆ ಈಗ ಪ್ರಪೋಸ್ ಮಾಡಿರತಕ್ಕುದು 9,03,231 ರೂಪಾಯಿ. ಹೆಚ್ಚಾಗಿರತಕ್ಕುದು 6,51,633 ರೂಪಾಯಿ ಅಂದರೆ ಗ್ರಾಂಡ್ ಟೋಟಲ್‌ನಲ್ಲಿ 259 ಪರ್ಸೆಂಟ್ ವ್ಯತ್ಯಾಸ ಬರುತ್ತದೆ. ಹಿಂದೆ ಇದ್ದ 2,51,598ಕ್ಕೂ ಹೊಸದಾಗಿ ಪ್ರಪೋಸ್ ಮಾಡಿರುವ 9,03,231 ರೂಪಾಯಿಗಳಿಗೆ ಇರುವ ಅಂತರವನ್ನು ನೋಡಿದರೆ ಇದು ಎಷ್ಟು ವೈಪರೀತ್ಯಕ್ಕೆ ಹೋಗಿದೆ ಎನ್ನುವುದು ಕಾಣುತ್ತದೆ. ಬಹುಶಃ ನಮ್ಮ ರಾಜ್ಯದ ಯಾವ ಭಾಗದಲ್ಲಿಯೂ ಕೂಡ ಇಷ್ಟು ಜಾಸ್ತಿಯಾದ ವ್ಯತ್ಯಾಸವನ್ನು ರೀಸರ್ವೆ ಸೆಟಲ್‌ಮೆಂಟ್ ಮಾಡಿಲ್ಲ. ಮಾನ್ಯ ಚನ್ನಬಸಪ್ಪನವರು ಆ ಭಾಗಕ್ಕೆ ಸೇರಿದವರು, ಅವರು ದೊಡ್ಡ ಜಮೀನ್ದಾರರಿದ್ದಾರೆ. ಅವರು ಹೆಚ್ಚು ಕಂದಾಯ ಕೊಡಲಿ ಎಂದು ಮಾಡಿದರೋ ಏನೋ ಗೊತ್ತಾಗಿಲ್ಲ. ಇದನ್ನು ಮಾಡಿರುವುದು ಬಹಳ ವೈಪರೀತ್ಯವಾದುದು. ಇಂಥ ವ್ಯತ್ಯಾಸಗಳು ಅನೇಕ ಕಡೆ ಕಂಡು ಬಂದುದರಿಂದ, ಇದನ್ನೆಲ್ಲ ಸರಿಪಡಿಸಬೇಕೆಂದು ಈ ತಿದ್ದುಪಡಿಯನ್ನು ಮಾನ್ಯ ಸಭೆಯ ಮುಂದೆ ಸರ್ಕಾರದವರು ತಂದಿದ್ದಾರೆ. ಇದರ ಹಿನ್ನಲೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಸರ್ಕಾರದವರು ಮಾನ್ಯ ಸಭೆಯ ಮುಂದೆ, ದೇಶದ ಮುಂದೆ ಹೇಳಿದ್ದು, ಭೂಕಂದಾಯದ ಹಳೇ ಪದ್ಧತಿ ಏನಿದೆ ಆ ರೀತಿಯಲ್ಲಿ ಅದು ಇರುವುದಿಲ್ಲ, ನಾಟ್ ಇನ್ ದಿ ಪ್ರೆಸೆಂಟ್ ಫಾರಂ, ಎನ್ನುವ ಮಾತನ್ನು ಸರ್ಕಾರದವರು ಹೇಳಿರತಕ್ಕುದು ನಿಜ. ಭೂ ಕಂದಾಯವನ್ನು ವಜಾ ಮಾಡುತ್ತೇವೆಂದು ಯಾವತ್ತೂ ಹೇಳಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ (ಪಿರಿಯಾಪಟ್ಟಣ).—ರೀಸೆಟಲ್‌ಮೆಂಟ್ ಬಗ್ಗೆ ವರದಿಯನ್ನು ತಯಾರು ಮಾಡಿ ಸರ್ಕಾರಕ್ಕೆ ಕಳಿಸಿದಾಗ, ಈ ಸಭೆಯ ಮುಂದೆ ಇಟ್ಟಾಗ ಬಹಳ ಅನ್ಯಾಯ ನಡೆದಿದೆ ಎಂದು ಆಗ ಸರ್ಕಾರದ ದೃಷ್ಟಿಗೂ, ಮತ್ತು ಮಾನ್ಯ ಸದಸ್ಯರ ದೃಷ್ಟಿಗೂ ಬೀಳಲಿಲ್ಲವೊ? ಆಗ ಅದರಲ್ಲಿ ಏನು ಲೋಪದೋಷಗಳಿವೆ ಎಂದು ಕಂಡುಕೊಂಡೂ ಕೂಡ ಅದನ್ನು ಸಭೆಯಲ್ಲಿ ಇಟ್ಟು ಪಾಸ್ ಮಾಡಲಾಯಿತೇ?

ಶ್ರೀ ಡಿ. ಎಂ. ಸಿದ್ದಯ್ಯ.—ಲ್ಯಾಂಡ್ ರೆವೆನ್ಯೂ ರೀಸೆಟಲ್‌ಮೆಂಟ್ ಬಗ್ಗೆ ಈ ಸಭೆಯಲ್ಲಿ ಚರ್ಚೆ ಯಾದಾಗ ಮಾನ್ಯ ಕೃಷ್ಣಪ್ಪನವರು ರೆವೆನ್ಯೂ ಸಚಿವರಾಗಿದ್ದರು. ನನ್ನ ಮಟ್ಟಿಗೆ ಹೇಳುವುದಾದರೆ ನಾನು ಈಗ ಏನು ಅಭಿಪ್ರಾಯವನ್ನು ಹೇಳುತ್ತಿದ್ದೇನೆಯೋ ಅದೇ ಅಭಿಪ್ರಾಯವನ್ನೇ ಆಗಲೂ ಹೇಳಿದೆ. ಮಾನ್ಯ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿ ಇದ್ದರು. ಆಗಿನ ರೆವೆನ್ಯೂ ಸಚಿವರು ಇದನ್ನೆಲ್ಲ ಸರಿಪಡಿಸಬೇಕಾದರೆ ನಮಗೆ ಶಕ್ತಿ ಇಲ್ಲ, ಈ ಮಾನ್ಯ ಸಭೆ ಸರ್ಕಾರಕ್ಕೆ ಅನು ಮತಿಯನ್ನು ತಿದ್ದುಪಡಿಯ ಮೂಲಕ ಕೊಟ್ಟರೆ ಮಾತ್ರ ಅದನ್ನು ಸರಿಪಡಿಸಲು ಸಾಧ್ಯ ಎನ್ನುವ ಮಾತನ್ನು ಹೇಳಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ರೀಸೆಟಲ್‌ಮೆಂಟಿಗೆ ಈ ಸಭೆಯ ಅನುಮತಿಯನ್ನು ಪಡೆದ ಮೇಲೆ, ಸರ್ಕಾರ ಹುಕುಂ ಮಾಡಿದ ಮೇಲೆ ಕಾನೂನು ಸಭೆಯಲ್ಲಿ ಆಯಿತು. ಕಾನೂನು ಪ್ರಕಾರ ವಾಗಿ ಬದಲಾವಣೆ ಮಾಡುವುದಕ್ಕೆ ಅಧಿಕಾರವಿಲ್ಲ. ರೀಸೆಟಲ್‌ಮೆಂಟ್ ಸ್ಟೇಟ್‌ಮೆಂಟ್ ಏನಿತ್ತು ಅದು ಸಭೆಯಲ್ಲಿ ಬರುವುದಕ್ಕೆ ಮುಂಚೆ ತಾವೆಲ್ಲ ನೋಡಿದ್ದಿರಿ, ಆಗ್ಗೆ ಈ ಅನ್ಯಾಯ ನಡೆದಿದೆ ಎಂದು ನಿಮಗೆ ಗೊತ್ತಾಗಲಿಲ್ಲವೊ?

ಶ್ರೀ ಡಿ. ಎಂ. ಸಿದ್ದಯ್ಯ.—ರೀಸೆಟಲ್‌ಮೆಂಟ್ ಸಭೆಯ ಮುಂದೆ ಚರ್ಚೆಗೆ ಬಂದಂಥ ಕಾಲದಲ್ಲಿ ನಾವು ನಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದೆವು. ಅದರಲ್ಲಿ ಏನೇನು ಲೋಪದೋಷ ಗಳಿವೆ ಎನ್ನುವುದನ್ನೂ ಸೂಚಿಸಿದ್ದೇವೆ. ಆದರೆ ಇವತ್ತೇನು ತಿದ್ದುಪಡಿ ತಂದಿದ್ದಾರೆ ಅದನ್ನು ಹಿಂದೆಯೇ ಏಕೆ ತರಲಿಲ್ಲವೆಂಬುದು ಮಾನ್ಯ ಸದಸ್ಯರು ಹೇಳುವುದು. ಆ ರೀತಿಯ ತಿದ್ದುಪಡಿಯನ್ನು ಸರಕಾರದವರೇ ತರಬೇಕೆಂದು ಯೋಚನೆಮಾಡುತ್ತಿದ್ದರು, ಈಗ ತಂದಿರುವುದು ಕಾಕತಾಳಿ ನ್ಯಾಯವಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ರೀಸೆಟ್ಲ್‌ಮೆಂಟ್ ಸರಿಯಾಗಿದೆ ಎಂದು ಕೈ ಎತ್ತಿದಿರಿ. ಈ ದಿವಸವಿರುವ ಬುದ್ಧಿ ಆ ದಿವಸ ಎಲ್ಲಿ ಹೋಗಿತ್ತು?

ಶ್ರೀ ಡಿ. ಎಂ. ಸಿದ್ದಯ್ಯ.—ಆಗ ತಿದ್ದುಪಡಿ ತಂದು ಸರಿಪಡಿಸುತ್ತೇವೆಂದು ಭರವಸೆ ಕೊಟ್ಟಿ ದ್ದರ ಮೇಲೆ ಈಗ ಇದನ್ನು ತಂದಿರುವುದು. ವಿರೋಧ ಪಕ್ಷದವರು ಸತ್ಯಾಗ್ರಹ ಮಾಡಿದ ಮೇಲೆ ಇದನ್ನು ತಂದಿಲ್ಲ, ಇದು ಕಾಕತಾಳ ನ್ಯಾಯವಾಗಿದೆ. ಸತ್ಯಾಗ್ರಹ ನಡೆಯುದಿದ್ದರೂ ಕೂಡ ಈ ತಿದ್ದುಪಡಿ ಸಭೆಯ ಮುಂದೆ ಬರುತ್ತಿತ್ತು. ಆಗಲೇ ಮಾನ್ಯ ಸದಸ್ಯರು ತಮ್ಮ ಭಾಗದ ಉದಾ ಹರಣೆ ಹೇಳಿದರು, 2 ಲಕ್ಷವಿದ್ದುದು 9 ಲಕ್ಷವಾಗಿದೆ ಎಂದರು ರೈತರು ಅದನ್ನು ಕೊಡಲು ಖಂಡಿತ ಸಾಧ್ಯವಿಲ್ಲ. ನಮಗೆ ರೈತರ ಮೇಲೆ ನಿಮಗಿರುವುದಕ್ಕಿಂತ ಹೆಚ್ಚಿನ ಮಮತೆ ಇದೆ. ಸರಕಾರದವರು ಯಾವ ದೃಷ್ಟಿಯಿಂದ ಈ ತಿದ್ದುಪಡಿ ತಂದರೂ ಅದನ್ನು ಎಂದೋ ತರಬೇಕಾಗಿತ್ತು. ಅನಿವಾರ್ಯ ವಾಗಿ ಈಗ ತಂದಿದ್ದಾರೆ. ಈ ತಿದ್ದುಪಡಿಗೆ ಈ ಮಾನ್ಯ ಸಭೆ ಅನುಮತಿ ಕೊಟ್ಟರೆ ಎಲ್ಲಿ ಏನು ಬದಲಾಯಿಸಬೇಕೋ ಅದನ್ನು ಮಾಡಲು ಸರಕಾರ ಸಿದ್ಧವಾಗಿದೆ.

ಇದರಲ್ಲಿ ಮುಖ್ಯವಾಗಿ ಎರಡು ತಿದ್ದುಪಡಿಗಳನ್ನು ಸರ್ಕಾರದವರು ತಂದಿದ್ದಾರೆ, ಮೊದಲ ನೆಯದು ಯಾವ ಯಾವ ಜೋನ್‌ನಲ್ಲಿ ಸಭೆಯ ಮುಂದೆ ಹೇಳಿದಹಾಗೆ ಏರುಪೇರು ಆಗಿದೆ ಅಲ್ಲಿ ಸರಿಪಡಿಸುವುದಕ್ಕೆ ಅವಕಾಶ ಕಲ್ಪಿಸುವುದು. ಹಾಗೆ ಸರಿಪಡಿಸುವಾಗ ಪ್ರತಿಯೊಬ್ಬ ಜಮೀನುದಾರನಿಗೂ ನೋಟಿಸು ಕೊಡುವುದು ಮಹತ್ತರವಾದುದು. ಆ ನೋಟಿಸನ್ನು ತೆಗೆದು ಕೊಂಡಮೇಲೆ ಸರಿಯಾಗಿದ್ದರೆ ಸುಮ್ಮನಿರಬಹುದು, ಇಲ್ಲದಿದ್ದರೆ ಡಿ. ಸಿ. ಮುಂದೆ ಅಪೀಲುಮಾಡ ಬಹುದು. ಅಲ್ಲಿಯೂ ತೀರ್ಮಾನ ಸಮಾಧಾನಕರವಾಗಿ ಆಗದಿದ್ದರೆ ಡಿವಿಜನಲ್ ಕಮೀಷನರ ಮುಂದೆ ಹೋಗಬಹುದು. ಅವರು ಫೈನಲ್ ಅಥಾರಿಟಿ. ಒಂದು ಶಂಕೆ ಕೆಲವರು ಹೇಳಿದರು. ಅದರಲ್ಲೂ ಗೋಪಾಲಗೌಡರು ಅಧಿಕಾರಿಗಳ ಕೈಲಿ ಇಷ್ಟೊಂದು ಅಧಿಕಾರವನ್ನು ಕೊಡುವುದನ್ನು ಒಪ್ಪುವುದ ಕ್ಕಾಗುವುದಿಲ್ಲ ಎಂದು ಹೇಳಿದರು ; ನ್ಯಾಯ ಸಿಕ್ಕದೆ ಇರಬಹುದು ಎಂದು ಹೇಳಿದರು. ನಾನಾದರೂ ಹೇಳುವುದು ಎಲ್ಲರನ್ನೂ ಸಂಶಯ ದೃಷ್ಟಿಯಿಂದ ನೋಡುವುದಾದರೆ ಬಹುಶಃ ರಾಜ್ಯಭಾರ ಮಾಡು

(ಶ್ರೀ ಡಿ. ಎಂ. ಸಿದ್ದಯ್ಯ)

ವುದೇ ಕಷ್ಟ ಮತ್ತು ಪ್ರಜಾಪ್ರಭುತ್ವದಲ್ಲಿ ಉಳಿಯುವುದೇ ಕಷ್ಟ. ಸರಕಾರಿ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ವರ್ತಿಸುತ್ತಾರೆ ಎಂಬ ಭರವಸೆ ಇಡಬೇಕು. ನಾನು ರೆವೆನ್ಯೂ ಸಚಿವರಲ್ಲಿ ತಮ್ಮ ಮೂಲಕ ಅರಿಕೆ ಮಾಡುವುದು ಒಂದು ಸರ್ಕ್ಯುಲರ್ ಕಳಿಸಿ ವಿಮರ್ಶೆಮಾಡುವಾಗ, ಅಪೀಲು ಮಾಡುವಾಗ, ಸರಿಯಾದ ರೀತಿಯಲ್ಲಿ ನಡೆಯಬೇಕು. ಮತ್ತೊಂದು ಸಲಹೆ ಮಾಡುತ್ತೇನೆ. ಈ ರೀತಿಯಾಗಿ ಒಂದು ಆಕ್ಟಿನಲ್ಲಿ ತಿದ್ದುಪಡಿಯಾಗಿ ಜಾರಿಗೆ ಬಂದನಂತರ ಎಲ್ಲಿ ರೈತರಿಗೆ ಕಷ್ಟವಿದೆ, ಎಲ್ಲಿ ಅಪೀಲು ಹಾಕುತ್ತಿದ್ದಾರೆ ಎಂದು ನೋಡಿ ಅಂಥ ಕಾಲದಲ್ಲಿ ಮಾನ್ಯ ರೆವೆನ್ಯೂ ಸಚಿವರು ಇಡೀ ರಾಜ್ಯದಲ್ಲಿ ಪ್ರವಾಸಮಾಡಿ ಪ್ರತಿ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿಗೂ ಹೋಗಿ, ಅಲ್ಲಿ ಯಾವ ರೀತಿ ವಿಮರ್ಶೆಮಾಡುತ್ತಿದ್ದಾರೆ, ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಅಹವಾಲು ಕೇಳುತ್ತಿದ್ದಾರೆಯೇ, ಸರಿಯಾಗಿ ಇತ್ಯರ್ಥಮಾಡುತ್ತಿದ್ದಾರೆಯೇ ಎಂದು ನೋಡಬೇಕು, ರಾಜ್ಯದ 19 ಜಿಲ್ಲೆಗಳಲ್ಲೂ ಪ್ರವಾಸಮಾಡಿ ಇದರ ವಿಷಯದಲ್ಲಿ ಒಂದು ರೀತಿಯ ಸೂಪರ್‌ವಿಷನ್ ವ್ಯವಸ್ಥೆಮಾಡಿ ಕೆಲಸ ಮಾಡಬೇಕು ಎಂದು ನಾನು ಈ ಸಭೆಯಲ್ಲಿ ಅವರಿಗೆ ಸೂಚಿಸುತ್ತೇನೆ :

ಮಾನ್ಯ ಚನ್ನಬಸಪ್ಪನವರು ಒಂದು ಪ್ರಶ್ನೆ ಹಾಕಿದ್ದಾರೆ. ಇದು ರೆಂಟೋ ಟ್ಯಾಕ್ಸೋ ಎಂದು. ಲ್ಯಾಂಡ್ ರೆವೆನ್ಯೂ ಯಾವ ಆಧಾರದ ಮೇಲೆ ಹಾಕಿದ್ದಾರೆ ಎಂದು ಅವರು ಮೂಲಭೂತವಾದ ಪ್ರಶ್ನೆಯನ್ನೆತ್ತಿದ್ದಾರೆ. ಅವರು ಸ್ವತಃ ಜಮೀನುದಾರರು, ಅಗ್ರಿಕಲ್ಚರಲ್ ಕಮಿಟಿ ಅಧ್ಯಕ್ಷರಾಗಿ ದೇಶದ ಎಲ್ಲಾ ಕಡೆ ಪ್ರವಾಸಮಾಡಿ ಅಪಾರ ಅನುಭವ ಪಡೆದಿರುವವರು. ಅವರ ಅನುಭವ ಸಭೆಯ ಮುಂದಿಟ್ಟರು.

ಇದು ಎಷ್ಟು ಜಟಿಲವಾದ ಸಮಸ್ಯೆ ಎಂದರೆ ಈ ಒಂದು ಸರ್ವೆ ನಡೆಸಿದಂತಹ ಕೆಲವು ಅಧಿಕಾರಿಗಳು ಈ ಪ್ರಶ್ನೆಯ ವಿಷಯದಲ್ಲಿ ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಸ್ವಲ್ಪ ಭಾಗಗಳನ್ನು ನಾನು ಇಲ್ಲಿ ಓದುವುದಕ್ಕೆ ಇಚ್ಛಿಸುತ್ತೇನೆ.

" The land-tax is neither, new, nor is it peculiar to our land. It existed from time immemorial and every country in the world had levied this tax in some form or another. It only differed from one country to another in the method adopted and the quantum levied.

Even in India, there has been no uniform system for the land-taxation. Every State or Province adopted different procedure, and all this because, as the Indian Taxation Enquiry Committee have opined 'the Indian systems are the result of a gradual process of evolution from indigenous practices and that they have been moulded into this present shape by British Officers, quite independently of one another to suit local circumstances in different areas'. The present land revenue system of Mysore was first developed during the administration of Mysore by a British Commission and the policy adopted in Mysore was considerably influenced by that adopted in Madras and Bombay, though the influence of the latter is predominant ".

"...Thus with the development of communication evolution of Regulated Markets, better and quick transport facilities and the changing character of agricultural economy, groups formed four or five decades back are bound to become out of date, and necessarily have to be revised ."

ಕೊನೆಯಲ್ಲಿ ಈ ಲ್ಯಾಂಡ್ ರೆವಿನ್ಯೂವನ್ನು ಅಸೆಸ್ ಮಾಡಬೇಕಾದರೆ ಯಾವ ಯಾವ ಸೇಲಿಯಂಟ್ ಫೀಚರ್ಸನ್ನು ಪರಿಶೀಲನೆ ಮಾಡಬೇಕು ಎಂಬ ಮಾತನ್ನು ಅವರು ತಮ್ಮ 4-5 ಅಭಿಪ್ರಾಯಗಳಿಂದ ಸೂಚನೆ ಮಾಡಿದ್ದಾರೆ:

"(a) The yield of the principal crops and their prices shall be the main factors in determining the pitch of assessment;

(b) The area of settlement operations should be selected not necessarily on the basis of a small administrative unit like a taluk. It should be a zone comprising of a taluk or taluks of the same district or of more than one district which are homogeneous in respect of physical configuration, climate and rainfall and nature of crops grown predominantly and grouping should be done on the basis of soil characteristics, seasonal conditions, nature of crops grown and prices;

(c) The standard rate determined for an acre of 16 annas soil should be one-sixteenth of the value of the average gross yield of principal crops determined in terms of the average prices of these crops prevalent for a period of 3 to 10 years.

(d) The period of guarantee should remain at 30 years.

ಹೀಗೆ ಕೆಲವು ಪ್ರಾಮುಖ್ಯವಾದ ವಿಷಯಗಳನ್ನು ಅವರು ಗಮನದಲ್ಲಿಟ್ಟುಕೊಂಡು ಲ್ಯಾಂಡ್ ರೆವಿನ್ಯೂ ಹಾಕತಕ್ಕ ವಿಧಾನವನ್ನು ಸೂಚನೆ ಮಾಡಿದ್ದಾರೆ. ಇಷ್ಟಾದರೂ ಕೂಡ ಒಂದು ತೃಪ್ತಿಕರವಾದ ರೀತಿಯಲ್ಲಿ ಮಾಡುವುದು ಕಷ್ಟ ಅನ್ನತಕ್ಕ ಮಾತನ್ನು ಇನ್ನೊಬ್ಬ ಮಾನ್ಯ ಸೆಟ್ಲ್‌ಮೆಂಟ್ ಆಫೀಸರು ಅವರು 'ಎ ಥಾಟ್ ಅನ್ ಲ್ಯಾಂಡ್ ರೆವಿನ್ಯೂ' ಅಂತ ಅನ್ನತಕ್ಕ ಸಂದರ್ಭದಲ್ಲಿ ಅಪ್ಪಣೆ ಕೊಡಿಸುತ್ತಾ ಅವರು ಈ ಮಾತುಗಳಲ್ಲಿ ಹೇಳುತ್ತಾರೆ:

"Since times immemorial a certain proportion of the income from land is always shared by the Government. Why does Government claim this share? Is it because the Government thinks that the whole land belongs to it and claims share as any other landlord would do from his tenant? Or is it because the Government claim a share of the produce, as it claims from industry and profession? It is not easy to offer a straight answer."

ನಾನು ಮಾನ್ಯ ಚನ್ನಬಸಪ್ಪನವರಿಗೆ ತಮ್ಮ ಮೂಲಕ ಹೇಳುವುದಾದರೆ ಈ ಟ್ಯಾಕ್ಸ್, ಈ ರೆಂಟ್, ಈ ಲ್ಯಾಂಡ್ ಯಾರಿಗೆ ಸೇರಿದ್ದು ಅನ್ನುವುದು ಬೃಹತ್ ಸಮಸ್ಯೆಯಾಗಿದೆ. ಬಹುಶಃ ಇಷ್ಟು ಸುಲಭದಲ್ಲಿ ಇತ್ಯರ್ಥ ಮಾಡುವುದಕ್ಕೆ ಸಾಧ್ಯವಿಲ್ಲ, ಬಹಳ ಕಷ್ಟವಾಗುತ್ತದೆ ಅನ್ನುವುದು ನಮ್ಮೆಲ್ಲರಿಗಿಂತಲೂ ಅವರಿಗೆ ಬಹಳ ಚೆನ್ನಾಗಿ ಗೊತ್ತಿದೆ ಎಂದು ಸೂಚಿಸುವುದಕ್ಕೆ ಇಚ್ಛೆಪಡುತ್ತೇನೆ. ಮತ್ತು ಅವರು ಇನ್ನೂ ಕೆಲವು ಅಮೂಲ್ಯವಾದ ಸಲಹೆಗಳನ್ನು ಕೊಡುತ್ತಾರೆ. ಅವರು ಈ ರೀತಿ ಹೇಳುತ್ತಾರೆ:

"The earliest type of the land revenue was assessed on the basis of area, but during recent times land revenue is levied on an annual revenue or income from land or on the capital value of land. In our State the levy of land revenue is on the basis of gross income from land. For accurate application of the land revenue on this basis, it is imperative to classify the land according to its fertility and the type of use. The classification of land done in the past has little relation to the condition existing now."

(ಶ್ರೀ ಡಿ. ಎಂ. ಸಿದ್ದಯ್ಯ)

"Conversion of one class of land to another is a continuous process and the correction of land records has to be done immediately thereafter to give effect to levy of land revenue rates for that class of land. The reclassification of land is complete in the Mysore and T.-Narsipur Taluks and the work is in progress in the Nanjangud Taluk.

3-30 P.M.

ಹೀಗೆ ರೀಕ್ಲಾಸಿಫಿಕೇಷನ್ ವಿಚಾರ ಹೇಳುತ್ತಾ ಮೈಸೂರು ಮತ್ತು ಟಿ.ನರಸೀಪುರ ಈ ಸ್ಥಳಗಳ ಬಗ್ಗೆ ಹೇಳಿಕೊಂಡು ಹೋಗುತ್ತಾ ಅವರು ಇನ್ನೂ ಒಂದು ಮಾತನ್ನೂ ಏನು ಹೇಳಿದ್ದಾರೆ ಎಂದರೆ ಈ ದಿವಸ ಒಬ್ಬ ಮನುಷ್ಯ ಒಂದು ವ್ಯಾಪಾರದಲ್ಲಿ 3 ಸಾವಿರ ಬಂಡವಾಳವನ್ನು ಹಾಕಿ ವ್ಯವಹಾರಮಾಡತಕ್ಕವನಿಗೂ ಮತ್ತು ಅದೇ 3 ಸಾವಿರ ರೂಪಾಯಿಗಳನ್ನು ಭೂಮಿಯಮೇಲೆ ಹಾಕಿ ಬೇಸಾಯ ಮಾಡತಕ್ಕವನಿಗೂ ಯಾವ ರೀತಿ ಹೋಲಿಕೆಮಾಡಿ ಹೇಳಿದ್ದಾರೆಂದರೆ :

"If a man with Rs. 3,000-00 starts a business other than agriculture, he need not have to pay tax to the Government, but if a man invests the same Rs. 3,000 on lands, he has to pay land revenue and there is no *quid pro quo*. Further there is no equity or equality, and it has no relation to paying capacity of the individuals. A man owning one acre of land has to pay the same rate of assessment as also a man with hundred acres of land. To the former, it would be a burden and to the latter it is not. So both do not feel the burden of assessment equally."

ಈ ಒಂದು ದೃಷ್ಟಿಯಿಂದ ನಾನು ಭೂಕಂದಾಯದ ವಿಚಾರದಲ್ಲಿ ಮಾತನಾಡತಕ್ಕ ಸಮಯದಲ್ಲಿ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ಈಗ ತಂದಿರತಕ್ಕ ತಿದ್ದುಪಡಿ ಏನಿದೆ ಇದನ್ನು ಪಾಸ್ ಮಾಡಿದಮೇಲೆ ಎಲ್ಲೆಲ್ಲಿ ಭೂಕಂದಾಯ ಹೆಚ್ಚಾಗಿದೆ ಎಲ್ಲೆಲ್ಲಿ ರೈತರಿಗೆ ಇದರಿಂದ ಒಂದು ಹೆಚ್ಚಿನ ತೊಂದರೆಯಾಗಿದೆ ಎಂಬುದನ್ನು ಪರಿಶೀಲನೆ ಮಾಡಿ ಅಲ್ಲೆಲ್ಲ ಆ ಕಂದಾಯವನ್ನು ಕಡಮೆ ಮಾಡಬೇಕು. ನಾನು ಸರ್ಕಾರಕ್ಕೆ ಮತ್ತೊಂದು ಸಲಹೆ ಮಾಡುವುದೇನೆಂದರೆ ಯಾರು ಈ ದಿವಸ 5 ಎಕರೆ ಮತ್ತು ಅದಕ್ಕಿಂತ ಕೆಳಪಟ್ಟು ಖುಷ್ಕಿ ಭೂಮಿಯನ್ನು ಇಟ್ಟುಕೊಂಡಿದ್ದಾರೋ ಅಂಥವರಿಗೆಲ್ಲಾ ಈ ಭೂಕಂದಾಯವನ್ನು ಸಂಪೂರ್ಣವಾಗಿ ಮನ್ನಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಮಾನ್ಯ ಶ್ರೀ ಗೋಪಾಲಗೌಡರ ವಿಷಯದಲ್ಲಿ ನನಗೆ ಬಹಳ ಗೌರವವಿದೆ ಅವರು ಒಬ್ಬ ಅಪ್ಪಟ ಸಮತಾವಾದಿಗಳು. ಅವರಿಗೆ ರೈತರ ವಿಷಯದಲ್ಲಿ ಬಹಳ ಅನುಕಂಪವಿದೆ. ಆದರೆ ನಮ್ಮ ಪಕ್ಷದ ನಿಲವೂ ಕೂಡ ಅದೇ ಆಗಿದೆ. ಆದರೆ ನಾವು ಇಲ್ಲಿಯವರೆಗೂ ಈ ಸಮತಾವಾದ ಸಮಾಜವನ್ನು ಕಟ್ಟುವುದರಲ್ಲಿ ದುಷ್ಟಶಕ್ತಿಗಳ ಹಿಡಿತಕ್ಕೆ ಸಿಕ್ಕಿ ನಾವು ಇದರ ಗುರಿ ಸಾಧನೆಯಲ್ಲಿ ನಿಧಾನವಾಗಿರಬಹುದು, ಇಲ್ಲವೇ ಎಡವಿರಬಹುದು, ಮುಗ್ಗರಿಸಿರಬಹುದು. ಆದರೆ ಅಂಥದನ್ನೆಲ್ಲಾ ನಾವೀಗ ಬಹಳ ಜಾಗರೂಕತೆಯಿಂದ ಸರಿಪಡಿಸಿಕೊಂಡು ಮುಂದೆ ಬರುತ್ತಿದ್ದೇವೆ. ಅದು ಇಲ್ಲಿಯವರೆಗೂ ಯಶಸ್ವಿಯಾಗದಿದ್ದರೆ ಅದಕ್ಕೆ ಕಾರಣಗಳು ಹಲವಾರಿವೆ. ನಾವು ಇನ್ನಾದರೂ ಈ ನಮ್ಮ ತಪ್ಪು ಹೆಜ್ಜೆಯನ್ನು ಸರಿಪಡಿಸಿಕೊಂಡು ಸರಿಯಾದ ಪಥದಲ್ಲಿ ಮುನ್ನುಗದಿದ್ದರೆ ರಾಜ್ಯ ಮುಂದಕ್ಕೆ ಬರಲು ಸಾಧ್ಯವಿಲ್ಲ; ರಾಜ್ಯದಲ್ಲಿರತಕ್ಕ ಅಜ್ಞಾನ ಹಾಗೂ ಬಡತನಗಳನ್ನೂ ನೀಗುವುದಕ್ಕಾಗುವುದಿಲ್ಲ. ಈ ದಿವಸ ಯಾರು ಒಂದು ಎಕರೆ ಭೂಮಿಯನ್ನು ಇಟ್ಟುಕೊಂಡಿದ್ದಾರೋ ಅಂಥವರಿಗೆ ಈ ಭೂಕಂದಾಯ ಒಂದು ಹೊರೆಯಾಗಿದೆ. ಆದರೆ ಅದೇ ಭೂಮಿಯನ್ನು 100 ಎಕರೆಗಳ ಗಟ್ಟಲೆ ಯಾರು ಇಟ್ಟುಕೊಂಡಿದ್ದಾರೋ ಅಂಥವರಿಗೆ ಇದು ಬಹಳ ಲಾಭದಾಯಕವಾಗಿದೆ. ಆದ್ದರಿಂದ ನಾನು ಈ ದಿವಸ ಸರ್ಕಾರದವರಿಗೆ ಅಡಕೆ ತೋಟ ಮತ್ತು ಬಾಳೆ ತೋಟದಂತಹ ಆದಾಯಬರತಕ್ಕ ಭೂಮಾಲೀಕರಿಗೆ ಕಂದಾಯ ವಜಾ ಮಾಡಿ ಎಂದು ಹೇಳುತ್ತಿಲ್ಲ. ಇವತ್ತು

ಯಾರು ಕೇವಲ 5 ಎಕರೆ ಅಥವಾ ಅದಕ್ಕೂ ಕೆಳಪಟ್ಟು ಖುಷ್ಕಿ ಭೂಮಿಯನ್ನು ಇಟ್ಟುಕೊಂಡಿದ್ದಾರೋ ಯಾರು ಕೇವಲ ಮಳೆ ಆಧಾರದಿಂದಲೇ ಬೆಳೆಯನ್ನು ತೆಗೆಯುತ್ತಿದ್ದಾರೋ ಅಂಥವರಿಗೆ ಕಂದಾಯವನ್ನು ವಜಾ ಮಾಡಿ ಎಂದು ಕೇಳುತ್ತಿದ್ದೇನೆ. ಏಕೆಂದರೆ ಅಂತಹ ಭೂಮಿಯಲ್ಲಿ ಮಳೆ ಬಂದರೆ ಬೆಳೆ ಆಗುತ್ತೆ ಇಲ್ಲದಿದ್ದರೆ ಇಲ್ಲ. ಅಥಾದ್ದರಲ್ಲಿ ಅದನ್ನೇ ನಂಬಿರುವ ಆ ರೈತನು ತನ್ನ ಹೆಂಡತಿ ಮಕ್ಕಳನ್ನು ಸಾಕುವುದಾದರೂ ಹೇಗೆ? ಅವನ ವರ್ಷದ ಜೀವನಕ್ಕೇನು ಗತಿ? ಅವರು ಬಟ್ಟೆ ಬರೆಗಳಿಗೇನು ಮಾಡಬೇಕು? ಇಷ್ಟೆಲ್ಲಾ ತೊಂದರೆಗಳಿರುವುದರಿಂದ ಅವರಿಗೆ ಮಾತ್ರ ಕಂದಾಯವನ್ನು ರದ್ದು ಮಾಡಿ ಎಂದು ಹೇಳುತ್ತಿದ್ದೇನೆ. ಇದನ್ನು ಸರ್ಕಾರದವರು ಬಹಳ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತಾರೆಂದು ಭಾವಿಸುತ್ತೇನೆ. ನಮ್ಮ ಪಕ್ಷದ ತತ್ವಗಳ ದೃಷ್ಟಿಕೋನವೂ ಸಹಾ ಒಂದೇ ಆಗಿರುವುದರಿಂದ ಸರ್ಕಾರದವರು ಬಹಳ ಔದಾರ್ಯದಿಂದ ವರ್ತಿಸುತ್ತಾರೆಂದು ನಾನು ಭಾವಿಸಿದ್ದೇನೆ. ಈ ವಿಚಾರದಲ್ಲಿ ಒಂದು ರಿಪೋರ್ಟನ್ನು ಮಾಡಿದ್ದಾರೆ. ಅದನ್ನು ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡುತ್ತಿದ್ದಾರೆ. ಹಾಗೆ ಪರಿಶೀಲನೆ ಮಾಡುತ್ತಾ ಅವರು ಒಂದು ಮಾತನ್ನು ಹೇಳಿದ್ದಾರೆ:—

> "If the land revenue is regarded as a tax *in rem*, that is, levied without regard to personal characteristics of the payer, then it is not at all necessary that the land revenue should toe the canons of taxation. In fact, the land revenue, is a share claimed in the produce as any other landlord would do. It is fixed for a period of thirty years like any other contract of rent payment between the landlord and the tenant. All lands have to pay the land revenue. As such I am wont to call the land revenue as a rent rather than a tax payable to the Government."

ನಾನಾಗಲೆ ಹೇಳಿದಂತೆ ಇದು ಒಂದು ಬಹಳ ಜಟಿಲವಾದಂಥ ವಿಷಯ. ಇದನ್ನು ಪ್ರಾಜ್ಞರಾದಂಥ ಜನರು ಹಾಗೂ ಶ್ರೀಮಾನ್ ಚನ್ನಬಸಪ್ಪನವರು ತುಲನಾತ್ಮಕದೃಷ್ಟಿಯಿಂದ ಪರಿಶೀಲನೆ ಮಾಡಿ ಇದನ್ನು ತೀರ್ಮಾನ ಮಾಡಬೇಕಾಗಿದೆ. ಆದ್ದರಿಂದ ನಾವೀಗ ಇದರ ಬಗ್ಗೆ ಅಷ್ಟು ಹೆಚ್ಚಿಗೆ ತಲೆ ಕೆಡಿಸಿಕೊಳ್ಳಬೇಕಾದ್ದಿಲ್ಲ. ಸಧ್ಯ ಸಭೆಯ ಮುಂದೆ ಬಂದಿರತಕ್ಕ ತಿದ್ದುಪಡಿಯ ವಿಚಾರದಲ್ಲಿ ಸರ್ಕಾರದವರು ಔದಾರ್ಯದಿಂದ ವರ್ತಿಸಿ ರೈತರಿಗೆ ತೊಂದರೆಯಾಗದಂತೆ ಇದನ್ನು ಜಾರಿಗೆ ತರತಕ್ಕ ಮಾರ್ಗದಲ್ಲಿ ಈ ಮಾನ್ಯ ಸಭೆಗೆ ಒಂದು ಮರ್ಯಾದೆ ಹಾಗೂ ಗೌರವ ಬರತಕ್ಕ ರೀತಿಯಲ್ಲಿ ಇದನ್ನು ಪಾಸ್ ಮಾಡಬೇಕಾಗಿದೆ. ಇನ್ನು ರೈತರಮೇಲೆ ಬಾಕಿ ನಿಂತಿರತಕ್ಕ ಕಂದಾಯ ಮತ್ತು ಸರ್‌ಛಾರ್ಜ್ ಇವೆಲ್ಲಾ 1965 ರಿಂದಲೂ ಹಾಗೇ ನಿಂತು ಬಂದಿವೆ. ಎಮರ್ಜೆನ್ಸಿ ಇದ್ದಕಾರಣ ಇವನ್ನು ಹಾಗೇ ಮುಲ್ಕಿ ಇಡಲಾಯಿತು. ಆ ಬಾಕಿ ಹಣವನ್ನೆಲ್ಲಾ ಒಂದೇ ಗಂಟಿನಲ್ಲಿ ಕೊಡಬೇಕೆಂದು ಅಧಿಕಾರಿಗಳು ಒತ್ತಾಯ ಮಾಡುತ್ತಿದ್ದಾರೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಸರ್ಕಾರದವರು ದಯವಿಟ್ಟು ಅದನ್ನು ಕಂತುಗಳ ರೂಪದಲ್ಲಿ ಬಾಕಿಯನ್ನು ವಸೂಲ್ಮಾಡುವಂತೆ ಅಧಿಕಾರಿಗಳಿಗೆ ಆಜ್ಞೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ರೂಲ್ಸಿನಲ್ಲಿ ಒಂದೇ ಗಂಟಿನಲ್ಲಿ ವಸೂಲ್ಮಾಡಬೇಕೆಂದು ಹೇಳಿರಬಹುದು. ಸರ್ಕಾರದವರು ಈ ಪ್ರಶ್ನೆಯನ್ನು ಮಾನವೀಯತೆ ದೃಷ್ಟಿಯಿಂದ ನೋಡಬೇಕಾದ್ದು ಅತ್ಯವಶ್ಯಕ. ರೈತನು ತಾನು ಬೆಳೆದಿರುವ ದವಸವನ್ನೆಲ್ಲಾ ಮಾರಾಟ ಮಾಡಿದರೂ ಆತ ಆ ಬಾಕಿಯನ್ನು ಪೂರ್ತಿಯಾಗಿ ಒಂದು ಗಂಟಿನಲ್ಲಿ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಮಾನ್ಯ ರಾಜಸ್ವಮಂತ್ರಿಗಳು ಈ ಬಾಕಿ ಕಂದಾಯದ ಮೊಬಲಗನ್ನೆಲ್ಲಾ ಕಂತುಗಳಮೇಲೆ ಕೊಡುವುದಕ್ಕೆ ಆಜ್ಞೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಲ್ಲಿ ಪಕ್ಷಗಳ ಪ್ರಶ್ನೆ ಬರುವುದಿಲ್ಲ. ಇದನ್ನು ಪಕ್ಷಾತೀತವಾಗಿ ಪರಿಶೀಲನೆ ಮಾಡಬೇಕಾಗಿದೆ. ಸಾಧ್ಯವಾದ ಮಟ್ಟಿಗೂ ರೈತನಮೇಲೆ ಬೀಳತಕ್ಕ ಹೊರೆಯನ್ನು ತಗ್ಗಿಸಬೇಕು. ಆದರೆ ಈ ಕಂದಾಯದ ಬಾಬಿನಿಂದ ಬರತಕ್ಕ ಹಣವನ್ನು ಸರ್ಕಾರದವರು ಆ ಸ್ಥಳೀಯ ಸಂಸ್ಥೆಗಳಿಗೆ ಅಂದರೆ ತಾಲ್ಲೂಕ್ ಅಭಿವೃದ್ಧಿ ಬೋರ್ಡುಗಳಿಗೆ, ಪಂಚಾಯಿತಿಗಳಿಗೆ ಕೊಡುತ್ತಿರುವ ಕಾರಣ ಇದರಿಂದ ಬರತಕ್ಕ ಒಂದೊಂದು ಪುಡಿಗಾಸನ್ನೂ ಕೂಡ ಬಹಳ ಎಚ್ಚರಿಕೆಯಿಂದ ಶೇಖರಿಸಿಡಬೇಕಾಗುತ್ತದೆ. ಆದ್ದರಿಂದ ಸರ್ಕಾರದವರು ನಾನು ಮಾಡಿಕೊಂಡಿರತಕ್ಕ ಪ್ರಾರ್ಥನೆಯನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತಾರೆಂದು ನಂಬಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri H. M. CHANNABASAPPA.—Mr. Speaker, Sir......

ಶ್ರೀಮತಿ ನಾಗಮ್ಮ (ಕಲಮಲ).—ಮಾನ್ಯ ಸದಸ್ಯರು ಕನ್ನಡದಲ್ಲಿ ಮಾತನಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಕನ್ನಡದಲ್ಲಿ ಮಾತನಾಡುವುದಕ್ಕೆ ಪ್ರಾರಂಭಮಾಡುತ್ತೇನೆ.

ಈ ಭೂಸುಧಾರಣೆ ತಿದ್ದುಪಡಿ ಮಸೂದೆಯ ಬಗ್ಗೆ ಸುಮಾರು ನಿನ್ನೆ, ಮೊನ್ನೆಯಿಂದಲೂ ಕೂಡ ಈ ಸಭೆಯಲ್ಲಿ ಚರ್ಚೆಯಾಗಿದೆ. ಸರ್ಕಾರದ ಪರ ಮಾತನಾಡಿದಂಥ ಸದಸ್ಯರು ಮತ್ತೆ ಮುಂದೆ ಮಾತನಾಡತಕ್ಕಂಥ ಮಂತ್ರಿಗಳು ಇಬ್ಬರೂ ಕೂಡ ಏನು ಹೇಳುತ್ತಾರೆಂಬುದನ್ನು ನಾವು ನಿರೀಕ್ಷಣೆ ಮಾಡಬಹುದು. ಏನೋ ಇದು ಒಂದು ಸಣ್ಣ ಬಿಲ್ಲು, ಇದು ತಾವಾಗಿಯೇ ಕೇಳಿದ್ದು, ಸರ್ಕಾರ ಆ ಅಧಿಕಾರ ತೆಗೆದುಕೊಂಡು ನಿಮ್ಮ ಕಷ್ಟವನ್ನು ಪರಿಹಾರಮಾಡುವುದಕ್ಕೋಸ್ಕರ ಹೊರಟಿರುವುದು ಎಂದು ಹೇಳಬಹುದು. ಇಂತಹ ಸ್ವಾಗತಾರ್ಹವಾದ ಮಸೂದೆಯಲ್ಲಿ ವಿರೋಧಾಭಾಸವಾದುದು ಏನೂ ಇಲ್ಲವೆಂದು ನನ್ನ ಮಿತ್ರರಾದಂಥ ಮಾನ್ಯ ಶ್ರೀ ಕೌಜಲಗಿಯವರು ನನ್ನನ್ನು ಮೂದಲಿಸುತ್ತಿದ್ದಾರೆ. ಆದರೆ ಈ ವಿಷಯ ತಾವು ತಿಳಿದುಕೊಂಡಿರುವಷ್ಟು ಸಣ್ಣದಲ್ಲ. ಇದರ ವ್ಯಾಪಕ ಬಹಳ ಮಹತ್ವದ್ದು ಇದೆ. ಸುಮಾರು ಹಲವಾರು ವರ್ಷಗಳಿಂದಲೂ ಈ ವಿಷಯದಲ್ಲಿ ಬಹಳ ತೀವ್ರವಾಗಿ ಆಲೋಚನೆ ಮಾಡುತ್ತಿದ್ದೇವೆ. ಈ ಭೂಕಂದಾಯದ ವಿಷಯದಲ್ಲಿ ಚರ್ಚೆ ಪ್ರಾರಂಭವಾದುದು ಇವತ್ತು ಅಲ್ಲ, ಅನೇಕ ವರ್ಷಗಳ ಹಿಂದೆ ಇದು ಪ್ರಾರಂಭವಾಗಿ ಕೊನೆಗೆ ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೂ ಕೂಡ ಬಹಳಮಟ್ಟಿಗೆ ವಿಮರ್ಶೆಯಾಗಿದೆ. 1965ನೇ ಇಸವಿಯಲ್ಲಿ ನಮ್ಮ ಸರ್ಕಾರ ಇದರ ಪರ್ಯಾಲೋಚನೆಮಾಡಿ ಭೂಮಿಯ ಗ್ರಾಸ್ ಪ್ರೊಡ್ಯೂಸ್‌ನಲ್ಲಿ ಸೇಕಡ $\frac{1}{4}$ಕ್ಕೆ ಬದಲಾಗಿ ಸೇಕಡ 4ರಂತೆ ತೆಗೆದುಕೊಂಡು ಸುಧಾರಣೆ ಮಾಡಬೇಕೆಂಬುದಾಗಿ ತೀರ್ಮಾನ ತೆಗೆದುಕೊಂಡು, ಅದಾದಮೇಲೆ ಒಂದು ಹೇಳಿಕೆ ಕೊಟ್ಟು ಬಹಳ ಮಟ್ಟಿಗೆ ರೈತರಿಗೆ ಈ ಕಂದಾಯ ಹೊರೆ ಕಡಿಮೆಮಾಡುತ್ತೇವೆಂದು ಹೇಳಿದರು. ಅಲ್ಲಿಂದ ಇವರು ವಿಮರ್ಶೆ ಪ್ರಾರಂಭ ಮಾಡಿದ್ದಾರೆ. ಇವರಿಗೆ ನಿರ್ದಿಷ್ಟ ಅಭಿಪ್ರಾಯವಿಲ್ಲ, ಧೋರಣೆ ಇಲ್ಲ. ಅವೆಲ್ಲವೂ ಗಾಳಿಗೆ ಹೋದ ಹಾಗೆ ತೂರಿಕೊಂಡು ಹೋಗುತ್ತಿವೆ. ಅಂದಮೇಲೆ ಸರ್ಕಾರ ಸರ್ಕಾರವಾಗಿ ಕೆಲಸ ಮಾಡುತ್ತಾ ಇಲ್ಲ. ತನ್ನ ನಿರ್ದಿಷ್ಟ ಧೋರಣೆ ಏನೆಂಬುದನ್ನು ಜನತೆಯ ಮುಂದೆ ಇಟ್ಟಿಲ್ಲ. ಇಡುವುದಕ್ಕೆ ಹಿಂಜರಿಯುತ್ತಾ ಇದ್ದಾರೆ. ಇವರದು ಕಾಲಕಾಲಕ್ಕೆ ಬಂದಂತೆ, ಬಾಯಿಗೆ ಬಂದಂತೆ ಭಾಷಣಗಳನ್ನು ಮಾಡುವ ಧೋರಣೆಯೇ ವಿನಾ, ಭೂಸ್ವಾಮ್ಯ ಪದ್ಧತಿಯಲ್ಲಿ, ಭೂಸುಧಾರಣೆ ಪದ್ಧತಿಯಲ್ಲಿ, ಭೂಸುಧಾರಣೆಯಲ್ಲಿ, ಭೂಉಪಯೋಗ ಪ್ರಶ್ನೆಯಲ್ಲಿ ಇವರಿಗೆ ಏನಾದರೂ ಒಂದು ನಿರ್ದಿಷ್ಟವಾದ ಅಭಿಪ್ರಾಯ ಇದೆಯೇ? ತಾ. 3-2-1967ರಲ್ಲಿ ಮುಖ್ಯ ಮಂತ್ರಿಗಳು ಈ ದೇಶದ ಮುಂದೆ ಚುನಾವಣೆ ಪ್ರಚಾರ ಮಾಡಿಕೊಂಡು ಹೋದರು. ಇವರು ಹೊಳೇನರಸೀಪುರದಲ್ಲಿ ತಾ 3-2-1967ರಲ್ಲಿ ಚುನಾವಣೆ ಪ್ರಚಾರ ಮಾಡಿದಾಗ, ಇದು ಹಳೆಯ ಕಂದಾಯ ಪದ್ಧತಿ, ಈ ಭೂಸ್ವಾಮ್ಯ ಪದ್ಧತಿಯನ್ನು ರದ್ದು ಮಾಡುತ್ತೇವೆಂದು ಇಡೀ ದೇಶದ ರೈತರ ಮುಂದೆ ಘೋಷಣೆ ಮಾಡಿದರು. ಇವರು ಚುನಾವಣೆಯಾಗಿ ಇಲ್ಲಿಗೆ ಬಂದಮೇಲೆ ನಮ್ಮ ಸರ್ಕಾರ ಯಾವಾಗಲೂ ಕೂಡ ಭೂಕಂದಾಯ ವಜಾ ಮಾಡುತ್ತೇವೆಂದು ಹೇಳಲಿಲ್ಲ. ತಾ|| 24-3-1967ರಲ್ಲಿ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಈ ಅಬಾಲಿಷನ್ ಆಫ್ ಲ್ಯಾಂಡ್ ರೆವಿನ್ಯೂ ಬಗ್ಗೆ ತಮ್ಮ ಭಾಷಣದಲ್ಲಿ ಈ ರೀತಿ ಹೇಳಿದ್ದಾರೆ. "I am glad to inform this House that the Government has taken a decision to abolish land revenue in its present form." ಆಮೇಲೂ ನೀವು ಆಡಿದಂಥ ಮಾತನ್ನು ಉಳಿಸಿಕೊಳ್ಳಲಿಲ್ಲ. ಕಾಲಕ್ಕೆ ಬಂದಹಾಗೆ ಕುಣಿಯುವುದು ನಮಗೆ ಸರಿಹೋಗುವುದಿಲ್ಲ. ಸರ್ಕಾರಕ್ಕೂ ಅದು ಸಲ್ಲುವುದಿಲ್ಲ. ಇನ್ನೊಂದುಸಾರಿ ಕಂದಾಯ ವಜಾ ಮಾಡುವ ವಿಷಯದಲ್ಲಿ ತೀರ್ಮಾನ ಕೊಡುವುದಕ್ಕೋಸ್ಕರ ಒಂದು ಕಮಿಟಿ ಏರ್ಪಾಡು ಮಾಡಿದ್ದರು. ಆ ಕಮಿಟಿಯವರ ಕೆಲಸ Inviting suggestions regarding land revenue abolition. ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು 1966ರಲ್ಲಿ ಬಡ್ಜೆಟ್ ಅಧಿವೇಶನ ಕಾಲದಲ್ಲಿ ಉತ್ತರ ಕೊಡುವಾಗ್ಗೆ, ಈ ಭೂಕಂದಾಯವನ್ನು ವಜಾ ಮಾಡುವ ವಿಷಯದಲ್ಲಿ ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ ಎಂದು ಹೇಳಿದರು. ಜನತೆಯ ಅಭಿಪ್ರಾಯ, ಈ ಸಭೆಯ ಅಭಿಪ್ರಾಯ, ಅಧಿಕಾರಿಗಳ ಸಲಹೆ ಮತ್ತು ನಿಮ್ಮ ಬೆಂಬಲಿಗರ ಅಭಿಪ್ರಾಯ ಎಲ್ಲವನ್ನೂ ತೆಗೆದುಕೊಂಡು 1967ರಲ್ಲಿ ನೀವು ಘಂಟಾಘೋಷವಾಗಿ ನಿಮ್ಮ ತೀರ್ಮಾನವನ್ನು ಹೇಳಿದ್ದೀರಿ. ಈ ತೀರ್ಮಾನವನ್ನು ತೆಗೆದುಕೊಳ್ಳಬೇಕಾದರೆ, ಬೇಜವಾಬ್ದಾರಿಯಿಂದ ತೆಗೆದುಕೊಳ್ಳಲಿಲ್ಲ, ಆತುರಾತುರವಾಗಿ ತೆಗೆದುಕೊಳ್ಳಲಿಲ್ಲವೆಂದು ಹೇಳುತ್ತಾರೆ. ಬಹಳ ಕೂಲಂಕಷವಾಗಿ ಚರ್ಚೆಮಾಡಿ ಇಂತಹ ತೀರ್ಮಾನವನ್ನು

ತೆಗೆದುಕೊಂಡ ಕೆಲವೇ ದಿವಸಗಳಲ್ಲಿ, ನಾವು ಭೂಕಂದಾಯ ವಜಾ ಮಾಡಲಿಕ್ಕಾಗುವುದಿಲ್ಲವೆಂದು ಹೇಳಿದರೆ ಇದು ಸರ್ಕಾರವೋ ಅಥವಾ ಮಾರ್ಕೆಟ್ಟಿನಲ್ಲಿ ನಾನೂ ನೀವೂ ಮಾತನಾಡತಕ್ಕ ವಿಷಯವೋ ತಾವು ಹೇಳೋಣವಾಗಲಿ. ಸರ್ಕಾರ ಅಂದಮೇಲೆ ಅದಕ್ಕೆ ತಕ್ಕಂತೆ ಕೆಲವು ಸ್ಟ್ಯಾಂಡರ್ಡ್‌ಗಳು ಇವೆ. ಆಡಿದ ಮಾತು, ಕೊಟ್ಟ ನಂಬಿಕೆ ಹಾಗೂ ವಚನಗಳನ್ನು ಉಳಿಸಿಕೊಳ್ಳತಕ್ಕ ಅವಶ್ಯಕತೆ ಇದೆ. ಸಮಯ ಬಂದಂತೆ ಕುಣಿಯುವುದಕ್ಕೆ ಸರ್ಕಾರ ಎಂದು ಹೇಳುವುದಿಲ್ಲ. ಈ ತೀರ್ಮಾನ ತೆಗೆದು ಕೊಳ್ಳುವುದಕ್ಕೆ ಮುಂಚೆ ಇಡೀ ದೇಶದ ಪ್ರತಿನಿಧಿಗಳನ್ನು ಕರೆಸಿ, ಕೇಳಿ ವಿಚಾರಮಾಡಿ, ರಾತ್ರೋ ರಾತ್ರಿ ಬೆಳಕು ಹರಿಯುವುದರೊಳಗೆ ಕಂದಾಯವನ್ನು ವಜಾ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರೆ, ನಿಮಗೆ ಏನು ಶಿಕ್ಷೆ ವಿಧಿಸಬೇಕು ? ಶಿಕ್ಷೆ ಅಂದರೆ ಕಾರಾಗೃಹ ಶಿಕ್ಷೆಯಲ್ಲ. ನೀವೇ ಹೇಳಿ, ಯಾವ ತರಹ ಶಿಕ್ಷೆ ಬೇಕೆಂದು. ಅದನ್ನೇ ಕೊಡೋಣ.

ಶ್ರೀ ಎಚ್. ವಿ. ಕೌಜಲಗಿ (ಕಂದಾಯ ಶಾಖೆಯ ಮಂತ್ರಿಗಳು).—ಈಗ ಎಲೆಕ್ಷನ್ ಬಂತು. ಅಲ್ಲೇ ಶಿಕ್ಷೆ ಏನೆಂಬುದು ಗೊತ್ತಾಗುತ್ತದೆ.

SRI H. M. CHANNABASAPPA.– Democracy has both bright and dark aspects and I do not want to go into the large area covered by the dark aspects. I would only say that a good cause, a just cause and a cause by which I and the Revenue Minister swear is going to be defeated today or tomorrow by this brute majority. This is one of the dark aspects of democracy. ಹಿಂದೆ ರೀ ಸೆಟ್ಲ್‌ಮೆಂಟ್ ಮಸೂದೆ ಈ ಸಭೆಯ ಮುಂದೆ ಬಂದಾಗ ಏತಕ್ಕೆ ಒಪ್ಪಿಗೆಯನ್ನು ಕೊಟ್ಟಿರಿ ?

SRI D. M. SIDDAIAH.—On the assurance given.

SRI H. M. CHANNABASAPPA.—We have lived enough by the assurances of your friends. Assurances given by a Government which has no value for its assurances and which has ceased to be Government, which has no semblance of Government, which cannot be called Government and which has not got any respect for its own assurances, cannot be accepted by anybody. This is a Government which has no respect for its own words and still you have got the courage to call it Government. ಈ ಭೂಕಂದಾಯದ ಬಗ್ಗೆ ಒಂದು ನಿರ್ದಿಷ್ಟವಾದ ಧೋರಣೆ ಇಲ್ಲ ಎಂಬುದು ಗೊತ್ತಾಗುತ್ತದೆ. ಕಂದಾಯದ ವಿಷಯದಲ್ಲಿ ಬಾಯಿಗೆ ಬಂದಹಾಗೆ ಹೇಳುವುದು ಸರಿಯಲ್ಲ. ಯೋಗ್ಯವಲ್ಲ, ಗೌರವವಲ್ಲ. ಇವೊತ್ತೂ ಕೂಡ ಸರ್ಕಾರದವರು ತಮ್ಮ ಭಾಷಣವನ್ನು ಉಳಿಸಿ ಕೊಳ್ಳಬೇಕಾದರೆ ಆಡಿದ ಮಾತನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಭೂ ಕಂದಾಯದ ವಿಷಯದಲ್ಲಿ, ಭೂಸ್ವಾಮ್ಯ ವಿಷಯದಲ್ಲಿ ಒಂದು ಕ್ಲಿಯರ್ ಕಟ್ಟಾದ ಅಭಿಪ್ರಾಯ ನಿಮಗೆ ಇಲ್ಲ. ಈ ರೀತಿ ಮಾಡಬೇಕು, ನಿಮ್ಮ ಗುರಿ ಇಂಥಾದ್ದು, ನಿಮ್ಮ ಧೋರಣೆ ಇಂಥಾದ್ದು ಎಂಬುದು ನಿಮ್ಮ ಮನಸ್ಸಿನಲ್ಲಿ ಇಲ್ಲದೇ ನೀವೇನೂ ಮಾಡುತ್ತೀರಿ ? ನೀವು ಕೋಟಿ ಕೋಟಿ ಜನರ ಜೀವನದ ಮೇಲೆ ನರ್ತನ ಮಾಡುತ್ತಿದ್ದೀರಿ. ಇದು ಹೆಚ್ಚು ಕಾಲ ನಡೆಯುವುದಿಲ್ಲ. ಇವೊತ್ತು ನಿಮಗೆ ಸಲಹೆ ಮಾಡತಕ್ಕ ಸರ್ಕಾರಿ ಅಧಿಕಾರಿಗಳು ಮತ್ತು ನೀವು ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ. ರಾಜ್ಯದ ಆಡಳಿತವನ್ನು ನಡೆಸುವುದಕ್ಕೆ ನಿಮಗೆ ಎಲ್ಲಾ ಸೌಕರ್ಯಗಳನ್ನು ಕೊಟ್ಟಿದೆ. ಸಂಬಳ ಸಾರಿಗೆಗಳನ್ನು ಕೊಡುತ್ತಿದೆ. ದೊಡ್ಡ ದೊಡ್ಡ ಉನ್ನತ ಅಧಿಕಾರಿಗಳನ್ನು ಸಹಾಯಕ್ಕೆ ಕೊಟ್ಟಿದೆ. ನೀವು ಏನು ಮಾಡುತ್ತಿದ್ದೀರಿ, ರೀಸೆಟ್ಲ್‌ಮೆಂಟಿನಲ್ಲಿ ತುಂಬಾ ಅನ್ಯಾಯ ವಾಗಿದೆ ಎನ್ನುವುದನ್ನು ನೀವು ಒಪ್ಪಿಕೊಂಡಿದ್ದೀರಿ, ಅದಕ್ಕೋಸ್ಕರ ಈ ತಿದ್ದುಪಡಿ ಮಸೂದೆಯನ್ನು ಈ ಸಭೆಯಮುಂದಿಟ್ಟು ಇದಕ್ಕೆ ಈ ಸಭೆಯ ಒಪ್ಪಿಗೆಯನ್ನು ಪಡೆಯಬೇಕು ಎಂದು ಹೇಳುವಾಗ ಇದರಲ್ಲಿ ದೋಷಪೂರಿತ ಅನ್ಯಾಯಗಳು ಆಗಿವೆ, ಆದ್ದರಿಂದ ಇದನ್ನು ಈ ಸಭೆಯಮುಂದೆ ಇಟ್ಟಿದ್ದೇವೆ, ಇದನ್ನು ಪುನರ್‌ವಿಮರ್ಶೆ ಮಾಡಬೇಕು ಎಂದು ಏತಕ್ಕೆ ಹೇಳಲಿಲ್ಲ ? ಹೀಗೆ ಪದೇ ಪದೇ ಸರ್ಕಾರ ತಪ್ಪು ಮಾಡುತ್ತಾ ಇರುವುದನ್ನು ನೋಡುವಾಗ ಭೂಕಂದಾಯದ ಬಗ್ಗೆ ಸರ್ಕಾರಕ್ಕೆ ಒಂದು ನಿರ್ದಿಷ್ಟವಾದ ಧೋರಣೆ ಇಲ್ಲ ಎಂಬುದು ಗೊತ್ತಾಗುತ್ತದೆ. ನಿಮಗೆ ಚರ್ಮ ಮಂದವಾಗಿದ್ದರೆ ಎಂತಹ ಸೂಜಿಯಿಂದ ಚುಚ್ಚಿದರೂ ನಿಮಗೆ ನೋವು ಆಗುವುದಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. Your thoughts are confused. Your

(SRI H. M. CHANNABASAPPA)

thoughts on the land question and land taxation are so clumsy that you have not the patience to apply your mind to the question. 19th September 1968 ರಲ್ಲಿ ಒಂದು ಸರ್ಕ್ಯುಲರ್ ಕಳುಹಿಸಿದ್ದಾರೆ. ಅದರಲ್ಲಿ Garden land-rain fed coming under Government source, new dry rates, not coming under Government source; new wet rates. ಎಂದು ಹೇಳಿದ್ದಾರೆ. ಆಮೇಲೆ 20-11-68 ರಲ್ಲಿ ಮತ್ತೊಂದು ಸರ್ಕ್ಯುಲರ್ ಹೊರಡಿಸಿ ಅದರಲ್ಲಿ Rain fed wet land not coming under Government source, old rate. ಎಂದು ಹೇಳಿದ್ದಾರೆ. ಹೀಗೆ ಸರ್ಕ್ಯುಲರ್ ಮೇಲೆ ಸರ್ಕ್ಯುಲರ್ ಕಳುಹಿಸಿದ್ದಾರೆ. ಇದರಲ್ಲಿ ಕ್ಲಿಯರ್ ಕಟ್ ಅದ ಅಂಡರ್‌ಸ್ಟ್ಯಾಂಡಿಗ್ಸ್ ಏನಾದರೂ ಇದೆಯೆ? ಇದರ ಬಗ್ಗೆ ಸಮಗ್ರವಾಗಿ ಪರಿಶೀಲನೆ ಮಾಡಿ ಏನು ಎನ್ನತಕ್ಕಂಥಾದ್ದನ್ನು ತಿಳಿದುಕೊಂಡಿದ್ದೀರಾ? ನಿಮ್ಮ ಸರ್ಕ್ಯುಲರ್‌ನಿಂದ ಇಡೀ ದೇಶದಲ್ಲಿರತಕ್ಕ ರೈತರ ಮನಸ್ಸಿನಲ್ಲಿ ದಿಗ್ಭ್ರಾಂತಿಯುಂಟಾಗಿದೆ. ಅವರಿಗೆ ಅನ್ಯಾಯ ಮಾಡುತ್ತಿದ್ದೀರಿ. ಇದು ಸರಿಯಲ್ಲ. ಈ ವಿಚಾರದಲ್ಲಿ ಯಾರಾದರೂ ರಿಟ್ ಪಿಟಿಷನ್ ಹಾಕಿದರೆ ಅವರಿಗೆ ಕಂದಾಯವನ್ನು ಮಾಫಿ ಮಾಡುತ್ತೇವೆ ಎಂದು ಹೇಳುತ್ತೀರಿ, ಸರ್ಕಾರದ ಸೌಜನ್ಯ ಎಷ್ಟರಮಟ್ಟಿಗೆ ಇದೆ ಎಂಬುದು ಇದರಿಂದ ಗೊತ್ತಾಗುತ್ತದೆ. ಈ ಸರ್ಕ್ಯುಲರ್‌ಗಳನ್ನು ಇಷ್ಯೂ ಮಾಡುವಾಗ, ಇದಕ್ಕೆ ಸೈನ್ ಹಾಕುವಾಗ ಸ್ವಲ್ಪ ಮನಸ್ಸಿಟ್ಟು ಯೋಚನೆ ಮಾಡಿದ್ದೀರಾ? ಈ ರೆವಿನ್ಯೂ ಖಾತೆಯನ್ನು ವಹಿಸಿಕೊಂಡಿರತಕ್ಕ ಮಾನ್ಯ ಮಂತ್ರಿಗಳು ಒಳ್ಳೆಯ ವಕೀಲರಿದ್ದಾರೆ. ಅವರಿಗೆ 30 ವರ್ಷಗಳ ಅನುಭವಿಗಳಿದ್ದಾರೆ. ಅವರು ಏತಕ್ಕೆ ಈ ರೀತಿ ಮಾಡಿದರು? ಈ ವಿಷಯದಲ್ಲಿ ಸರ್ಕಾರದವರಿಗೆ ಒಂದು ನಿರ್ದಿಷ್ಟವಾದ ಅಭಿಪ್ರಾಯ ಇಲ್ಲ. ಒಂದು ನಿರ್ದಿಷ್ಟವಾದ ಧೋರಣೆ ಇವರಲ್ಲಿ ಇಲ್ಲ. ನಿಜವಾಗಿಯೂ ಇದು ಶೋಚನೀಯ. ಯಾವ ಯಾವ ಕಾಲಕ್ಕೆ ಏನು ಬರುತ್ತದೆ, ಹಾಗೆ ಸಮಯಕ್ಕೆ ಬಂದಹಾಗೆ ನಡೆದುಕೊಳ್ಳುತ್ತಾರೆ. ಭೂಮಿಯನ್ನೇ ಅವಲಂಬಿಸಿಕೊಂಡು ಜೀವನ ಮಾಡತಕ್ಕ ಕೋಟಿ ಕೋಟಿ ಜನಗಳ ಬಗ್ಗೆ ನೀವು ತಾತ್ಸಾರ ಮನೋಭಾವವನ್ನು ಹೊಂದಿದ್ದೀರೆಂಬುದು ಗೊತ್ತಾಗುತ್ತದೆ. ದೊಡ್ಡ ದೊಡ್ಡ ಕ್ಯಾಪಿಟಲಿಸ್ಟ್, ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳು ಏನಿದ್ದಾರೆ ಅವರ ವಿಷಯಗಳು ನಿಮಗೆ ಚೆನ್ನಾಗಿ ಗಮನದಲ್ಲಿರುತ್ತದೆ. ಬಡಪಾಯಿಗಳ ವಿಷಯಗಳು ನಿಮ್ಮ ಗಮನದಲ್ಲಿರುವುದಿಲ್ಲ. ಇದರಲ್ಲಿ ಯಾವ ಸೋಷಿಯಲ್ ಜಸ್ಟೀಸ್ ಇದೆ. ನಿಜವಾಗಿಯೂ ನೀವು ರೈತರಿಗೆ ತುಂಬಾ ಅನ್ಯಾಯ ಮಾಡಿದ್ದೀರಿ. 3-11-68ರಲ್ಲಿ ಹೊರಡಿಸಿದ ಒಂದು ಸರ್ಕ್ಯುಲರ್‌ನಲ್ಲಿ Dry lands concerned in writ petition, old rates part payment, all other dry lands, new rates subject to double the old rate ಎಂದು ಹೇಳಿದ್ದಾರೆ. ಏತಕ್ಕೋಸ್ಕರ ಈ ತರಹ ಡಿಸ್‌ಕ್ರಿಮಿನೇಷನ್ ತೋರಿಸಿದ್ದೀರಿ. ರೈತರ ವಿಷಯದಲ್ಲಿ ಹೃದಯವಿರತಕ್ಕವರು ಬಹಳ ಕಡಿಮೆ. ಕೆಲವರು ಪ್ರಭಾವ ಇದ್ದರೂ ಪ್ರಭಾವ ಇಲ್ಲದಂತವರಾಗಿದ್ದಾರೆ.

[MR. SPEAKER in the Chair]

6-00 P.M.

ಒಬ್ಬರು ಮಾನ್ಯ ಸದಸ್ಯರು.—ತಾವು ವಕೀಲರಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ವಕೀಲರಲ್ಲವೇ ಎಂದು ಮಾನ್ಯ ಸ್ನೇಹಿತರು ಕೇಳಿದರು. ವಕೀಲತನವನ್ನು ಮಾಡುವುದು ಒಂದು ದುಡ್ಡಿಗೋಸ್ಕರ, ಇನ್ನೊಂದು ತತ್ವಕ್ಕೋಸ್ಕರ.

Mr. SPEAKER.—If one represents anybody with or without money, he is an Advocate.

Sri H. M. CHANNABASAPPA.—Advocacy for consideration and advocacy for public good! I am doing advocacy for public good. I need not be termed as an Advocate in the legal term.

Now, I come to the point. I have made it very clear through you to the Government to and through the Government to the whole nation that this Government has very clumsy ideas about land tax, land

policies and land utilisation policy. It has led the whole issue into pell mell. It has created a confused state of affairs, amongst the officers, farmers, tax-payers and also all others in this country. Shall I say it is because of negligence or shall I say it is because of irresponsibility ? What shall I say ? You please suggest to me and I am prepared to accept it.

Now, before I pass on to the basic question, I will just say a few words on the merits of my friend's amendment before the House. What does the amendment say ? ಸಾಧಾರಣೆ ಮಾಡುವುದಕ್ಕೋಸ್ಕರ ಈ ಅಮೆಂಡ್‌ಮೆಂಟನ್ನು ತಂದಿದ್ದಾರೆಂದು ಹೇಳುತ್ತಾರೆ.

New Section 114A (a) says :

> "if at any time after the introduction of a settlement of land revenue under section 122, the State Government, for reasons to be recorded in writing, is of the opinion that in any zone, the settlement of land revenue requires modification, it may, by order, direct the revision of settlement of land revenue............"

This is unjust and therefore, it must be modified. ಒಂದು ಪ್ರಾಂತ್ಯದ ರೈತರು ತಮಗೆ ಅರ್ಜಿ ಕೊಡುತ್ತಾರೆಂದು ಇಟ್ಟುಕೊಳ್ಳೋಣ. ರೀಸೆಟ್ಲ್‌ಮೆಂಟ್ ಮಾಡಿರುವುದು ಸರಿಯೇ, ತಪ್ಪೇ, ಅದು ಮಾಡಿಫೈ ಆಗಬೇಕೇ, ಇಲ್ಲವೇ ಎಂದು ಜಡ್ಜ್‌ಮೆಂಟ್ ಕೊಡುವವರು ಯಾರು ? ಪ್ರೈಮಾ ಫೆಸಿ ಕೇಸ್ ಇದೆ ಎಂದು ಹೇಳುವವರು ಯಾರು ? ನಾವೂ ನೀವೂ ಪಾರ್ಟಿಗಳು. ಹಿಂದೆ ಅನ್ಯಾಯವಾಗಿ ರಿಸೆಟ್ಲ್‌ಮೆಂಟ್ ಮಾಡಿರುವವರು ನೀವು, ಅರ್ಜಿ ಹಾಕಿರುವವರು ನಾವು. ರಿಸೆಟ್ಲ್‌ಮೆಂಟ್ ಬಹಳ ಅನ್ಯಾಯವಾಗಿದೆ ಎಂದು ನಿಮ್ಮ ಘನ ಚಿತ್ತಕ್ಕೆ ಬಂದರೆ ಆಗ ರಿಸೆಟ್ಲ್‌ಮೆಂಟನ್ನು ಪುನರ್ವಿಮರ್ಶೆ ಮಾಡಬೇಕೆಂದು ಹೇಳಬಹುದೇ ವಿನಹ ನಿಮ್ಮ ಚಿತ್ತಕ್ಕೆ ಪುನರ್ವಿಮರ್ಶೆ ಮಾಡುವ ಮನಸ್ಸು ಇಲ್ಲ.

You cannot both be a prosecutor as well as a judge.

MR. SPEAKER.—Hon. Member knows much of law.

SRI H. M. CHANNABASAPPA.—Thank you for the compliment. I put to you a very straight question: do you think it is fair, when an aggrieved party, against your decision, approaches you for relief? Whether there is a *prima facie* case or not, there should be somebody else who can see through things dispassionately and say, here is a case. Now, according to the amendment, if you say there is no justification, there is an end of the matter. What kind of amendment is this? What kind of justice is this ? Therefore, on the very face of it, it requires to be thrown out. It is one-sided.

MR. SPEAKER.—Member may please finish his speech within ten minutes.

SRI H. M. CHANNABASAPPA.—Is it fair on your part to choose to be both the prosecutor as well as the judge? When a disputed point is there between you and him, I believe, somebody else should say that the dispute is valid, there is *prima facie* case or not, and then you can appoint such officers as you deem fit to go into the matter. It is a serious lacuna which cannot be accepted in any sense of jurisprudence. Sir, there is a doubt in my mind and it is for the Hon. Minister to clear it. It is said that pending revision of the rates of resettlement of a case

(SRI H. M. CHANNABASAPPA)

which comes for consideration, the Government may collect at rates prevalent before resettlement. Whether it means enhanced rate or original rate, I want to know. If you clarify, there is no need for me to go further. If the Hon. Minister for Revenue clears the doubt, I will stop at that.

SRI K. PUTTASWAMY.—Sir, I think, I can clarify the doubt the hon. Member is entertaining. If the Government orders reclassification or fresh classification, then in that zone, revenue at the o'd rate would be collected.

SRI H. M. CHANNABASAPPA.—Whether it is resettlement rate...

SRI K. PUTTASWAMY.—Not at the standard rate which has been settled by this Assembly in 1965, on the basis of which it has been calculated.

SRI H. M. CHANNABASAPPA.—I hope it is not part rate.

SRI K. PUTTASWAMY.—Sir, under the Land Revenue Act when Government orders fresh settlement, the recommendation of the Government on the report of the Resettlement Officers, will have to be placed before this House.

SRI H. M. CHANNABASAPPA.—Now Sir, I come to the point whether this is a land tax or land rent. For historical reasons as detailed by Mr. Gopala Gowda yesterday, this has come to remain as land rent, so far. Even the Hon. Minister has accepted it as land rent. Now, I tell the Government and the members on the other side through the Hon. Speaker, that a time has come for a little re-thinking in this matter. It might have been alright in good old days when these Chieftains and Rajas and Maharajas wanted monies for their own purposes. But now after the advent of freedom, our concept of land ownership, land utilisation, land policy, etc., has changed. The tiller of the land is the owner to day. You must first decide who is the owner. Government has got only control and power to regulate the utilisation of land. But the land is to belong to the person who tills it. Government has the power to regulate the utilistation of land in such a manner that it is not go detrimental to the interest of the nation and the community as a whole. Subject to that the registered occupant of the land will be the owner of the land as in the land Revenue Code. The Land Revenue Code provides so many sections, and I do not have time to read all of them Sir, take for instance, section 67 where in it is stated that public roads, lands etc., which are not the property of others belong to Government. By implication you have transferred the ownership either by sale, or by grant or by upset price sale to the registered occupant. This makes it clear that he has a right to the land, subject to the regulations and rules and procedures the Government prescribes. The occupant has the right to transfer, to dig wells and to do anything he wants and utilise the land for the benefit of himself and of the

nation. If that position is accepted the question of land rent does not arise. You have no right to call for land rent on a land which belongs to others.

SRI K. PUTTASWAMY.—It is a tax.

SRI H. M. CHANNABASAPPA.—When you say it is a tax, your resettlement will cut at the very root. It is said in the resettlement about 1/25th of the gross produce has to be given to the Government. What does it mean?

Well, Sir now there is a conflict here. The Hon. Revenue Minister has said it is a land rent. The Hon. Minister for Parliamentary Affairs says it is a tax. Sri D. M. Siddaiah, says it is a very very complicated question. Then Sri K. H. Srinivas says it is 'yaksha prashne'. Sir, it is neither 'yaksha prashne' nor a complicated question. We have got to change our conception, our system and our attitude towards this problem. When you say it is a tax, immediately, Land Revenue Code will have to be completely over-hauled and amended to suit the present situation. I call upon the Government to bring a comprehensive amendment to this Bill providing for all consequential changes if the land rent is termed as land tax. This is the first thing.

Secondly, it is very clear that the State has got the overall control over the lands—the rights in and over the lands even the Central Government has kept the powers of taxation on lands within the purview of the State Government. Wherever there is the question of agricultural income-tax, utilisation of land and its policies, they have been kept within the exclusive purview of the State Government. Therefore, the State Government should apply its mind. It is not at all either a 'yaksha prashne' or a complicated matter. The State Government need not plead that somebody else has to solve this problem. The State Government should apply its mind and it has full powers for settling all problems of lands, its utilisation, taxation policies, etc. I am not pleading here on behalf of the people who say it is land rent or on behalf of the people who argue it as a tax. But the Government must be clear in their mind.

Then, Sir, when it is termed as a tax, where is social Justice? Yo call upon a man who wants to have about an acre or two to pay tw rupees or five rupees. You have given an exemption saying that . person earning up to Rs. 3,000 in public services need not pay even a single paisa to the State Exchequer. Why this discrimination in this taxation? If it is a tax, straightaway you can enunciate it. Why did you collect surcharge on the tax collected? You have collected so much of surcharge. This issue has complicated the whole matter.

MR. SPEAKER.—It is time the hon. Member will please finish his speech.

SRI H. M. CHANNABASAPPA.—You can straightaway say 'please sit down'. But please do not treat me like a child. I need no teaching in this respect.

Mr. SPEAKER.—It is not the question of treating any member as a child. But it is the question of time that comes in the way. The hon. Member has already taken 40 minutes.

Sri H. M. CHANNABASAPPA.—Yesterday, you allowed Sri Gopala gowda to speak for about four hours, and today you are asking me to finish it early. I do not want to be played with like that.

Mr. SPEAKER.—Please finish within 5 minutes.

Sri H. M. CHANNABASAPPA.—I do not want to enter into an argument. You are the custodian of descipline here. Unnece sarily you are drawing me into a discussion.

Sir, it is not very difficult for you to take a decision that the land belongs to the State primarily and subject to certain regulations to its citizens. You make a clear-cut declaration that the amount of money that you have been collecting is not rent which is used to be from time immemorial but a tax governed by the canons of taxation. Has the Government got the guts to take to socialism? Is the Government prepared to nationalise the entire land in the State? I think they are not prepared to see that the land is nationalised and managed properly. But they want to stick to this method of taxation and the entire officers want to put the farmers into trouble. This land revenue as accepted by you should be abolished and replaced by land tax. This land tax shall be governed by the canons of taxation. When once that is done all other problems get solved automatically.

Sir, what kind of taxation is to be proposed? You can introduce agricultural income-tax. I may say that the agricultural income-tax is a problem. Many people do not want it. In a socialistic State, income of Rs. 3,000 may be exempted from taxation. Some people who are having only dry lands to some extent must be exempted. If such exemptions are given most of the farmers will get relief. Those who are having lands which are yielding an income of more than Rs. 3,000 may be taxed. But do not allow the officers to harass the poor people while assessing their income. Adequate compensation must be provided for those who are already taxed over and above a limit. You can get people who are capable of paying agricultural income-tax. Usually they are escaping from your grip. Unnecessarily the poor people are being harassed. We must consider the present situation but not the past. Past is past and we should not take into account the previous position of the ryots. Many people come and argue—'make it double the old rate and everybody will be satisfied'. It is not the question of quantum of money, but the question of principle that must be followed. You cannot tax a man who is incapable of paying. Skill is required to formulate a policy which satisfies all. Men who are capable of paying tax may be taxed. Men who are getting an income of Rs. 2 lakhs or 3 lakhs are excepted from the tax and you are taking on poor people who are incapable of paying. This is not socialism. The people will be satisfied if you do not tax them and those who are actually struggling hard for their existence. The people would be quite happy if you

tax the people who are getting an income of lakhs and lakhs of rupees. You take it from me that a revolution will take place if the ryots are dissatisfied. If the peasantry are dissatisfied you will be nowhere and you will be finished. If a revolution takes place, it knows no end. We do not know when it is going to start. Most of the members here are farmers. They know the economic condition of the ryots. I don't mind paying agricultural income tax. I am prepared to pay that.

4-30 P.M.

ಶ್ರೀ ಕೆ. ಪ್ರಭಾಕರ.—ರೈತರು ಸಹಾ ನೂರಾರು ವರ್ಷಗಳಿಂದ ಕಷ್ಟಪಟ್ಟಿದ್ದಾರೆ. ಅವರು ಇದುವರೆಗೆ ಯಾವ ದಂಗೆಯೂ ಏಳಲಿಲ್ಲ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಅದನ್ನೇ ಬ್ರಿಟಿಷರು ಹೇಳುತ್ತಾ ಇದ್ದರು. ನಿಮಗೆ ಸ್ಕೂಲುಗಳನ್ನು ಕೊಟ್ಟಿದ್ದೇವೆ, ನಿಮಗೆ ಸ್ಕೂಲುಗಳನ್ನು ಕೊಟ್ಟಿದ್ದೇವೆ. ನೀರು ಕೊಟ್ಟಿದ್ದೇವೆ, ಮದುವೆ ಆಗುವುದಕ್ಕೆ ಪರ್ಮಿಷನ್ ಕೂಡ ಕೊಟ್ಟಿದ್ದೇವೆ ಎಂದು ಹೇಳುತ್ತಾ ಇದ್ದರು. These are all arguments which have no value in the present context. The promise that was made previously was:

> "I am glad to inform the Hon'ble Members that the Government have taken a decision to abolish land revenue in its present form."

ಶ್ರೀ ಬಿ. ರಾಚಯ್ಯ (ವ್ಯವಸಾಯ ಶಾಖೆಯ ಮಂತ್ರಿಗಳು).—ಸ್ವಾಮಿ, ಸರ್ಕಾರ ನಡೆಸತಕ್ಕಂಥವರು ನಮ್ಮ ಪಾರ್ಟಿಯಲ್ಲಿ ಮೆಜಾರಿಟಿ ತೆಗೆದುಕೊಳ್ಳದೆ ಬಿಲ್ ಪಾಸು ಮಾಡುವುದಕ್ಕಾಗುತ್ತದೆಯೇ ?

Sri H. M. CHANNABASAPPA.—If this is the kind of attitude on the part of the Agriculture Minister, it is unbecoming. Mr. Rachiah for whom I have so much respect for his integrity and sincerity, suffers from forgetfulness.

Mr. SPEAKER.—The member's time is over. He has taken nearly one hour.

Sri H. M. CHANNABASAPPA.—Now that the Speaker has drawn my attention, I am closing my speech. I would only appeal to the Hon'ble Minister Sri Koujalgi, who is in charge of this Bill. This is not a comprehensive Bill which he promised. A Comprehensive Bill taking into consideration all the defects and deficiencies, should have been brought. Government today agree that it is a tax and not rent and the entire land revenue code is based on the conception that the land revenue that we are collecting is 1/16, or 1/25 or 1/4—it is a percentage of the gross income which has come in from time immemorial into practice. Knowing fully-well that it is a tax and not rent, why have you brought this clumsy Bill which has absolutely no relevance to what they professed earlier.

Therefore I would request you before it is too late, to withdraw it. In pursuance of what you yourself have committed, please bring in a comprehensive Bill providing for all contingencies and then we will be very glad to discuss and help you in passing the Bill. One thing, I want to make it clear and amply clear to you is, the farmer of today is

(SRI H. M. CHANNABASAPPA)

not the farmer of old. You Ministers are moving in a different atmosphere altoghter and you are not able to feel the pulse of the peasantry. The farmers are today seeing how people with black money are building storey upon storey in cities. They have also started organising not only in Mysore but all over India. In Mysore itself, I tell you they are holding a meeting tomorrow, at 10 O' clock. My Hon'ble friend Sri Devaraj Urs has called for a meeting of all farmers to discuss matters of importance to agriculturists and the economic problems of farmers. Therefore, I am going to givs you a hint that danger is ahead. If you sleep over the matter, well, revolutions have already started on the heels of dissatisfaction, on the heels of famine, growing disaffection towards Governments who have not got sympathy towards the poor people, who have not got a sense of justice, sense of equity, and who do not have a socialistic approach to the problems of poor people. Therefore, this is the time when you have got to caution yourselves. If you do not heed this caution then hell upon your head. Therefore, Sir, I would appeal to you to please heed this caution and withdraw the Bill and bring in a comprehensive Bill, so that you can take this opportunity to make history in land revolution in this country, which would be a real step towards socialism in this country. Thank you.

MR. SPEAKER.—I have a duty to the House before I call upon the next Speaker. I want to inform the House that the time schedule for the completion of this Bill is 3–00 P.M. tomorrow. The consideration stage should be over at 3–00 P.M. The Hon. Minister will take one hour for reply. Then at 4–00 P.M. or earlier if possible, if the Minister takes less than one hour, this motion will be put to vote. Thereafter, till 6 O' clock, the Bill will be taken up clause by clause and then the final stage will be taken up. I suppose the House agrees with this proposal ? Is it the pleasure of the House that this proposal be adopted ?

HON. MEMBERS.—Yes.

†ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ ಭೂಕಂದಾಯ ಕಾನೂನಿಗೆ ತಂದಿರತಕ್ಕ ತಿದ್ದುಪಡಿಯ ಬಗ್ಗೆ ಮಾತನಾಡುವಾಗ ಭೂಕಂದಾಯ ಹಾಕುವ ವಿಚಾರ, ಅದರ ಚರಿತ್ರೆ ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ನಾವು ಕೇಳಿದ್ದೇವೆ. ಶ್ರೀಮಾನ್ ಚೆನ್ನಬಸಪ್ಪನವರ ವಾದದಲ್ಲಿ ಭೂಮಿಮೇಲೆ ಕೊಡತಕ್ಕದು ಗೇಣಿಯೋ ಅಥವಾ ತೆರಿಗೆಯೋ ಎನ್ನುವ ವಿಚಾರದಲ್ಲಿ ಅವರು ಒಂದಲ್ಲ, ಎರಡಲ್ಲ ಅನೇಕಸಲ ಈ ಸಭೆಯಲ್ಲಿ ಆ ಪ್ರಶ್ನೆಯನ್ನು ಹಾಕುತ್ತಲೇ ಇದ್ದಾರೆ. ಈ ರೀತಿಯಾಗಿ ಕೇಳುವುದರಲ್ಲಿ ಅವರು ಏನು ಒಂದು ತೀರ್ಮಾನಕ್ಕೆ ಬರಬೇಕೆಂದಿದ್ದಾರೆಂದರೆ ಜಮೀನು ಸರ್ಕಾರದ್ದೋ ಅಥವಾ ವ್ಯಕ್ತಿಗಳದ್ದೋ ಎಂದು. ಇದರ ಬಗ್ಗೆ ಆಗಿಂದಾಗ್ಗೆ ಕಾನೂನುಗಳು ಬದಲಾವಣೆಯಾಗುತ್ತಲೇ ಇವೆ. ಭೂಮಿ ಸೃಷ್ಟಿಯಾದಾಗ ಇದು ದೇವರಿಗೆ ಸೇರಿತ್ತು. ಮನುಷ್ಯ ಸೃಷ್ಟಿಯಾದ ಮೇಲೆ ತನಗೆ ಬೇಕಾದುದನ್ನು ಉತ್ತು, ಬೆಳೆಮಾಡಿ, ಉಪಯೋಗ ಮಾಡಿದ್ದರಿಂದ ಮನುಷ್ಯ ಅದರ ಸ್ವಾಮಿತ್ವ, ಅದರ ಅಧಿಕಾರ ಪಡೆದುಕೊಂಡ ಅನಂತರ ಪಾಳೆಗಾರರು, ದೊರೆಗಳು ಭೂಮಿ ತಮಗೆ ಸೇರಿದ್ದು ಎಂದು ಜನರಿಂದ ತೆರಿಗೆ ಕೊಡಿ ಎಂದು ಹೇಳಿ ತೆಗೆದುಕೊಂಡರು. ನಾವು 20ನೇ ಶತಮಾನದಲ್ಲಿದ್ದೇವೆ. ಭೂಮಿಯ ಮಾಲೀಕತ್ವ ಒಬ್ಬ ವ್ಯಕ್ತಿಗೆ ಸೇರಿದ್ದು ಎಂದು ಯಾರೂ ತಾತ್ವಿಕವಾಗಿ ಒಪ್ಪುವುದಿಲ್ಲ ; ಹಾಗೆ ಒಪ್ಪುವುದಕ್ಕೆ ಸಾಧ್ಯವೂ ಇಲ್ಲ. ಒಂದಲ್ಲ ಒಂದು ರೀತಿಯಿಂದ ಭೂಮಿಯ ಮಾಲೀಕತ್ವ ಸರ್ಕಾರ ಅಥವಾ ರಾಜ್ಯಕ್ಕೆ ಸೇರತಕ್ಕದು ಎಂದು ಹೇಳುತ್ತೇವೆ. ಆ ರೀತಿ ಕಾನೂನು ಮಾಡುತ್ತೇವೆ. ಇದರ ಬಗ್ಗೆ ದೊಡ್ಡದಾಗಿ ವ್ಯಾಖ್ಯಾನ

ಮಾಡಿ, ಇದಕ್ಕೆ ಗೇಣಿ ತೆಗೆದುಕೊಳ್ಳಬೇಕೇ ಅಥವಾ ತೆರಿಗೆ ತೆಗೆದುಕೊಳ್ಳಬೇಕೇ ಎಂದು ಚರ್ಚೆ ಮಾಡಿ, ತಿದ್ದುಪಡಿ ಮಸೂದೆಯನ್ನು ಚರ್ಚೆ ಮಾಡುವಾಗ ಈ ವಿಷಯ ತೀರ್ಮಾನವಾದ ಮೇಲೆ ಕಂದಾಯ ತೆಗೆದುಕೊಳ್ಳಬೇಕೇ ಅಥವಾ ಗೇಣಿ ತೆಗೆದುಕೊಳ್ಳಬೇಕೇ ಎನ್ನುವ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ಸಂದರ್ಭದಲ್ಲಿ ಒಂದು ವಿಚಾರ ನನಗೆ ಜ್ಞಾಪಕಕ್ಕೆ ಬರುತ್ತದೆ. ವಾಲ್ಟೇರ್ ಎಂಬ ಫಿಲಾಸಫರ್ ಒಂದು ಕಡೆ ಹೋಗುತ್ತಿದ್ದಾಗ ಒಂದು ದೇವ ಸ್ಥಾನದ ಬಳಿ ಎರಡು ಗುಂಪಿನ ಜನರು ಸೇರಿ ದೊಡ್ಡದಾಗಿ ಜಗಳವಾಡುತ್ತಿದ್ದರು. ಅವರ ಜಗಳವೇನೆಂದರೆ ದೇವಸ್ಥಾನದ ಒಳಗಡೆ ಹೋಗಬೇಕು ಎಂಬುದು. ಆದರೆ ಒಂದು ಒಂದು ಗುಂಪಿನ ಜನ ಬಲಗಾಲನ್ನು ಮೊದಲು ಒಳಗೆ ಹಾಕಿ ಪ್ರವೇಶ ಮಾಡಬೇಕು ಎಂದು ಹೇಳಿದರೆ ಇನ್ನೊಂದು ಗುಂಪಿನ ಜನ ಎಡಗಾಲನ್ನು ಮೊದಲು ಹಾಕಿ ಪ್ರವೇಶ ಮಾಡಬೇಕು ಎಂದು ಹೇಳುತ್ತಿದ್ದರು. ಬಲಗಾಲನ್ನು ಇಟ್ಟು ಹೋಗಬೇಕೆ ಅಥವಾ ಎಡಗಾಲನ್ನು ಮೊದಲು ಇಟ್ಟು ಹೋಗಬೇಕೇ ಎಂದು ಅವರಲ್ಲಿ ವಾದ ವಿವಾದ ನಡೆಯುತ್ತಿದ್ದ ಕಾಲದಲ್ಲಿ ಈ ಫಿಲಾಸಫರ್ ಹೋಗಿ ಅವರಿಬ್ಬರ ವಾದವನ್ನು ಕೇಳಿ ಒಂದು ಉಪಾಯವನ್ನು ಸೂಚಿಸಿದರು. ಏನೆಂದರೆ ಎಲ್ಲರೂ ಎರಡು ಕಾಲಿನಿಂದಲೂ ನೆಗೆದು ಒಳಗೆ ಹೋಗಿ ಎಂದು ಹೇಳಿದರು. ಅದನ್ನು ಎಲ್ಲರೂ ಒಪ್ಪಿ ಕೊಂಡು ಅವರು ಹೇಳಿದಂತೆಯೇ ಅವರೆಲ್ಲರೂ ಒಳಕ್ಕೆ ಹೋದರು. ಮಾನ್ಯ ಚನ್ನಬಸಪ್ಪನವರೂ ಹಾಗೆಯೇ ಗೇಣಿ ಎಂದಾದರೂ ತಿಳಿದುಕೊಳ್ಳಲಿ, ತೆರಿಗೆ ಎಂದಾದರೂ ತಿಳಿದುಕೊಳ್ಳಲಿ ಅಥವಾ ಎರಡೂ ಎಂದಾದರೂ ತಿಳಿದುಕೊಳ್ಳಲಿ. ಅವರು ಕೊಡಬೇಕಾದುದನ್ನು ಕೊಡುತ್ತ ಬಂದರೆ ಸಂತೋಷ. ಒಂದು ವೇಳೆ ಕೋರ್ಟಿಗೆ ಹೋಗುವುದಕ್ಕೆ ಇಷ್ಟಪಟ್ಟರೆ ಅಲ್ಲಿಯೇ ಇತ್ಯರ್ಥ ಮಾಡಿ ಕೊಳ್ಳಲಿ. ಯಾವುದೋ ರೀತಿಯಲ್ಲಿ ನಾವು ಕೊಟ್ಟುಕೊಂಡು ಬರುತ್ತಿದ್ದೇವೆ. ಯಾವುದೋ ಕಾಲ ದಲ್ಲಿ ಐದನೇ ಒಂದು ಭಾಗ ಇತ್ತು, ಆಮೇಲೆ ನಾಲ್ಕನೇ ಒಂದು ಭಾಗವಾಗಿರಬಹುದು, ಹತ್ತನೇ ಒಂದು ಭಾಗವಾಗಿರಬಹುದು, ಇದು ಕಾಲದಿಂದ ಕಾಲಕ್ಕೆ ರೂಪಾಂತರ ಹೊಂದಿಕೊಂಡು ಬಂದಿದೆ. 1964-65ರಲ್ಲಿ ಈ ಬಗ್ಗೆ ಕಾನೂನು ಮಾಡುವ ಮೊದಲು ಗ್ರಾಸ್ ಇನ್‌ಕಂ ಏನಿರುತ್ತದೆ ಅದರ ಆರೂಕಾಲು ಪರ್ಸೆಂಟ್ ಕಂದಾಯವಿರಬೇಕು ಎಂದು ಹೇಳಿದೆವು. ಆಮೇಲೆ ನಾವೇ ಯೋಜನೆ ಮಾಡಿ ಅದು ಜಾಸ್ತಿಯಾಗುತ್ತದೆ, ನಾಲ್ಕು ಪರ್ಸೆಂಟ್ ಸಾಕು ಎಂದು ಬದಲಾಯಿಸಿದೆವು. ಇದೆಲ್ಲ ತಿಳಿದೂ ಕಂದಾಯವೇ ಬೇಡ, 10 ಎಕರೆಗೆ ಒಳಪಟ್ಟಿರುವ ಭೂಮಿಗೆ ಕಂದಾಯವನ್ನು ತೆಗೆದು ಕೊಳ್ಳುವುದು ಬೇಡ, ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ತರೋಣ ಎಂದರೆ ಹಾಗೆಯೇ ಮಾಡ ಬಹುದು. ಆದರೆ ನನಗೆ ತಿಳಿದಮಟ್ಟಿಗೆ ಈ ತಿದ್ದುಪಡಿ ಮಸೂದೆಯನ್ನು ಏತಕ್ಕಾಗಿ ತರಲಾಗಿದೆ ಎಂದು ನಾವು ಪ್ರಸ್ತಾಪ ಮಾಡುವುದಾದರೆ ನಮ್ಮ ಪ್ರಶ್ನೆ ಸುಲಭವಾಗಿ ಬಗೆಹರಿಯುತ್ತದೆ.

ಶ್ರೀಮಾನ್ ಚನ್ನಬಸಪ್ಪನವರು ಈ ಮಸೂದೆ ಒಪ್ಪುತ್ತಾರೆಂದು ನನ್ನ ನಂಬಿಕೆ. ಒಂದು ವೇಳೆ ಒಪ್ಪಿಕೊಳ್ಳದೆ ಇದ್ದರೆ ಪರಿಣಾಮವೇನು? ಈಗಾಗಲೇ ಒಂದು ಕಾನೂನು ಇದೆ. ಅದರ ಪ್ರಕಾರ ನಾವು ಕೊಡತಕ್ಕ ಕಂದಾಯ ಕೆಲವು ತಾಲ್ಲೂಕುಗಳಲ್ಲಿ ಬಹಳ ಜಾಸ್ತಿಯಾಗಿದೆ. ಜಾಸ್ತಿಯಾಗಿದೆ ಯೆಂದು ಆ ಕಾನೂನು ಎಂದಿನಿಂದ ಜಾರಿಗೆ ಬಂತೋ ಅಂದಿನಿಂದ ನಾವು ಕೇಳಿಕೊಂಡು ಬರುತ್ತಿದ್ದೇವೆ. ಮಾನ್ಯ ಚನ್ನಬಸಪ್ಪನವರ ಕ್ಷೇತ್ರವಾದ ಪೆರಿಯಾಪಟ್ಟಣ, ಹುಣಸೂರು, ಕೃಷ್ಣ ರಾಜನಗರ, ಹೆಗ್ಗಡದೇವನಕೋಟೆ ಇವೆಲ್ಲವನ್ನೂ ಸೇರಿಸಿ ಒಂದು ಜೋನ್ ಎಂದು ಮಾಡಿದ್ದಾರೆ. ಅಲ್ಲಿ ಸ್ಟಾಂಡರ್ಡ್ ಕಂದಾಯ ಹಿಂದೆ ಏನಿತ್ತು, ಈಗ ಎಷ್ಟು ಆಗಿದೆ ಎನ್ನುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಇದನ್ನು ನಾವು ಮೊದಲು ಖುಷ್ಕಿ ಜಮೀನಿಗೆ ಸಂಬಂಧಪಟ್ಟ ಹಾಗೆ ಮಾತ್ರ ಹೇಳುತ್ತಿದ್ದೇನೆ. ತರಿ, ಬಾಗಾಯಿತು ಇವುಗಳನ್ನು ಅನಂತರ ತೆಗೆದುಕೊಳ್ಳುತ್ತೇನೆ. ರೀಸೆಟಲ್‌ಮೆಂಟಿಗೆ ಪೂರ್ವಭಾವಿಯಾಗಿ ಇದ್ದಂಥ ಸ್ಟಾಂಡರ್ಡ್ ರೇಟ್ ಹುಣಸೂರು ತಾಲ್ಲೂಕಿನಲ್ಲಿ ಒಂದು ಎಕರೆಗೆ ಒಂದೇ ಜೋನಿನಲ್ಲಿ 1 ರೂಪಾಯಿ 88 ಪೈಸೆ ಮತ್ತು ಎರಡನೇ ಜೋನಿನಲ್ಲಿ ಒಂದು ರೂಪಾಯಿ 42 ಪೈಸೆ ಇತ್ತು. ರೀಸೆಟಲ್‌ಮೆಂಟ್ ಪ್ರಕಾರ 4 ಪರ್ಸೆಂಟ್ ಪ್ರಕಾರ ಮೊದಲನೇ ಜೋನಿನಲ್ಲಿ 4 ರೂಪಾಯಿ 92 ಪೈಸೆ ಮತ್ತು ಎರಡನೇ ಜೋನಿನಲ್ಲಿ 3 ರೂಪಾಯಿ 67 ಪೈಸೆ ಆಯಿತು. ಇದೇ ರೀತಿ ಅನೇಕ ಭಾಗಗಳಲ್ಲಿ ಮೂರು ನಾಲ್ಕು ಪಟ್ಟು ಕಂದಾಯ ಹೆಚ್ಚಾಗಿದೆ. ಸ್ಟಾಂಡರ್ಡ್ ರೇಟ್ ಎಂದರೆ ಏನು ಎನ್ನುವುದನ್ನು ನಾನು ಒಂದು ಮಾತಿನಲ್ಲಿ ಹೇಳಬಯಸುತ್ತೇನೆ. ಅನೇಕರಿಗೆ ಸ್ಟಾಂಡರ್ಡ್ ರೇಟ್ ಎನ್ನುವುದು ಗೊತ್ತಿದೆಯೋ ಇಲ್ಲವೋ ಎನ್ನುವ ರೀತಿ ಅವರ ವಾದ ದಿಂದ ಕಂಡುಬಂತು. ಸ್ಟಾಂಡರ್ಡ್ ರೇಟ್ ಎಂದರೆ ಏನು ಎನ್ನುವುದಕ್ಕೆ ಡೆಫಿನಿಷನ್ ಕೊಟ್ಟಿದ್ದಾರೆ.

"Standard rate means with reference to any particular class of land in a group the value of 4 per cent of the average yield of crops per acre of land in that class of 100 per cent classification value."

(ಶ್ರೀ ಡಿ. ದೇವರಾಜ ಅರಸ್)

ಇದು ಸ್ಟ್ಯಾಂಡರ್ಡ್ ರೇಟ್. ಕ್ಲಾಸಿಫಿಕೇಷನ್, ಕ್ಲಾಸ್ ಆಫ್ ಲ್ಯಾಂಡ್ ಇವೆಲ್ಲ ಬೇರೆ ಬೇರೆ ಪದಗಳು. ಇವುಗಳ ಅರ್ಥವನ್ನು ನಾವು ಸರಿಯಾಗಿ ತಿಳಿದುಕೊಂಡರೆ ಮಾತ್ರ ಕಂದಾಯದ ಕಾನೂನು ಬಗ್ಗೆ ತಿದ್ದುಪಡಿ ಮಸೂದೆಯಲ್ಲಿ ಸೂಚಿಸಿರುವ ಬದಲಾವಣೆಗಳು ನಮಗೆ ಸ್ಪಷ್ಟವಾಗಿ ಅರ್ಥವಾಗುತ್ತದೆ. ಇಡೀ ಕಂದಾಯವನ್ನು ಹಾಕುವುದಕ್ಕೆ ಮುಂಚಿತವಾಗಿ, ರೀಸೆಟಲ್‌ಮೆಂಟ್‌ಗೆ ಮುಂಚೆ ಕ್ಲಾಸಿಫಿಕೇಷನ್ ಆಫ್ ಲ್ಯಾಂಡ್ ಎಂದು ಒಂದು ಇದೆ. ಸರ್ವೆ ಮಾಡುವುದಕ್ಕೆ ಪೂರ್ವದಲ್ಲಿ ಅನೇಕ ವರ್ಷಗಳ ಹಿಂದೆ ಭೂಮಿಯನ್ನು ಅದರ ಫಲವತ್ತು, ಅದರ ಸ್ವಭಾವ, ಅದರಲ್ಲಿರುವ ಗುಣ ಎಲ್ಲವನ್ನೂ ಪರಿಶೀಲನೆಮಾಡಿ 16 ಆಣೆ ಜಮೀನು, 14 ಆಣೆ ಜಮೀನು 10 ಆಣೆ ಜಮೀನು ವಗೈರೆ ಮಾಡಿಕೊಂಡು ಬಂದಿದ್ದಾರೆ. ರೀಸೆಟಲ್‌ಮೆಂಟ್ ಆಗುವುದಕ್ಕೆ ಕೆಲವು ವರ್ಷಗಳ ಹಿಂದೆಯೇ ಇದಲ್ಲಾ ಆಯಿತು, ಈಗ ಹೊಸದಾಗಿ ಅದ ಕ್ಲಾಸಿಫಿಕೇಶನ್ ಅಲ್ಲ. ಇದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಹಿಂದೆ ಯಾವಾಗ ಕ್ಲಾಸಿಫಿಕೇಷನ್ ಆಯಿತು ಎಂದರೆ 60-70 ವರ್ಷಗಳ ಹಿಂದೆ ಸರ್ವೆ ಸೆಟಲ್‌ಮೆಂಟ್ ಆದಕಾಲದಲ್ಲಿ ಆ ಕ್ಲಾಸಿಫಿಕೇಷನ್ ಆಗಿತ್ತು. ರೀಸೆಟಲ್‌ಮೆಂಟ್ ಮಾಡಿದ ಕಾಲದಲ್ಲಿ ಕ್ಲಾಸಿಫಿಕೇಷನ್ ಮಾಡಲಿಲ್ಲ. ಸೆಟಲ್‌ಮೆಂಟ್ ಆಫ್ ದಿ ಲ್ಯಾಂಡ್ ರೆವೆನ್ಯೂ ಎಂದು ಮಾಡಿದರು. ಸೆಟಲ್‌ಮೆಂಟ್ ಆಫ್ ದಿ ಲ್ಯಾಂಡ್ ರೆವೆನ್ಯೂ ಎಂದರೆ ಏನು ? ಯಾವ ವರ್ಗದ ಜಮೀನೇ ಇರಲಿ ಅದರಲ್ಲಿ ಉತ್ಪತ್ತಿ ಎಷ್ಟು ಹೆಚ್ಚಾಗಿ ಬರುತ್ತದೆ, ಅಥವಾ ಬರುವ ಉತ್ಪತ್ತಿ ಕಡಿಮೆಯಾಗಿದೆಯೇ, ಅದು ಮಾರುಕಟ್ಟೆಗೆ ಹತ್ತಿರವಿದೆಯೇ, ರಸ್ತೆ ವಗೈರೆ ಅನುಕೂಲತೆಗಳಿವೆಯೇ, ಈ ಎಲ್ಲ ಅಂಶಗಳನ್ನೂ ಗಮನಿಸಿ ಎಷ್ಟು ಕಂದಾಯ ಕೊಡಬೇಕು ಎಂದು ಗೊತ್ತುಮಾಡುತ್ತಾರೆ. ಸ್ಟ್ಯಾಂಡರ್ಡ್ ರೇಟಿಗೆ ಸಂಬಂಧಪಟ್ಟದ್ದು ಇಷ್ಟು. ಹುಣಸೂರು ತಾಲ್ಲೂಕಿನಲ್ಲಿ ಸ್ಟ್ಯಾಂಡರ್ಡ್ ರೇಟ್ ಒಂದು ರೂಪಾಯಿ 88 ಪೈಸೆ ಇದ್ದುದನ್ನು ನಾಲ್ಕು ರೂಪಾಯಿ 92 ಪೈಸೆ ಮಾಡಿದ್ದಾರೆ, ಎಂದರೆ ಮೂರು ನಾಲ್ಕು ಪಟ್ಟು ಜಾಸ್ತಿ ಮಾಡಿದ್ದಾರೆ. ಆದರೆ ಕೆಲವು ಕಡೆ ಹೆಚ್ಚಾಗಿಲ್ಲ. ನಾವು ಈ ತಿದ್ದುಪಡಿ ಮಸೂದೆಗೆ ಒಪ್ಪಿಗೆ ಕೊಡಲಿಲ್ಲವೆಂದರೆ ಮೊದಲಿನ ಕಾನೂನು ಹಾಗೆಯೇ ಉಳಿಯುತ್ತದೆ. ಮೊನ್ನೆ ತಾನೇ ಧರಣಿ ಮುಷ್ಕರ ಆಯಿತು. ಆ ಕಾಲದಲ್ಲಿ ವಿರೋಧ ಪಕ್ಷದವರು ಏನು ಹೇಳಿದರು ಎನ್ನುವುದನ್ನು ನಾವು ಮರೆಯಬಾರದು.

ಈಗ ಅನೇಕ ಕಡೆ ಕಂದಾಯ ಒಂದಕ್ಕೆ ಮೂರರಷ್ಟು ಜಾಸ್ತಿಯಾಗಿ ವಸೂಲಾಗುತ್ತಿದೆ, ಅದನ್ನು ವಸೂಲು ಮಾಡಬಾರದು, ತಡೆಹಿಡಿಯಬೇಕು, ಎರಡರಷ್ಟಕ್ಕಿಂತ ಹೆಚ್ಚು ಇರಬಾರದು, ಅಥವಾ ಹಳೆಯ ಕಂದಾಯ ವಸೂಲು ಮಾಡಬೇಕು. ಮುಂದೆ ತಿದ್ದುಪಡಿ ತಂದು ಕ್ರಮಪಡಿಸಬೇಕು ಎಂದು ಹೇಳಿದ್ದರು. ಮುಖ್ಯವಾಗಿ ಕಂದಾಯ ವಸೂಲಾಗುತ್ತಿರುವುದು ದುಬಾರಿ ದರದಲ್ಲಿದೆ, ಹಾಗೆ ವಸೂಲುಮಾಡಿದರೆ ಜನರಿಗೆ ತೊಂದರೆಯಾಗುತ್ತದೆ, ಸರಕಾರ ತಿದ್ದುಪಡಿ ತಂದು ಅಧಿಕಾರ ಪಡೆದು ಕಡಮೆಮಾಡುವುದಕ್ಕೆ ಪ್ರಯತ್ನಮಾಡಬೇಕು ಎಂದು ಹೇಳಿದ್ದರು. ಈಗ ತಿದ್ದುಪಡಿ ಬೇಡಿ, ಕಾಂಪ್ರಿಹೆನ್ಸಿವ್ ಬಿಲ್ ತನ್ನಿ ಎಂದು ಹೇಳುತ್ತಾರೆ. ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಗಳೇ ಆ ದಿವಸ ಸಭೆಗೆ ಒಂದು ಆಶ್ವಾಸನೆ ಕೊಟ್ಟಿರುವುದು ಕಾಂಪ್ರಿಹೆನ್ಸಿವ್ ಬಿಲ್ ತರುತ್ತೇವೆಂದಲ್ಲ, ಚನ್ನಬಸಪ್ಪನವರು ಮತ್ತಿತರರು ಹೇಳಿರುವಂತೆ ತಿದ್ದುಪಡಿ ತರುತ್ತೇವೆ ಎಂದು ನಾನು ತಿಳಿಯುತ್ತೇನೆ.

ಶ್ರೀ ಎಚ್.ಎಂ. ಚನ್ನಬಸಪ್ಪ.—ಒಂದು ಕ್ಲಾರಿಫಿಕೇಷನ್: ಸರಕಾರ ಇದು ಟ್ಯಾಕ್ಸ್ ಎಂದು ಹೇಳಿದಮೇಲೆ ಕ್ಲಾಸಿಫಿಕೇಷನ್ ಏಕೆ ?

ಶ್ರೀ ಡಿ. ದೇವರಾಜ ಅರಸ್.—ನಾನು ಹೊಸದಾಗಿ ಹೇಳಬೇಕಾಗಿಲ್ಲ.

Sri H. M. CHANNABASAPPA.—Tax is guided by canons of ability and canons of earnings.

Sri D. DEVARAJ URS.—Let us leave it to legal luminaries.

Sri H. M. CHANNABASAPPA.—Can they do it in a dubious manner ?

Sri D. DEVARAJ URS.—The very nature of this problem is such that it looks as if it is a never-ending proposition, which can be interpreted in any manner you like.

Sri H. M. CHANNABASAPPA.—If you do not want to solve it, that time will never come. When will that time come ?

Sri D. DEVARAJ URS.—That time comes when we introduce the Agriculture Income-tax Act. We will see that it is defined as tax. For the rest of the people, we will have no land revenue. There it ends.

ಈ ತಿದ್ದುಪಡಿ ತಂದು ಈಗಲೇ ಎಲ್ಲವನ್ನೂ ಸರಿಪಡಿಸಿಬಿಡಲು ಸಾಧ್ಯವೇ? ಶ್ರೀಮಾನ್ ಚನ್ನಬಸಪ್ಪನವರು ರೆವಿನ್ಯೂ ಮಂತ್ರಿಗಳಾಗಿದ್ದರೆ ನಾಳೆಯೇ ಎಲ್ಲವನ್ನೂ ಮಾಡುವುದಕ್ಕಾಗುತ್ತಿತ್ತೇ? ವ್ಯವಸಾಯ ವರಮಾನ ತೆರಿಗೆ ಜಾರಿಗೆ ತರಬೇಕಾದರೆ ಚನ್ನಬಸಪ್ಪನವರು ಒಪ್ಪಲಿಲ್ಲ, ಈಗ ಒಂದು ಹೆಜ್ಜೆ ಮುಂದೆ ಬಂದಿದ್ದಾರೆ, ವ್ಯವಸಾಯ ವರಮಾನ ತೆರಿಗೆ ಹಾಕಲಿ ಎಂದು ಹೇಳುತ್ತಾರೆ, ಶ್ರೀಮಾನ್ ಗೋಪಾಲಗೌಡರು ಹೇಳಿದ್ದನ್ನು ಒಪ್ಪಬಹುದು, ಈ ಕಡೆ ಮತ್ತು ಆ ಕಡೆ ವರಮಾನ ತೆರಿಗೆ ಹಾಕಿದರೆ ಸರಕಾರವನ್ನು ಉರುಳಿಸುತ್ತೇವೆಂದು ಹೇಳುವವರಿದ್ದಾರೆ. ಇದು ಒಂದೆರಡು ತಿಂಗಳಲ್ಲಿ ಆಗುವ ವಿಚಾರವಲ್ಲ, ಇದು ವರೆಗೇನು ಕಂದಾಯ ವಸೂಲು ಮಾಡುತ್ತಿದ್ದರೋ ಆ ರೀತಿ ಸೆಟ್ಲ್‌ಮೆಂಟ್ ಪ್ರಕಾರ, ಕಾನೂನು ಪ್ರಕಾರ ವಸೂಲುಮಾಡುವುದಕ್ಕೇನು ಅಧಿಕಾರವಿದೆ ಅದರ ಪ್ರಕಾರ ವಸೂಲು ಮಾಡಬೇಕು.

Sri H. M. CHANNABASAPPA.—Let the Government withdraw this and bring a comprehensive legislation. Until then they may collect at the old rates.

ಶ್ರೀ ಡಿ. ದೇವರಾಜ ಅರಸ್.—ಈಗ ತಕ್ಷಣ ಮಾಡಲು ಸಾಧ್ಯವಾಗುವುದಿಲ್ಲ. ಇದಕ್ಕೆ ಒಂದು ಸಲಹೆ ಕೊಡುತ್ತೇನೆ. ಈ ಸಭೆ ವ್ಯವಸಾಯ ವರಮಾನ ತೆರಿಗೆ ಹಾಕಬೇಕು, ಜಮೀನು ಕಂದಾಯ ಈಗಿರುವ ರೀತಿಯಲ್ಲಿ ವಜಾಮಾಡಬೇಕು ಎಂದು ನಿರ್ಣಯ ತರೋಣ, ಈ ಸಭೆ ಒಪ್ಪಿದರೆ ಸರಕಾರ ಒಪ್ಪಲಿ. ಇದಕ್ಕೆ ಒಪ್ಪುತ್ತೇನೆ, ನನ್ನ ವಿರೋಧವಿಲ್ಲ. ಇದಕ್ಕೆ ಪೂರ್ವಭಾವಿಯಾಗಿ ಈಗಿರುವ ಕಂದಾಯ ಈ ಮಟ್ಟದಲ್ಲಿ ವಸೂಲುಮಾಡಲು ಬರುವುದಿಲ್ಲ, ಕಾನೂನಿದೆ, ಅದಕ್ಕೆ ವಿರುದ್ಧವಾಗಿ ಮಾಡುವುದಕ್ಕಾಗುವುದಿಲ್ಲ. ಕಾನೂನು ರೀತ್ಯ, ಆಜ್ಞೆಯಲ್ಲಿ, ಡಿಮ್ಯಾಂಡ್ ಹಾಕೇತೀರಬೇಕು. ಎಷ್ಟು ಹೆಚ್ಚಾದರೂ ಕಾನೂನು ಇಷ್ಟೇ ಹಾಕಬೇಕೆಂದು ಹೇಳುವಾಗ ಹಾಕಲೇಬೇಕು. ಈ ಸಭೆ ಕಾನೂನನ್ನು ಒಪ್ಪಿದೆ, 4—5 ಪಟ್ಟಾದರೂ ವಸೂಲುಮಾಡಬೇಕು. ಹಾಗಿರುವಾಗ ಡಿಮ್ಯಾಂಡ್ ನೋಟೀಸ್ ಕೊಟ್ಟರೆ ವಸೂಲುಮಾಡಬೇಕು. ಎಗ್‌ಜಿಕ್ಯುಟಿವ್ ಆರ್ಡರ್ ಪ್ರಕಾರ ಹೀಗೆ ಮಾಡಬೇಕೆಂದು ಹೇಳಿದೆಯೇ ಹೊರತು ಬಹಳ ಕಾಲ ವಸೂಲುಮಾಡಬಾರದೆಂದು ಹೇಳುವುದಕ್ಕೆ ಸರಕಾರಕ್ಕೆ ಸಾಧ್ಯವಿಲ್ಲ. ಮಂತ್ರಿಗಳು ಆ ರೀತಿ ಮಾಡಿದರೆ ತಪ್ಪು, ಸರಕಾರ ಮಾಡಿರುವ ಕಾನೂನಿಗೆ ವಿರುದ್ಧವಾಗುವುದು. ಆದುದರಿಂದ ಸಾಧ್ಯವಿಲ್ಲ. ಇಡೀ ರಾಜ್ಯವನ್ನು 130 ಅಥವ 132 ಗ್ರೂಪ್ ಮಾಡಿದೆ, ಒಂದೊಂದು ಜೋನಿಗೆ 3—4 ಗುಂಪು ಮಾಡಿದ್ದಾರೆ. ಸರಿಯಾಗಿ ಅಂದಾಜು ಮಾಡಿದರೆ 40 ಗ್ರೂಪುಗಳಲ್ಲಿ ಹಳೆಯ ಸ್ಟ್ಯಾಂಡರ್ಡ್ ದರಕ್ಕಿಂತ ಈ ಸಾರಿ ಕಡಮೆಯಾಗಿದೆ, ಇದು ವಿಚಿತ್ರವಾಗಿದೆ. ಕಡಮೆಯಾದವರು ಯಾರೂ ಮಾತನಾಡುವುದಿಲ್ಲ. 60 ವರ್ಷಗಳಲ್ಲಿ ನಿಗದಿಮಾಡಿರುವುದು, ಪ್ರಗತಿ ಸಾಧಿಸಿರುವುದು. ಈಗ ಯಾವ ಜಾಣ್ಮೆಯಿಂದ ಹೀಗೆ ತೀರ್ಮಾನಕ್ಕೆ ಬಂದರೋ ಸೆಟ್ಲ್‌ಮೆಂಟ್ ಆಫೀಸರು ಹೇಗೆ ನಿಗದಿಮಾಡಿದರೋ ಗೊತ್ತಿಲ್ಲ. ಅಂತೂ ಕಡಮೆಯಾಗಿದೆ. ಕಡಮೆಯಾಗುವುದಕ್ಕೆ ಒಂದು ಕಾರಣ ಸೇಕಡ ಆರರಷ್ಟು ಗ್ರಾಸ್ ಇನ್‌ಕಂನಲ್ಲಿ ಸೇಕಡ ಆರೂಕಾಲರಂತೆ ಸ್ಟ್ಯಾಂಡರ್ಡ್ ರೇಟ್ ನಿಗದಿಮಾಡಿದರು. ಸೇಕಡ 4 ರಂತೆ ನಿಗದಿಮಾಡಬೇಕೆಂದು ಈ ಸಭೆ ಹೇಳಿದಮೇಲೆ ಇನ್ನೂ ಕಡಿಮೆಯಾಯಿತು. ಹೀಗೆ 40 ಜೋನುಗಳಲ್ಲಿ ಖುಷ್ಕಿ ಜಮೀನಿಗೆ, ಮಳೆಯ ಆಸರೆಯ ಜಮೀನಿಗೆ ಯಾವ ತೊಂದರೆಯೂ ಆಗಿಲ್ಲ. ಇರುವುದೂ ಕಡಮೆಯಾಗಿದೆ. 60–70 ಜೋನ್‌ಗಳಲ್ಲಿ ಇರುವವರಿಗೆ ಸೇಕಡ ನೂರರಷ್ಟಕ್ಕಿಂತ ಹೆಚ್ಚು ಕಂದಾಯ ಹಾಕಿಲ್ಲ, ಇದನ್ನು ದಯೆಯಿಟ್ಟು ನೋಡಬೇಕು. ಅವರೆಲ್ಲರಿಗೂ ಕೇವಲ ಸೇಕಡ 30ರಷ್ಟು, 50ರಷ್ಟು ಹೀಗೆ ಜಾಸ್ತಿಯಾಗಿದೆ. ಕೆಲವು ಜೋನುಗಳಲ್ಲಿ ಸೇಕಡ 200-300ರಷ್ಟು ಜಾಸ್ತಿಯಾಗಿದೆ. ಈಗ 3-4 ಪಟ್ಟು ಜಾಸ್ತಿಯಾಗಿರುವವರಿಗೆ ತೊಂದರೆಯಾಗಿದೆಯೆಂದು ಹೇಳುತ್ತಿದ್ದಾರೆ.

ಎರಡನೆಯದು ಕ್ಲಾಸ್ ಆಫ್ ಲ್ಯಾಂಡ್ಸ್ ಎಂದಿದೆ; ಕ್ಲಾಸಿಫಿಕೇಷನ್ ಆಫ್ ಲ್ಯಾಂಡ್ ಎಂದು ಇದೆ; ಇವೆರಡೂ ಬೇರೆ. ಕಂದಾಯ ಹಾಕುವಾಗ, ಸ್ಟ್ಯಾಂಡರ್ಡ್ ರೇಟ್ ನಿಗದಿಮಾಡುವಾಗ ಕಾನೂನಿನಲ್ಲಿ ಡೆಫಿನಿಷನ್ ಇತ್ತು. ಕ್ಲಾಸ್ ಆಫ್ ಲ್ಯಾಂಡ್‌ಅನ್ನು ವಿಂಗಡಿಸುವಾಗ 3-4 ಭಾಗ

(ಶ್ರೀ ಡಿ. ದೇವರಾಜ ಅರಸ್)

ಮಾಡಿದ್ದಾರೆ, ಡ್ರೈ ಲ್ಯಾಂಡ್, ವೆಟ್‌ಲ್ಯಾಂಡ್, ಗಾರ್ಡನ್ ಲ್ಯಾಂಡ್, ಪ್ಲಾಂಟೇಷನ್ ಲ್ಯಾಂಡ್ ಎಂದು. ಈ 4 ಮುಖ್ಯವಾದ ಭಾಗಗಳಲ್ಲಿ ಸಬ್‌ಡಿವೈಡ್ ಮಾಡಿದ್ದಾರೆ. They are defined as follows :

"(*a*) 'dry land' means—

(i) land classified as dry lan'l under any law repealed by section 202, or any law in force at any time before the commencement of this Act ;

(ii) land in which wet crops cannot be grown except when irrigated by water obtained from any source of water which is the property of the State Government ;

(*b*) 'wet land' means land in which wet crops can be grown by use of rain water or water obtained from any source of water which is not the property of the State Government ; "

5-00 P. M.

ಎರಡನೆಯದು ಏನಾಯಿತು ಎಂದರೆ ಮೊದಲು ಕೆನಾಲ್‌ನಿಂದ ನೀರಾವರಿಯಾಗತಕ್ಕ ತರೀ ಜಮೀನು ಅಂತ ಏನಿತ್ತು ಅದಕ್ಕೆ ವೆಟ್ ಮತ್ತು ಡ್ರೈ ಅಸೆಸ್‌ಮೆಂಟ್ ಎರಡೂ ಒಟ್ಟಿಗೆ ಸೇರಿಸಿ ತೆಗೆದುಕೊಳ್ಳುವುದನ್ನು ಡಿಫರೆನ್‌ಷಿಯೇಟ್ ಮಾಡುವುದಕ್ಕೆ ಆ ರೀತಿ ಕನ್‌ಸಿಡರ್ ಮಾಡಿ ವೆಟ್ ಲ್ಯಾಂಡ್ ಎಂದರೆ ಏನು ಎಂಬುದನ್ನು ಈ ರೀತಿ ಹೇಳಿದ್ದಾರೆ :

" Wet land is land where crops can be grown by rain water or water obtained from any source which is not the property of the State Government. "

ಇಲ್ಲೇ ಬಂದಿರುವುದು ತೊಂದರೆ. ಏನೆಂದರೆ ಡ್ರೈ ಲ್ಯಾಂಡ್‌ಗೆ ಕೆಲವು ಕಡೆ ಜಾಸ್ತಿಯಾಗಿರುವುದು. ವೆಟ್ ಲ್ಯಾಂಡ್ ಡೆಫನಿಷನ್ ಏನು ಮಾಡಿದರು ಎಂದರೆ ಮಳೆಯ ಆಸರೆಯಿಂದ ಅಂತ ಅನ್ನುವುದನ್ನು ತಮಗೆ ಚೆನ್ನಾಗಿ ಅನುಭವ ಇದೆ, ತಾವು ಬೆಳಗಾಂ ರೀಜನ್‌ನಿಂದ ಬಂದವರು ಬೆಳಗಾಂ ರೀಜನ್‌ನಲ್ಲಿ ಒಂದು ಭಾಗ ಮಲೆನಾಡು, 50—60 ಇಂಚಿಗಿಂತ ಹೆಚ್ಚು ಮಳೆ ಬೀಳತಕ್ಕ ಭಾಗದಲ್ಲಿ ಬೆಳೆಯತಕ್ಕದ್ದಕ್ಕೆ ಗದ್ದೆ ಎಂದು ಹೇಳುತ್ತೇವೆ, ತಾವು ಏನು ಹೇಳುತ್ತೀರೋ ಗೊತ್ತಿಲ್ಲ, ಅಲ್ಲಿ ಮಳೆಯ ಆಶ್ರಯದಿಂದ ಬತ್ತ ಬೆಳೆಯುತ್ತಾರೆ ಅದನ್ನು ವೆಟ್ ಲ್ಯಾಂಡ್ ಅಂತ ಕನ್‌ಸಿಡರ್ ಮಾಡಿದರು. ಇನ್ನು ಕೆಲವು ಭಾಗದಲ್ಲಿ ಗಾರ್ಡನ್ ಲ್ಯಾಂಡ್ ಅಂದರು, ಡ್ರೈ ಗಾರ್ಡನ್ ಲ್ಯಾಂಡ್ ಅಂದರು ಅದೇ ರೀತಿ ವೆಟ್ ಗಾರ್ಡನ್ ಲ್ಯಾಂಡ್ ಅಂದರು. ವೆಟ್ ಲ್ಯಾಂಡ್ ಅಂತ ಮಳೆಯ ಆಶ್ರಯದಿಂದ ಅಥವಾ ಸರ್ಕಾರದಿಂದ ಪಡೆಯತಕ್ಕ ನೀರಿನ ಆಶ್ರಯವಿಲ್ಲದೇ ಇರತಕ್ಕ ಯಾವುದೇ ಆದರೂ ಅದು ವೆಟ್ ಲ್ಯಾಂಡ್ ಅಂತ ಕನ್‌ಸಿಡರ್ ಮಾಡುವಾಗ—ಕ್ಲಾಸ್ ಆಫ್ ಲ್ಯಾಂಡ್ ಮಾಡುವಾಗ ಕೆಲವು ಕಡೆ ಏನು ಮಾಡಿದ್ದಾರೆ ಎಂದರೆ 1961ನೇ ಇಸವಿಯಲ್ಲಿ ತಮಗೆ ಜ್ಞಾಪಕ ಇರಬಹುದು, ಮಳೆ ವಿಪರೀತವಾಗಿ ಅಗ್ರಫ್ಲಡ್ ಹ್ಯಾವಕ್ ಆಯಿತು. ಆ ಒಂದು ವರ್ಷ ಬತ್ತ ಬೆಳೆದ ಜಮೀನನ್ನೂ ವೆಟ್ ಲ್ಯಾಂಡ್ ಅಂತ ಕನ್‌ಸಿಡರ್ ಮಾಡಿದ್ದಾರೆ. ಆ ರೀತಿ ಮಾಡಿ ಹಿಂದೆ ಇದ್ದಂಥ ಕಂದಾಯಕ್ಕೆ ಬದಲಾಗಿ 10 ರೂಪಾಯಿ, 15 ರೂಪಾಯಿ, 8 ರೂಪಾಯಿ 11 ರೂಪಾಯಿ ಸ್ಟ್ಯಾಂಡರ್ಡ್ ರೇಟು ಹಾಕಿದ್ದಾರೆ. ಇವತ್ತು ಅಲ್ಲಿ ಖುಷ್ಕಿ ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಕ್ಲಾಸಿಫಿಕೇಷನ್‌ನಲ್ಲಿ ಏರುಪೇರು ಆಗಿದೆ, ಇದು ಒಂದು ವಿಚಾರ. ಹೀಗೆ ಆಗಿರತಕ್ಕ ಏರುಪೇರನ್ನು ಸರಿ ಮಾಡುವುದಕ್ಕೆ ನಾವು ಆಗಿಂದಾಗ್ಗೆ ಈ ಕಾನೂನು ಜಾರಿಗೆ ಬಂದ ಕಾಲದಿಂದಲೂ ಒಂದೇ ಸಮನೆ ಈ ಮನೆಯಲ್ಲಿ ಮತ್ತು ಹೊರಗಡೆಯೂ ಕೂಡ ಕೇಳಿಕೊಂಡು ಬರುತ್ತಾ ಇದ್ದೇವೆ, ಇದನ್ನು ಸರಿಪಡಿಸಬೇಕು ಎಂದು. 3-4 ಪಟ್ಟು ಕಂದಾಯ ಖುಷ್ಕಿ ಜಮೀನಿಗೆ ಹೆಚ್ಚಾಗುತ್ತಾ ಇದೆ, ಕೆಲವು ಕಡೆ ಕ್ಲಾಸ್ ಆಫ್ ಲ್ಯಾಂಡ್ ಡಿಫೈನ್ ಮಾಡಿರುವುದರಲ್ಲಿ ವ್ಯತ್ಯಾಸ ಇದೆ. ಇದು ಸರಿಯಾದದ್ದಲ್ಲ, ಇದನ್ನು ರೀ ಡಿಫೈನ್ ಮಾಡಬೇಕಾಗುತ್ತದೆ, ಕೆಲವು ಕಡೆ ಗಾರ್ಡನ್ ಲ್ಯಾಂಡ್ ಅಂತ ಒಂದು

ತೆಂಗಿನ ಮರ, ಒಂದು ಅಡಿಕೆ ಮರ ಇರುವುದನ್ನೂ ಕೂಡ ಡಿಫೈನ್ ಮಾಡಿದ್ದಾರೆ. ಅದೂ ಕೂಡ ಸರಿಯಾದ್ದಲ್ಲ. ಇದನ್ನೆಲ್ಲಾ ಸರಿಮಾಡಬೇಕಾದರೆ ಕಾನೂನು ಇದೇ ರೀತಿ ಇರುವುದಾದರೆ ಸರ್ಕಾರಕ್ಕೆ ಸರಿಮಾಡುವ ಅಧಿಕಾರ ಇಲ್ಲ, ಒಂದು ಸಾರಿ ಸೆಟ್ಲ್‌ಮೆಂಟ್ ಆಗಿಹೋದರೆ ಇನ್ನು ಮೂವತ್ತು ವರ್ಷದವರೆಗೂ ಪುನಃ ರೀಸೆಟ್ಲ್‌ಮೆಂಟ್ ಮಾಡುವುದಕ್ಕೆ ಅಥವಾ ಮಾಡುವ ಒಂದು ಆರ್ಡರ್ ಮಾಡುವುದಕ್ಕೆ ಕಾನೂನಿನ ಚೌಕಟ್ಟಿನಲ್ಲಿ ಸರ್ಕಾರದವರಿಗೆ ಅಧಿಕಾರವಿಲ್ಲ ಅಂತ ಅನ್ನುವುದನ್ನು ಮಾನ್ಯ ಸದಸ್ಯರು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು.

†SRI V. N. PATIL. (Humnabad).—Sir, the most honest people of our State thought that the Land Revenue (Amendment) Bill which has come after great expectations was going to redress all the wrongs and injustices done to them by the wrong drafting of the Bill or by the wrong Survey Settlement. After reading this Bill, it is clear that all those hopes have gone in vain. Not only that, in addition to the injustices already done to the peasantry and the agriculturist class in Mysore State, the Government has thought it fit to perpetuate the injustices done to them. I must say with all sense of responsibility that this Land Revenue (Amendment) Bill has created a problem which cannot be tackled unless another 30 years pass by and one more revision takes place. By that time I do not think the present Revenue Minister or the present members sitting here will survive; a few may be fortunate to survive and witness what will be going on after another 30 years. What is the advantage the Government are giving to the people. Whosoever has suffered can approach the Superintendent of Land Records. Can we expect all the 20 lakhs of people to go to the Superintendent of Land Records, file petitions and engage Advocates for the injustices done by the Survey Settlement Department? They have to file an appeal to the appellate authority and the appellate authority will give the final decision. There is no appeal provided against the appellate authority. It is considered purely as an administrative authority and not as a judicial authority. They have suggested that the Divisional Commissioner must be in charge of the appeals in such a burning issue of the people, and not the Revenue Appellate Tribunal which quasi-judicial jurisdiction. Here, the Government is committing a blunder; please do not do it. Law does not permit it. One may be a good administrator but may not have a judicial mind to interpret law according to legal canons. I have the highest regard for the Hon' ble Minister for Revenue for his integrity, simplicity and for his hailing from a rural area. No other person is so hit hard as the agriculturists and by these measures the Government is silently breaking the backbone of agriculturists. If they keep quiet, the injustices will perpetuated. What did he say? He said that he would introduce a land legislation in a comprehensive manner and we all hoped that all the past evils would be wiped out. But what is it that he has done now? Did we expect such a land legislation wherein every aggrieved agriculturist has to go from one court to another court and waste 10 years in the process? Should they be made to invoke the extraordinary jurisdiction of the High Court to show that the Revenue Appellate Tribunal has not applied its mind properly? Such a cumbersome

(SRI V. N. PATIL)

remedy the Government has suggested for the wrongs done since the last five years and we feel sometimes very much hurt and depressed by the way this democracy functions. At this rate people will lose faith in democracy. When injustices after injustices are perpetrated on them and when they put forward demands and grievances, the Government comes forward with such an amending Bill. Is this way in which we are seeking in all earnestness to remedy the past mistakes Incidentally the Hon'ble Revenue Minister was pleased to circulate a Revenue Secretariat noting which in itself shows how unscientific it is. On the floor of the House I have tried my level best to try to bring to the notice of the Revenue Minister and to the authorities concerned that in Hyderabad Karnatak the land revenue and land tenure system was different. There were Jagirdars, Payagars and Nawabs. In one district the entire land revenue was for the luxury of one Nizam. This system was there. In the Khalsa area the land revenue was Re. 1 per acre; in the Pega area it was Rs. 4 and in the Jagir area it was Rs. 6 and in the Sarfas area it was Rs. 8 because it was meant for the private enjoyment of the Nizam. After the integration and formation of new Mysore State, five different land revenue systems prevailing in the former Hyderabad State have merged. Have this Congress Government done anything to remove the disparities between the land revenue rates in Khasa, Pege, Jagir and Sarf areas? Was it not the duty of the Welfare State to look into the anomalies existing between the land revenue rates in Chincholi Taluka, Humnabad Taluka, Bhalki Taluka and other talukas of Bidar District? These anomalies still continue. Not only that, but the Government have given the seal of authority to the injustice which has been perpetuated. I would bring to the notice of the Revenue Minister the discrimination between Bidar District and Gulbarga District. The figures are given in your Notification. Take for instance the garden lands in Gulbarga District and the garden lands in Bidar District. The land revenue which was Rs. 2.79 for garden land in Bidar District prior to the revision settlement has now gone up to Rs. 8.92 after the revision settlement. Is there any difference between garden land in Bidar District and garden land in Gulbarga District and yet in Gulbarga District it is only Rs. 2.97. Is this not a case of favouritism and discrimination under this Congress regime? The land revenue which was already high in Bidar District as compared to Gulbarga District which was much less, has been further raised. No scientific method has been employed in raising the land revenue. Black cotton soil in Gulbarga District is the same as black cotton soil in Bidar District and yet you have allowed this great anomaly in the land revenue rates to continue. In all fairness, A category garden land in Gulbarga district should have been charged at Rs. 8.97 as in Bidar District. In the case of IV grade category of garden land in Bidar District the rate is Rs. 8.92 whereas for the IV grade garden land in Gulbarga disrict it is

only Rs. 1.20. Is this not great injustice that you have done to the people of Bidar ? What were your Revenue Department officials doing? Did they not have any scientific method to fix the land revenue? What they have done is only this. Sitting in the office of the patwari they simply raised the land revenue sometimes two times and sometimes three times in the case of the poor people Bidar District whereas in the case of the vested interests they did not propose any increase because they were in a position to bribe them whereas these unfortunate poor people could not give any bribe and could not go to the temple of justice. So these poor people were the worst sufferers.

Coming to revision settlement rates for dry lands, they have made a wonderful jugglery of figures and taken we legislators by surprise and they have fooled us. The acreage under Khuski is 2,36,53,478 acres. The land revenue prior to revision settlement was Rs. 2,37,46,922. The Revenue Minister was pleased to say that a hue and cry was made for nothing and in fact there has been a reduction of 22 per cent in the land revenue after the revision settlement. This is some black magic. I may point out to him that instead of 22 per cent decrease, in fact there has been 27 per cent increase after the revision settlement. The figures given here are after the increase, namely, Rs. 3,18,70,397. This figure is Rs. 1 crore more than the previous figure and yet he is trying to console the members of this House. It is only after the inclusion of 75 per cent surcharge on the land revenue. 75 per cent surcharge has been levied. This surcharge has been arbitrarily levied and the Government is trying to justifiy the inclusion of the surcharge. I shall give the figures from the circulars issued by the Government under items 6 and 7. Bidar comes under item No. 6. For Bidar District Rs. 15,89,133 was the land revenue prior to revision settlement. After revision settlement the figure went up to Rs. 27,80,983. It is a simple calculation of figures to find out whether Rs. 15 lakhs is less than Rs. 27 lakhs. I want to put this question in all humility at my command, is Rs. 27 lakhs not more than 100 per cent more of Rs. 15 lakhs? Then take the figures for Gulbarga District. The figure prior to revision settlement was Rs. 31,06.599. After revision settlement it has gone to only Rs. 44,63,714. Why there is 150 per cent increase in Bidar District and why there is only 50 per cent increase for Gulbarga District, I cannot understand. In Gulbarga, the land revenue was already less, whereas in Bidar district there was enhaced land revenue. In the name of justice, we have to wipe out the feudal outlook. In spite of the same classification of land in both the districts, the Government has not taken any steps to do justice. On the other hand, 2½ to 3 times more land revenue is collected in Bidar district. In Bhalki, Humnabad, Aurad, Basavakalyan and Bidar taluks, a person who was paying Rs. 5, today is paying Rs. 15. At some places it has gone up by 400 per cent. Incidentally, a few followers, who were paying Rs. 200 are now paying only Rs. 150. In some cases, concession has been shown. How was it done, I do not know. I think, by bribing the land revenue officials, they got their land revenue reduced.

Mr. SPEAKER.—Please conclude in two minutes. There are number of hon. Members desirous of participating in the debate.

Sri V. N. PATIL.—Other hon. Members took, 3 hours, 2 hours, and so on, and at that time there was no time limit. If you stick to two minutes, it is not possible for me to say anything and I keep quiet, and I thank you for your kindness.

Mr. SPEAKER.—I call upon hon. Member Sri Sangana Gowda to speak.

5-30 P. M.

ಶ್ರೀ ಕೆ. ಸಂಗನಗೌಡ (ಲಿಂಗ್‌ಸುಗೂರ್).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಲ್ಯಾಂಡ್ ರೆವಿನ್ಯೂ ತಿದ್ದುಪಡಿ ಮಸೂದೆಯನ್ನು ಸ್ವಾಗತಿಸುತ್ತಾ, ನಾನು ಕೆಲವೊಂದು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ರೀ ಸರ್ವೆ ಸೆಟ್ಲ್‌ಮೆಂಟ್ ಆದಮೇಲೆ ರಾಜ್ಯದ ಅನೇಕ ಭಾಗಗಳಲ್ಲಿ ಕಂದಾಯದ ಪ್ರಮಾಣದಲ್ಲಿ ಬಹಳ ಮಟ್ಟಿಗೆ ಹೆಚ್ಚಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಸಭೆಯ ಮಾನ್ಯ ಸದಸ್ಯರು, ಅನೇಕ ರಾಜಕೀಯ ಮುಖಂಡರು, ರೈತರ ಪ್ರತಿನಿಧಿಗಳು ನಾನಾ ಮೂಲಕ ಆ ಕಡೆ ಸರ್ಕಾರದ ಗಮನವನ್ನು ಸೆಳೆದು ಸಾಧ್ಯವಾದ ಮಟ್ಟಿಗೆ ರೈತರ ತೊಂದರೆಗಳನ್ನು ನಿವಾರಿಸಬೇಕು, ಕಂದಾಯದ ಪ್ರಮಾಣವನ್ನು ಇಳಿಸಬೇಕು, ಎಂದು ಹೇಳಿದ್ದರಿಂದ ಸರ್ಕಾರದವರು ರೈತರ ಬೇಡಿಕೆಗೆ, ಈ ಮಾನ್ಯ ಸಭೆಯ ಸದಸ್ಯರ ಬೇಡಿಕೆಗೆ ಮನ್ನಣೆ ಕೊಟ್ಟು ಈಗ ಈ ತಿದ್ದುಪಡಿ ಮಸೂದೆಯನ್ನು ಈ ಸಭೆಯ ಮುಂದೆ ತಂದಿಟ್ಟಿದ್ದಾರೆ ಎಂದು ಹೇಳುವುದಕ್ಕೆ ನನಗೆ ಸಂತೋಷವಾಗುತ್ತದೆ. ಈ ಮನೆಯ ಅನೇಕ ಹಿರಿಯ ಮಾನ್ಯ ಸದಸ್ಯರು ಬಹಳ ಕಟುವಾಗಿ ಈ ತಿದ್ದುಪಡಿ ವಿಧೇಯಕವನ್ನು ಟೀಕಿಸಿದ್ದಾರೆ. ಮತ್ತು ಅವರು ಮಾತನಾಡಿದ ಧಾಟಿಯನ್ನು ನೋಡಿದರೆ ಇದು ಸಮಗ್ರವಾದ ಒಂದು ಮಸೂದೆಯಲ್ಲ, ಒಂದು ಸಮಗ್ರವಾದ ಕಾನೂನು ಅಲ್ಲ; ಇದನ್ನೂ ಇನ್ನೂ ಬದಲಾವಣೆ ಮಾಡಬೇಕಾಗಿತ್ತು, ಒಂದು ಕಾಂಪ್ರಹೆನ್ಸಿವ್ ತಿದ್ದುಪಡಿ ಮಸೂದೆಯನ್ನು ತರಬೇಕಾಗಿತ್ತು ಎಂದು ಹೇಳಿದ್ದಾರೆ. ಮತ್ತು ಕೆಲವು ಸದ್ಯರು ಈ ಮಸೂದೆಗೆ ಸಂಬಂಧವಿಲ್ಲದೇ ಇರತಕ್ಕ ವಿಷಯಗಳನ್ನೂ ಪ್ರಸ್ತಾಪ ಮಾಡಿದ್ದಾರೆ ಎಂದು ನಾನು ಹೇಳಬಯಸುತ್ತೇನೆ. ಅವರು ಒಂದು ವೇಳೆ ಈ ತಿದ್ದುಪಡಿ ಮಸೂದೆಯನ್ನು ಅನುಮೋದಿಸದೇ ಇದ್ದರೆ ಅವರು ಏನು ಸಾಧಿಸಿದಂತಾಗುತ್ತದೆ ಎಂಬುದನ್ನು ನಾವು ವಿಚಾರಮಾಡಬೇಕಾಗಿದೆ. ರೀ ಸರ್ವೆ ಸೆಟ್ಲ್‌ಮೆಂಟ್ ಆದಮೇಲೆ ಎಷ್ಟರಮಟ್ಟಿಗೆ ಯಾವ ಪ್ರಮಾಣದಲ್ಲಿ ಜಮೀನಿನ ಕಂದಾಯ ಜಾಸ್ತಿಯಾಗಿದೆ; ಪ್ರತಿ ಎಕರೆಗೆ ಎಷ್ಟು ರೇಟು ಹೆಚ್ಚಾಗಿದೆ, ಎಂಬುದನ್ನು ನೋಡಿದರೆ ಬಹಳ ಜನಗಳಿಗೆ ಒಂದು ರೀತಿಯ ಭಾರವಾಗಿ ಪರಿಣಮಿಸಿದೆ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ, ಈಗ ಉದಾಹರಣೆಗೆ ಹೇಳಬೇಕಾದರೆ ಅನೇಕ ರೀತಿಯ ಲ್ಯಾಂಡ್ಸ್ ಕ್ಲಾಸಿಫಿಕೇಷನ್ ಮಾಡಿ 29 ಜೋನ್‌ಗಳನ್ನು ಮಾಡಿ ಒಂದೊಂದು ಜೋನ್‌ನಲ್ಲಿ ಅನೇಕ ಜಮೀನುಗಳನ್ನು ವಿಭಾಗ ಮಾಡಿ ಕೆಲವು ಭೂಮಿಯನ್ನು ನಾಲ್ಕು ತರಹ ಭಾಗವಾಗಿ ವಿಂಗಡಿಸಿ, ಕೆಲವು ಭೂಮಿಯನ್ನು 3 ತರಹ, ಭಾಗವಾಗಿ ವಿಂಗಡಿಸಿ, ಮತ್ತೆ ಕೆಲವು ಭೂಮಿಯನ್ನು 2 ತರಹವಾಗಿ ವಿಂಗಡಿಸಿ, ಆಯಾಯ ಜೋನ್‌ನಲ್ಲಿ ಕಂದಾಯದ ಪ್ರಮಾಣವನ್ನು ನಿಗದಿ ಮಾಡಿ ಅದನ್ನು ಜಾರಿಗೆ ತಂದಿದ್ದಾರೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಸರ್ಕಾರದವರು ರೀ ಸೆಟ್ಲ್‌ಮೆಂಟ್ ಪ್ರಕಾರ ಜಮೀನಿಗೆ ಕಂದಾಯವನ್ನು ನಿಗದಿ ಮಾಡುವಾಗ ಜಮೀನನ್ನು ಡ್ರೈ ಲ್ಯಾಂಡ್; ವೆಟ್ ಲ್ಯಾಂಡ್; ಗಾರ್ಡನ್ ಲ್ಯಾಂಡ್, ಎಂದು ವಿಂಗಡಿಸಿಕೊಂಡು ಅನೇಕ ವಿಧವಾದ ತೆರಿಗೆಯನ್ನು ಹಾಕಿದ್ದಾರೆ. ಇದರಲ್ಲಿ ಯಾವುದೇ ತಾರತಮ್ಯ ಇಲ್ಲ ಎಂದು ನಾವು ಖಚಿತವಾಗಿ ಹೇಳಬೇಕಾಗುತ್ತದೆ. ಈಗ ಉದಾಹರಣೆಗೆ ಹೇಳಬೇಕಾಗಿದ್ದರೆ ಲಿಂಗಸೂರ್‌ನಲ್ಲಿ ವೆಟ್ ಲ್ಯಾಂಡಿಗೆ ಒಂದು ಎಕರೆಗೆ 6 ರೂಪಾಯಿ 54 ಪೈಸಾ ಇದೆ. ಗಾರ್ಡನ್ ಲ್ಯಾಂಡಿಗೆ 6–54 ಇದೆ. ಜಮೀನನ್ನು 3 ತರಹ ವಿಂಗಡಿಸಿ ಅದಕ್ಕೆ 6 ರೂಪಾಯಿ 54 ಪೈಸಾ ಮಾತ್ರ ಕಂದಾಯವನ್ನು ನಿಗದಿ ಮಾಡಿದ್ದಾರೆ. ಕೊಪ್ಪಾಳ್‌ನಲ್ಲಿ ವೆಟ್‌ಲ್ಯಾಂಡಿಗೆ 15 ರೂಪಾಯಿ 65 ಪೈಸಾ ನಿಗದಿ ಮಾಡಿದ್ದಾರೆ. ಗಾರ್ಡನ್ ಲ್ಯಾಂಡಿಗೆ 3–45 ಪೈಸಾವನ್ನು ನಿಗದಿ ಮಾಡಿದ್ದಾರೆ. ಅಲ್ಲಿ 2, 3 ಮತ್ತು 4 ನೇ ದರ್ಜೆಯ ಜಮೀನಿಗೆ 15–65 ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ಬಸಾಪುರದ ವಿಷಯವನ್ನು ತೆಗೆದುಕೊಂಡರೆ ಅಲ್ಲಿ ವೆಟ್ ಲ್ಯಾಂಡಿಗೆ ಒಂದು

ಎಕರೆಗೆ 7 ರೂಪಾಯಿ 50 ಪೈಸಾವನ್ನು ನಿಗದಿ ಮಾಡಿದ್ದಾರೆ. ಗಾರ್ಡನ್ ಲ್ಯಾಂಡಿಗೆ 1 ರೂಪಾಯಿ 35 ಪೈಸಾವನ್ನು ನಿಗದಿ ಮಾಡಿದ್ದಾರೆ. ಎರಡನೇ ದರ್ಜೆಯ ವೆಟ್ ಲ್ಯಾಂಡಿಗೆ 7 ರೂಪಾಯಿ 52 ಪೈಸಾವನ್ನು ನಿಗದಿ ಮಾಡಿದ್ದಾರೆ. ಕೊನೆ ದರ್ಜೆಯ ಗಾರ್ಡನ್ ಲ್ಯಾಂಡಿಗೆ 96 ಪೈಸಾವನ್ನು ನಿಗದಿ ಮಾಡಿದ್ದಾರೆ. ಆ ಮೇಲೆ ಬಳ್ಳಾರಿ ಜಿಲ್ಲೆಯನ್ನು ತೆಗೆದುಕೊಂಡರೆ ಗಾರ್ಡನ್ ಲ್ಯಾಂಡಿಗೆ 12–52 ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ವೆಟ್ ಲ್ಯಾಂಡಿಗೆ 13 ರೂಪಾಯಿ 70 ಪೈಸಾವನ್ನು ನಿಗದಿ ಮಾಡಿದ್ದಾರೆ. ಕ್ಲಾಸಿಫಿಕೇಷನ್ ಆಫ್ ಲ್ಯಾಂಡ್ ವಿಂಗಡಿಸಿ ಸರ್ವೆ ಸಾಧಾರಣವಾಗಿ ಅಧಿಕಾರಿಗಳು ಸ್ಥಳಕ್ಕೆ ಸಂದರ್ಶನ ಕೊಟ್ಟು ಜಮೀನಿನ ಗುಣ ವಗೈರೆಗಳನ್ನು ನೋಡಿ ಕಾನೂನು ರೀತ್ಯಾ ಕಂದಾಯವನ್ನು ನಿರ್ಧಾರ ಮಾಡಿದ್ದರೆ ಸ್ವಾಭಾವಿಕ ವಾಗಿ ಕಂದಾಯದ ದರಗಳಲ್ಲಿ ವ್ಯತ್ಯಾಸ ಆಗಬೇಕಾಗಿತ್ತು. ಆದರೆ ಅದು ಆಗಲಿಲ್ಲ. ಇದರಿಂದ ಜನಗಳಿಗೆ ತೊಂದರೆಯಾಗಿದೆ. ಈ ಬಗ್ಗೆ ಉದಾಹರಣೆಗೆ ಹೇಳಬೇಕಾಗಿದ್ದರೆ ರಾಯಚೂರು ಜಿಲ್ಲೆಯಲ್ಲಿ ಕುಷ್ಟಗಿ, ಯಲಬುರ್ಗಿ, ಕೊಪ್ಪಳ್ ಮುಂತಾದ ಅನೇಕ ಗ್ರಾಮಗಳಲ್ಲಿ ಕಂದಾಯದ ಮೊದಲಿನ ದರದ 3 ಪಟ್ಟು, 4 ಪಟ್ಟು 4½ ಪಟ್ಟು ಹೆಚ್ಚಾಗಿದೆ ಎಂದು ನಾನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಇದರಿಂದ ಸರ್ವೆ ಸಾಧಾರಣವಾಗಿ ಸಾಮಾನ್ಯ ರೈತರಿಗೆ ಬಹಳ ತೊಂದರೆ ಯಾಗಿದೆ. ಅವರಿಗೆ ಕಂದಾಯದ ಭಾರ ಹೆಚ್ಚಾಗಿದೆ ಎಂದು ನಾನು ಸ್ಪಷ್ಟವಾಗಿ ತಿಳಿಸಬಯಸು ತ್ತೇನೆ. ಲಿಂಗಸುಗೂರು ಮತ್ತು ಕುಷ್ಟಗಿ ಪ್ರದೇಶದ ವಿಷಯವನ್ನು ಹೇಳಬೇಕಾಗಿದ್ದರೆ ಅಲ್ಲಿಯೂ ಸಹ ಇದೇ ಪರಿಸ್ಥಿತಿ ಇದೆ. ಅಲ್ಲಿ ಯಾವುದೇ ವೆಟ್ ಲ್ಯಾಂಡ್ಸ್ ಇಲ್ಲ. ವೆಟ್ ಲ್ಯಾಂಡ್ ಕ್ರಾಪ್ಸ್ ಬೆಳೆಯುವ ಅನುಕೂಲವಿಲ್ಲ. ಎಲ್ಲಿ ವೆಟ್ ಲ್ಯಾಂಡ್ ಮತ್ತು ಗಾರ್ಡನ್ ಲ್ಯಾಂಡ್ ಎಲ್ಲವನ್ನೂ ಕ್ಲಾಸಿಫೈ ಮಾಡಿ ಕಂದಾಯದ ದರವನ್ನು ನಿಗದಿ ಮಾಡುವುದು ಸರಿಯಾಗಿಲ್ಲ ಎಂದು ನಾನು ಹೇಳಬಯಸುತ್ತೇನೆ. ಆದ್ದರಿಂದ ನನ್ನ ಅನೇಕ ಸ್ನೇಹಿತರು ಈಗಾಗಲೇ ಹೇಳಿದ ಹಾಗೆ ಆ ವಿಷಯವನ್ನು ಗಣನೆಗೆ ತೆಗೆದುಕೊಂಡು ರೈತರ ಬೇಡಿಕೆಯ ಮೇಲೆ, ಈ ಸಭೆಯ ಸದಸ್ಯರ ಬೇಡಿಕೆಯ ಮೇಲೆ ರೀಸೆಟ್ಲ್‌ಮೆಂಟ್ ಪ್ರಕಾರ ಎಲ್ಲೆಲ್ಲಿ ರೈತರಿಗೆ ಅನ್ಯಾಯ ಆಗಿದೆಯೋ ಅಲ್ಲೆಲ್ಲಾ ಅದನ್ನು ಸರಿಪಡಿಸಬೇಕು; ಅದನ್ನು ಕಡಿಮೆ ಮಾಡುವುದಕ್ಕೆ ಕಾನೂನು ರೀತ್ಯಾ ಅಧಿಕಾರವನ್ನು ತೆಗೆದುಕೊಳ್ಳುವ ಒಳ್ಳೆಯ ಸದುದ್ದೇಶದಿಂದ ಈ ವಿಧೇಯಕವನ್ನು ಸರ್ಕಾರದವರು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಈ ತಿದ್ದುಪಡಿ ಮಸೂದೆಯನ್ನು ಪಾಸು ಮಾಡದಿದ್ದರೆ ಸರ್ಕಾರದವರು ರೈತರಿಗೆ ಯಾವುದೇ ತರಹ ಸಹಾಯವನ್ನೂ ಮಾಡುವುದಕ್ಕಾಗುವುದಿಲ್ಲ. ಮತ್ತು ರೈತರ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಆ ಒಂದು ಸದುದ್ದೇಶದಿಂದ ಈ ವಿಧೇಯಕವನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಇಂಥ ಒಳ್ಳೆಯ ಉದ್ದೇಶದಿಂದ ತಂದಂತಹ ವಿಧೇಯಕವನ್ನು ಸ್ವಾಭಾವಿಕವಾಗಿ ಹೃತ್ಪೂರ್ವಕವಾಗಿ ಎಲ್ಲರೂ ಸ್ವಾಗತಿಸಲೇಬೇಕು. ಇದನ್ನು ವಿರೋಧಿಸುವುದರಲ್ಲಿ ಯಾವ ತರದ ತತ್ವವೂ ಅಥವಾ ಹುರುಳೂ ಇಲ್ಲವೆಂದು ನಾನು ಅಭಿಪ್ರಾಯ ಪಡುತ್ತೇನೆ. ಈ ಸಂದರ್ಭದಲ್ಲಿ ಅನೇಕ ಹಿರಿಯ ಅನು ಭವಿಗಳು ತಾತ್ವಿಕವಾದ ಅನೇಕ ಸಮಸ್ಯೆಗಳನ್ನು ಎತ್ತಿ ಲ್ಯಾಂಡ್ ರೆವೆನ್ಯೂ, ಲ್ಯಾಂಡ್ ಟ್ಯಾಕ್ಸ್, ಲ್ಯಾಂಡ್ ರೆಂಟ್ ಎನ್ನುವ ವಿಷಯವಾಗಿ ಮಾತನಾಡಿದರು. ನಾನು ಅದಕ್ಕೆ ಹೋಗುವುದಿಲ್ಲ. ಇಷ್ಟು ಮಾತ್ರ ಹೇಳುತ್ತೇನೆ. ಮಾನ್ಯ ಸದಸ್ಯರಾದ ಚನ್ನಬಸಪ್ಪನವರು ಈ ಪ್ರಶ್ನೆಯನ್ನು ಎತ್ತಿ ದಾಗ ಮಾನ್ಯ ಮಂತ್ರಿಯವರು ಉತ್ತರ ಕೊಡುತ್ತಾ, ಇದು ಲ್ಯಾಂಡ್ ರೆಂಟ್ ಎಂದು ಹೇಳಿದರು. ಹಾಗೆ ಹೇಳುವುದು ಉಚಿತ. ನಾನು ತಾತ್ವಿಕವಾದ ಯಾವುದೇ ರೀತಿಯ ಆರ್ಗ್ಯುಮೆಂಟಿಗೆ ಹೋಗದೆ ಈಗಿರತಕ್ಕಂತಹ ತೊಂದರೆಗಳನ್ನು ನಿವಾರಿಸಲಿಕ್ಕೆ ಸರ್ವೇ ಸಾಧಾರಣವಾಗಿ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಒಂದು ಸದುದ್ದೇಶದಿಂದ ಸಚಿವರು ಈ ವಿಧೇಯಕವನ್ನು ತಂದಿ ದ್ದಾರೆ. ಇದರ ಬಗ್ಗೆ ಸ್ಪಷ್ಟವಾದ ನಮ್ಮ ಅಭಿಪ್ರಾಯ ತಿಳಿಸಬೇಕೇ ವಿನಹ ಇಲ್ಲದ ಗೊಂದಲ ಉಂಟು ಮಾಡುವ ಪ್ರಯತ್ನಗಳನ್ನು ಮಾಡಿದರೆ, ಅದು ಯಾವ ರೀತಿಯಲ್ಲೂ ಫಲಕಾರಿಯಾಗುವುದಿಲ್ಲ ವೆಂದು ಹೇಳಬಯಸುತ್ತೇನೆ. ಸರ್ಕಾರದವರು ಸ್ವತಃ ಈಗ ಇದ್ದಂತಹ ರೀಸೆಟ್ಲ್‌ಮೆಂಟ್ ಪ್ರಕಾರ ಲ್ಯಾಂಡ್ ರೆವೆನ್ಯೂ ಹೆಚ್ಚಾಗಿದೆ ಎಂದು ತಿಳಿದುಕೊಂಡು ಅನೇಕ ರೀತಿಯ ಮಾಹಿತಿಗಳನ್ನು ಕೊಡ ಬೇಕೆಂದು ಕಾಗದ ಪತ್ರಗಳನ್ನು ಒದಗಿಸಿದ್ದಾರೆ. ಅವನ್ನು ಅವಲೋಕಿಸಿದರೆ, ಖಚಿತವಾದ ಒಂದು ನಿರ್ಣಯಕ್ಕೆ ಬಂದಿಲ್ಲ ನಿಶ್ಚಿತವಾದ ಒಂದು ಧೋರಣೆ ತಳೆದಿಲ್ಲ ಎನ್ನುವುದು ಸ್ಪಷ್ಟವಾಗಿ ತೋರುತ್ತದೆ. ಅವರ ಹೇಳಿಕೆಯ ಪ್ರಕಾರ 13–9–68ರಲ್ಲಿ ಗಾರ್ಡನ್ ಲ್ಯಾಂಡ್, ರೈನ್‌ಫೆಡ್ ವೆಟ್ ಲ್ಯಾಂಡ್, ಇವುಗಳಿಗೆ ಹಳೆಯ ರೇಟ್ ಪ್ರಕಾರ ತೆಗೆದುಕೊಳ್ಳಬಹುದು ಎಂದು ಹೇಳಿ ಒಂದು ಸರ್ಕ್ಯುಲರ್ ಕಳಿ ಸಿದ್ದಾರೆ. ಅದರಲ್ಲಿರುವ ಒಂದೆರಡು ವಾಕ್ಯಗಳನ್ನು ಇಲ್ಲಿ ಉದಾಹರಿಸಬಯಸುತ್ತೇನೆ.

"There is a proposal under the Consideration of the Government......in respect of Garden lands and wet lands in certain zones......"

(ಶ್ರೀ ಕೆ. ಸಂಗನಗೌಡ)

ಆದರೆ ಇಲ್ಲಿ ವೆಟ್ ಲ್ಯಾಂಡ್ಸ್ ಅಥವಾ ಗಾರ್ಡನ್ ಲ್ಯಾಂಡ್ಸ್ ಪ್ರಶ್ನೆ ಇಲ್ಲ. ಒಟ್ಟಾರೆ ಎಷ್ಟು ಪ್ರಮಾಣದಲ್ಲಿ ಕಂದಾಯ ಹೆಚ್ಚಾಗಿದೆ, ಯಾವ ಪ್ರಮಾಣದಲ್ಲಿ ಇಳಿಸಬೇಕೆಂಬುದು ಸರ್ಕಾರದ ಗಮನದಲ್ಲಿದೆ. ಅನೇಕ ಭಾಗಗಳಲ್ಲಿ ಅನೇಕ ರೀತಿಯಿಂದ ಕಂದಾಯ ವಸೂಲಿಯ ಪದ್ಧತಿ ಜಾರಿಯಲ್ಲಿದೆ. ಹೈದರಾಬಾದ್ ಕರ್ಣಾಟಕದಲ್ಲಿ ನನಗೆ ತಿಳಿದ ಹಾಗೆ ಕಾನೂನು ಮಾಹಿತಿ ಪ್ರಕಾರ ಹೇಳಬೇಕಾದರೆ, ಹೊಸ ಕಾನೂನು ಜಾರಿಗೆ ಬರುವುದಕ್ಕಿಂತ ಮುಂಚೆ ಗಾರ್ಡನ್ ಲ್ಯಾಂಡ್ಸ್ ಬಗ್ಗೆ ಯಾವ ರೀತಿಯ ವಿಶೇಷವಾದ ಕಂದಾಯ ಇರಲಿಲ್ಲ. ರೈತನು ತನ್ನ ಸ್ವಂತ ಖರ್ಚಿನಿಂದ ಬಾವಿ ತೆಗೆದುಕೊಂಡು ಗಾರ್ಡನ್ ಕ್ರಾಪ್ಸ್ ಬೆಳೆಯುತ್ತಾ ಇದ್ದರೆ, ಅಂಥ ಜಮೀನುಗಳ ಮೇಲೆ ಕರ ಹಾಕುತ್ತಾ ಇರಲಿಲ್ಲ. ಆದರೆ ಹೊಸದಾಗಿ ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ರೀಸೆಟಲ್‌ಮೆಂಟ್ ಮಾಡಿದ ಮೇಲೆ ಹೆಚ್ಚಾಗಿ ಕರ ಹಾಕುತ್ತಿದ್ದಾರೆ. ಹಿಂದೆ ಒಂದು ಸರ್ಕ್ಯುಲರ್ ಕೂಡ ಹೊರಡಿಸಿ ವಿಶೇಷವಾಗಿ ಗಾರ್ಡನ್ ಲ್ಯಾಂಡ್ಸ್ ಮೇಲೆ ಯಾವ ರೀತಿಯ ಕರ ಹಾಕಲಿಕ್ಕೆ ಕೂಡದು, ಒಂದು ವೇಳೆ ಆ ರೀತಿಯ ಕರವನ್ನು ಹಾಕಿದರೆ ಅದನ್ನು ತೆಗೆದುಹಾಕಬೇಕೆಂದು ಹೇಳಿದ್ದಾರೆ. ಆದ್ದರಿಂದ ಈಗ ರೈತರಿಗೆ ಈ ಕರದ ದೆಸೆಯಿಂದ ಉಂಟಾಗಿರುವ ತೊಂದರೆಗಳನ್ನು ನಿವಾರಿಸಬೇಕೆಂದು ಹೇಳಬಯಸುತ್ತೇನೆ. ಇನ್ನು ಹೈದರಾಬಾದ್ ಕರ್ಣಾಟಕದ ಅನೇಕ ಭಾಗಗಳಲ್ಲಿ ಅಂದರೆ, ಗುಲ್ಬರ್ಗ ಮತ್ತು ಬಿಜಾಪುರ ಭಾಗಗಳಲ್ಲಿ ಸರ್ಫ್ ಎ-ಖಾಸ್ ಮತ್ತು ಫಾಯಿಂಗ್ ಲ್ಯಾಂಡ್ಸ್ ಇದ್ದವು. ಜಾಗೀರ್ದಾರರು ಹೆಚ್ಚು ಹಣ ಬೇಕು ಎನ್ನುವ ಉದ್ದೇಶದಿಂದ ಆಗಲೇ ಸಾಕಷ್ಟು ಪ್ರಮಾಣದಲ್ಲಿ ಲ್ಯಾಂಡ್ ರೆವೆನ್ಯೂ ಹೆಚ್ಚಿಸಿದ್ದರು. ಜಮೀನು ಕಂದಾಯ ಹೆಚ್ಚು ಆದ ಮೇಲೆ ಪುನರ್ವಿಮರ್ಶೆಯಾದ ಕಾಲಕ್ಕೆ ರಿಸೆಟಲ್‌ಮೆಂಟ್ ಆದ ಕಾಲಕ್ಕೆ ಅಂಥ ಜಮೀನುಗಳ ಮೇಲೆ ಹೆಚ್ಚು ಭಾರ ಹೇರಿದ್ದರಿಂದ ಅಲ್ಲಿಯ ಜನರು ತೊಂದರೆಗೆ ಈಡಾಗಿದ್ದಾರೆ. ಸರ್ಕಾರದವರು ಇದನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಬೀದರ್ ಜಿಲ್ಲೆ, ಅಷ್ಟೇ ಅಲ್ಲ, ಹೈದರಾಬಾದ್ ಕರ್ಣಾಟಕದ ಇತರ ಭಾಗಗಳಲ್ಲಿಯೂ ಕೂಡ ಹೆಚ್ಚಿನ ಮಟ್ಟಿಗೆ ತೊಂದರೆಯಾಗಿದೆ. ಮತ್ತು ಜನರಿಗೆ ಈ ಕರ ಭಾರವಾಗಿ ಪರಿಣಮಿಸಿದೆ ಎಂದು ಹೇಳಬಯಸುತ್ತೇನೆ. ಈ ಪ್ರಸಂಗದಲ್ಲಿ ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಮಾನ್ಯ ಸಭಾಪತಿಯವರೇ, ನಾನು ಶ್ರೀಮಾನ್ ಕೌಜಲಗಿಯವರ ಬಗ್ಗೆ ವಿಶೇಷವಾದ ಗೌರವವನ್ನು ಇಟ್ಟುಕೊಂಡಿದ್ದೇನೆ. ಅವರು ರೈತ ಮನೆತನದಿಂದ ಬಂದವರು, ಆದ್ದರಿಂದ ರೈತರ ಕಷ್ಟಸುಖಗಳನ್ನು ಅರಿತಿದ್ದಾರೆ. ರೈತರಿಗೆ ಯಾವ ವಿಧವಾದ ತೊಂದರೆಯನ್ನು ಮಾಡದೆ ಬಡ ರೈತರಿಗೆ ಹೆಚ್ಚಿನ ಸಹಾಯವನ್ನು ಮಾಡುತ್ತಾರೆಂದು ನಂಬಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಕಂದಾಯ ಹೇಗೆ ಹಾಕುತ್ತಾರೆ, ಅದು ತೆರಿಗೆಯೋ ಅಥವಾ ಗೇಣಿಯೋ ಎನ್ನುವ ವಿಚಾರಗಳಿಗೆ ನಾನು ಹೋಗುವುದಿಲ್ಲ. ಒಂದೆರಡು ವಿಚಾರಗಳನ್ನು ಮಾತ್ರ ಸ್ಥೂಲವಾಗಿ ಹೇಳುತ್ತೇನೆ. ನಾನು ಮಂಡ್ಯ ಜಿಲ್ಲೆಯ ಪಾಂಡವಪುರದ ತಾಲ್ಲೂಕಿನಿಂದ ಬಂದಿರತಕ್ಕವನು ಮಂಡ್ಯ ಜಿಲ್ಲೆಯಲ್ಲಿ ನಮಗೆ ನೀರಾವರಿ ಸೌಕರ್ಯಗಳು ಬಹು ಕಾಲದಿಂದ ಇವೆ. ಈ ಒಂದು ಅಂಶವನ್ನು ಕಂದಾಯ ಮಂತ್ರಿಯವರು ಗಮನಕ್ಕೆ ತಂದರೆ, ನಾನು ಮಾಡಿದ ಪ್ರಯತ್ನ ಸಾರ್ಥಕವಾಯಿತು ಎಂದು ನಾನು ಭಾವಿಸುತ್ತೇನೆ. ಮಂಡ್ಯ ಜಿಲ್ಲೆಯಲ್ಲಿ ಹೊಸದೇನೂ ಮಾಡಿಲ್ಲ. ಈಗಿರತಕ್ಕಂತವು ಎಲ್ಲವೂ 1944ರ ಹಿಂದೆ ಮಾಡಿದಂತಹ ಹಳೆಯ ಸೌಕರ್ಯಗಳು ಮಾತ್ರ.

(ಉಪಸಭಾಪತಿಯವರು ಪೀಠವನ್ನು ಅಲಂಕರಿಸಿದರು)

ತಾವು ತಂದಿರತಕ್ಕಂತಹ ಅಮೆಂಡ್‌ಮೆಂಟ್ ಲ್ಯಾಂಡ್ ರೆವೆನ್ಯೂ ಕೋಡಿಗೆ ಸಂಬಧಪಟ್ಟದ್ದು. ನಾನು ವಿನಯದಿಂದ ಮಾನ್ಯ ಮಂತ್ರಿಯವರ ಗಮನಕ್ಕೆ ಈ ವಿಚಾರವನ್ನು ತರುತ್ತೇನೆ. ಹಿಂದಿನ ಲ್ಯಾಂಡ್ ರೆವೆನ್ಯೂ ಕೋಡಿನ 133ನೇ ವಿಧಿಯಲ್ಲಿ ಈ ವಿಚಾರದ ಬಗ್ಗೆ ಕೆಳಕಂಡಂತೆ ಹೇಳಿದ್ದಾರೆ.

> "The Annual rate for the supply of water is stated in Section 133 of the Land Revenue Manual to be a portion of the land assessment."

ಶ್ರೀ ಗುಂಡಪ್ಪ ಗೌಡ ಸಮಿತಿಯವರೂ ಕೂಡ ನೀರು ತೆರಿಗೆಯನ್ನು ಬೇರ್ಪಡಿಸುವುದು ಸಾಧ್ಯವೂ ಅಲ್ಲ, ಸಾಧುವೂ ಅಲ್ಲ ಎಂದು ಒಮ್ಮತ ತೀರ್ಮಾನಕ್ಕೆ ಬಂದಿದ್ದಾರೆ. ಇದಕ್ಕೆ ಯಾವ ಅನುಮಾನವೂ ಇಲ್ಲವೆಂದು ಹೇಳುತ್ತೇನೆ. ಲ್ಯಾಂಡ್ ರೆವೆನ್ಯೂಗೆ ಸೇರಿಸಿರತಕ್ಕ ನೀರಿನ ಕಂದಾಯವನ್ನು ಈಗಲೂ ಕೂಡ ನೀರಿನ ಕಂದಾಯವೆಂದು ನಮ್ಮ ಕಡೆ ಕರೆಯುತ್ತಾರೆ. ನೀರಿನ ತೆರಿಗೆಯನ್ನು ರಿವಿಜನ್

ಸೆಟ್ಲ್‌ಮೆಂಟ್ ಪ್ರಕಾರ ವಿಭಾಗಿಸಿ, ಖುಷ್ಕಿ ಕಂದಾಯ, ಮತ್ತು ನೀರು ಕಂದಾಯವೆಂದು ಬೇರೆ ಬೇರೆ ಮಾಡಿದ್ದಾರೆ. ಹೀಗೆ ಮಾಡುವುದರಿಂದ ತೆರಿಗೆ ಹೊರೆ ಎಷ್ಟು ಹೆಚ್ಚಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ನಾವು ಮೊದಲು ಕೊಡುತ್ತಿದ್ದದ್ದು ಒಂದು ಎಕರೆ 36 ಗುಂಟೆಗೆ ಕೇವಲ 9 ರೂಪಾಯಿ 37 ಪೈಸೆ. ಈಗ ಸ್ಟ್ಯಾಂಡರ್ಡ್ ರೇಟ್ ಪ್ರಕಾರ 26 ರೂಪಾಯಿ 56 ಪೈಸೆ ಕೊಡಬೇಕಾಗಿದೆ. ಇದು ಬಹಳ ಜಾಸ್ತಿ. ನನಗೆ ರಾಜ್ಯಾಂಗದತ್ತವಾಗಿ ಬಂದಿರತಕ್ಕ ಹಕ್ಕು ನೀರನ್ನು ಉಪಯೋಗಿಸಿಕೊಂಡು ಬೆಳೆ ಮಾಡುವುದು. 52ರಲ್ಲಿ ಹೊಸ ರಾಜ್ಯಾಂಗ ಒಪ್ಪಿಕೊಂಡ ಮೇಲೆ ರೈತರಿಗೆ ನೀರನ್ನು ಜಮೀನಿನಲ್ಲಿ ಉಪಯೋಗಿಸಿಕೊಳ್ಳತಕ್ಕ ಹಕ್ಕು ಬಂತು. ಅದಕ್ಕೆ ಸರ್ಕಾರದವರು ಮೊದಲನೆಯ ಸೆಟ್ಲ್‌ಮೆಂಟ್ ಪ್ರಕಾರ ಅತೀ ಹೆಚ್ಚು ಅಂದರೆ, 14 ರೂಪಾಯಿಗೆ ಮೀರದಂತೆ ತೆರಿಗೆ ಹಾಕುತ್ತಿದ್ದರು. ಈಗ ಹೊಸದಾಗಿ ತಂದಿರತಕ್ಕ ಕಾನೂನು ಪ್ರಕಾರ ಬದಲಾವಣೆ ಮಾಡಿ, ನೀರಿನ ತೆರಿಗೆಯ ಹೆಸರಿನಲ್ಲಿ ಜಾಸ್ತಿ ಹಣವನ್ನು ರೈತರಿಂದ ವಸೂಲು ಮಾಡುತ್ತಿದ್ದಾರೆ. ಯಾವ ಹೆಸರಿನಲ್ಲಿ ವಸೂಲು ಮಾಡಿದರೂ ತೆರಿಗೆಯ ಭಾರ ರೈತನ ಮೇಲೆಯೇ ಬೀಳುತ್ತದೆ.

ಅಂದರೆ ಮಾನ್ಯ ಕಂದಾಯದ ಮಂತ್ರಿಗಳು ರೈತನಿಂದ ಕಂದಾಯದ ಜೊತೆಗೆ ನೀರಿನ ತೆರಿಗೆಯನ್ನು ಕೂಡ ತೆಗೆದುಕೊಂಡರೆ ಅತನಿಗೆ ಏನೂ ತೊಂದರೆಯಾಗುವುದಿಲ್ಲವೆಂದು ತಿಳಿದುಕೊಂಡಿರುವ ಹಾಗೆ ಕಾಣುತ್ತದೆ ಒಂದು ಎಕರೆಗೆ 45 ರೂಪಾಯಿಗಳಿಗಿಂತ ಜಾಸ್ತಿ ಕಂದಾಯ ಕೊಡುವುದಕ್ಕೆ ರೈತನಿಗೆ ಸಾಧ್ಯ ಇದೆಯೇ ಎಂಬುದನ್ನು ಮಾನ್ಯ ಕಂದಾಯ ಮಂತ್ರಿಗಳು ಕಂದಾಯವನ್ನು ಜಾಸ್ತಿ ಮಾಡುವ ಮೊದಲು ಮನವರಿಕೆ ಮಾಡಿಕೊಳ್ಳಬೇಕಾಗಿತ್ತು. ವಿಜಯನಗರದ ಕೃಷ್ಣದೇವರಾಯ ಮತ್ತು ಅಚ್ಯುತರಾಯನ ಕಾಲದಲ್ಲಿ ಕಂದಾಯ ವಿಧಿಸುವುದಕ್ಕೆ ಒಂದು ತತ್ವವನ್ನು ಇಟ್ಟುಕೊಂಡಿದ್ದರು. ಮೈಸೂರು ಗೆಜಿಟಿಯರ್‌ನಲ್ಲಿ ಆ ಕಾಲದ ಕಂದಾಯ ಪದ್ಧತಿಯ ಬಗ್ಗೆ ಈ ರೀತಿ ಹೇಳಿದ್ದಾರೆ.

> "Revenue were first reduced to a regular form regulated by ordinances and a system of accounts and managements was introduced, calculated to improve the revenue of the empire gradually *without causing undue hardship or distress to the subjects.*"

ಕೊನೆಯ ವಾಕ್ಯ ಬಹಳ ಮುಖ್ಯವಾದುದು. ಅವರು ಪ್ರಜೆಗಳಿಗೆ ಯಾವ ರೀತಿಯಿಂದಲೂ ಕೂಡ ತೊಂದರೆ ಕೊಡದಾಗೆ ಕಂದಾಯವನ್ನು ವಿಧಿಸುತ್ತಿದ್ದರು. ಪುನರ್ವಿಮರ್ಶಿತ ಕಂದಾಯದ ಪ್ರಕಾರ ಯಾವ ಭಾಗದಲ್ಲಿಯೂ ಜಾಸ್ತಿ ಕಂದಾಯವನ್ನು ವಸೂಲಿ ಮಾಡುತ್ತಿಲ್ಲವೆಂದು ಮಾನ್ಯ ಕಂದಾಯದ ಮಂತ್ರಿಗಳು ಹೇಳುತ್ತಾರೆ. ಮಂಡ್ಯ ಜಿಲ್ಲೆಯ ರೈತರು ಮೊದಲು ಕಂದಾಯದ ಬಾಬತ್ತು 5,20,359 ರೂಪಾಯಿಗಳನ್ನು ಕೊಡುತ್ತಿದ್ದರೆ, ಈಗ 5,30,031 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇತರೇ ಸೆಸ್‌ಗಳು ಸೇರಿ 9,27,544 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇದರ ಜೊತೆಗೆ ಸರ್‌ಚಾರ್ಜನ್ನು ವಸೂಲಿ ಮಾಡುತ್ತಿದ್ದಾರೆ. ಇದನ್ನು 1962ರಲ್ಲಿ ಜಾರಿಗೆ ತರಲಾಯಿತು. ರಾಷ್ಟ್ರೀಯ ಗಂಡಾಂತರ ಕಾಲದಲ್ಲಿ ರೈತರು ಸರ್‌ಚಾರ್ಜನ್ನು ಕೊಡುವುದಕ್ಕೆ ಒಪ್ಪಿದ್ದರು. ತುರ್ತು ಪರಿಸ್ಥಿತಿ ಇಲ್ಲದಾಗ ಈ ಸರ್ ಛಾರ್ಜನ್ನು ಕೊಡುವುದಕ್ಕೆ ರೈತರ ವಿರೋಧವಿದೆ. ಲ್ಯಾಂಡ್ ಸರ್‌ಚಾರ್ಜನ್ನು ತಾತ್ಕಾಲಿಕವಾಗಿ ಹಾಕಬಹುದೇ ಹೊರತು ಸರ್ವಕಾಲಕ್ಕೆ ಹಾಕುವುದಕ್ಕೆ ಬರುವುದಿಲ್ಲ. ನೀರಿನ ತೆರಿಗೆಯ ರೂಪದಲ್ಲಿ ಮಂಡ್ಯ ಜಿಲ್ಲೆಯವರು 33 ಲಕ್ಷದ 75 ಸಾವಿರ ರೂಪಾಯಿಗಳನ್ನು ಕೊಡಬೇಕಾಗಿದೆ. ಸೋಷಿಯಲ್ ಕಾಸ್ಟ್ ಅಂಡ್ ಬೆನಿಫಿಟ್ ತತ್ವದ ಆಧಾರದಮೇಲೆ ನೀರಿನ ತೆರಿಯನ್ನು ಹಾಕಬೇಕಾಗಿತ್ತು. ಆದರೆ ಮಾನ್ಯ ಮಂತ್ರಿಗಳು ಯಾವ ಒಂದು ತತ್ವವನ್ನೂ ಸಹ ಇಟ್ಟುಕೊಳ್ಳದೆ ಖಜಾನೆ ಭರ್ತಿಯಾಗಬೇಂಬ ಒಂದೇ ದೃಷ್ಟಿಯಿಂದ ನೀರಿನತೆರಿಗೆ ಎಂಬುದಾಗಿ 33 ಲಕ್ಷದ 75 ಸಾವಿರ ರೂಪಾಯಿಗಳನ್ನು ಮಂಡ್ಯ ಜಿಲ್ಲೆಯಲ್ಲಿ ವಸೂಲಿ ಮಾಡುತ್ತಿದ್ದಾರೆ. ಮಂಡ್ಯ ಜಿಲ್ಲೆಯ ಜನರಿಗೆ ಈಗ ತಂದಿರುವ ಹೊಸ ತಿದ್ದುಪಡಿಯ ಮೂಲಕ ಪರಿಹಾರವನ್ನು ಕೊಡುವ ತನಕ ಮಾನ್ಯ ಮಂತ್ರಿಗಳು ಪಕ್ಷಪಾತದ ಆರೋಪಣೆಯಿಂದ ಮುಕ್ತರಾಗುವುದಿಲ್ಲವೆಂದು ಹೇಳುತ್ತೇನೆ. ಈ ತೆರಿಗೆಗಳ ಜೊತೆಗೆ ಮಂಡ್ಯ ಜಿಲ್ಲೆಯಲ್ಲಿ, ಈಗ ಇರುವ ಎರಡು ಫ್ಯಾಕ್ಟರಿಗಳಿಂದಲೇ ಸರ್ಕಾರಕ್ಕೆ ಬೇರೆಬೇರೆ ತೆರಿಗೆ ರೂಪದಲ್ಲಿ ಸುಮಾರು ಒಂದು ಕೋಟಿ 44 ಲಕ್ಷ ರೂಪಾಯಿಗಳ ವರಮಾನ ಬರುತ್ತಿದೆ. ಸರ್ಕಾರದವರು ಈ ಫ್ಯಾಕ್ಟರಿಗಳಿಂದ ಬರತಕ್ಕ ಆದಾಯವನ್ನು ಗಣನೆಗೆ ತೆಗೆದುಕೊಂಡಾದರೂ ಕೂಡ ಕಂದಾಯವನ್ನು ಕಡಿಮೆ ಮಾಡಬೇಕಾಗಿತ್ತು. ಕಂದಾಯದ ಹೊರೆ ಸಣ್ಣ ಹಿಡುವಳಿದಾರರಮೇಲೆ ಬಿದ್ದರೆ ಮಂಡ್ಯ ಜಿಲ್ಲೆಯಲ್ಲಿ ಒಂದು ಎಕರೆಗಿಂತ ಕಡಿಮೆ ಜಮೀನು ಇರುವವರು 10,368 ಜನರು ಇದ್ದಾರೆ, 5 ಎಕರೆಗಿಂತ ಕಡಿಮೆ ಜಮೀನು ಇರುವವರು 37,809 ಜನರು ಇದ್ದಾರೆ. 10 ಎಕರೆಗಿಂತ ಕಡಿಮೆ ಇರುವವರು

(ಶ್ರೀ ಎನ್. ಎ. ಚನ್ನೇಗೌಡ)

18,416 ಜನರು ಇದ್ದಾರೆ. ಒಟ್ಟು ಹಿಡುವಳಿದಾರರು 85,330 ಇದ್ದಾರೆ 48177 ಜನ 5 ಎಕರೆಗಿಂತ ಕಡಿಮೆ ಹಿಡುವಳಿ ಇರುವ ಜನರಾಗಿದ್ದಾರೆ. ಬಡರೈತರ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕಿದರೆ ಅವರಿಗೆ ಹಿಂಸೆಯಾಗುವುದಿಲ್ಲವೇ ಎಂದು ಕೇಳುತ್ತೇನೆ. ಮಾನ್ಯ ಕಂದಾಯ ಮಂತ್ರಿಗಳು ವಯೋವೃದ್ಧರು ಆಗಿದ್ದಾರೆ. ಇಂತಹವರ ಮೇಲೆ ಅವರಿಗೆ ಹೆಚ್ಚು ಅನುಕಂಪ ಇರಬೇಕು. ರೈತರ ಮೇಲೆ ಹೆಚ್ಚಿನ ಹೊರೆಯನ್ನು ತೆರಿಗೆ ರೂಪದಲ್ಲಿ ಹಾಕುವುದು ಸರಿಯಲ್ಲ. ಈ ರೀತಿ ತೆರಿಗೆಯನ್ನು ರೈತರ ಮೇಲೆ ಹಾಕಿದರೆ, ಅದರ ಒಂದು ಅಂಶವೂ ಬೇರೆಯವರ ಮೇಲೆ ಸಹ ಬೀಳುವುದಕ್ಕೆ ಅವಕಾಶವಿಲ್ಲ. Incidence of tax rests on the farmer. ಅರ್ಥ ಶಾಸ್ತ್ರಜ್ಞರು ಈ ರೀತಿ ಹೇಳಿದ್ದಾರೆ :

> "Even an exorbitant tax on agricultural land is likely to rest on the farmer. In contemporary low income countries the land tax is rarely an important source of revenue. Indirect taxes flood agriculture."

ಸೇಲನ್‌ಮನ್ನರು ಈ ರೀತಿ ಹೇಳಿದ್ದಾರೆ :

> "Under actual conditions the tax on agricultural land is but rarely shifted to the consumer."

ರೈತರು ಬರೀ ಕಂದಾಯವನ್ನು ಮಾತ್ರ ಕೊಡುತ್ತಿಲ್ಲ ಅವರಿಗೆ ಬಹಳ ತೆರಿಗೆಗಳು ಬೀಳುತ್ತಿವೆ. ಎಕರೆಗೆ ಸುಮಾರು 45 ರೂಪಾಯಿ ಕಂದಾಯ ಮತ್ತು ನೀರಿನ ತೆರಿಗೆ ಕೊಡುವುದರ ಜೊತೆಗೆ ಈ ದಿವಸ ರೈತರು ಬೇರೆ ಬೇರೆ ತೆರಿಗೆಯನ್ನು ಸಹ ಕೊಡಬೇಕಾಗಿದೆ. ಇದರ ಜೊತೆಗೆ ದೊಡ್ಡ ದೊಡ್ಡ ಕಂಪನಿಯವರು ಸರ್ಕಾರಕ್ಕೆ ಕೊಡುವಂತಹ ಸೇಲ್ಸ್ ಟ್ಯಾಕ್ಸ್ ಇನ್‌ಕಮ್ ಟ್ಯಾಕ್ಸ್ ಇತರ ಎಕ್ಸೈಜ್ ಡ್ಯೂಟಿಗಳನ್ನು ಸಹ ಕೊನೆಯ ಘಟ್ಟದಲ್ಲಿ ರೈತರು ಕೊಡಬೇಕಾಗುತ್ತದೆ. ಈ ಪ್ರಕಾರ ನಾನಾ ರೀತಿಯ ತೆರಿಗೆಗಳನ್ನು ಕೊಟ್ಟು ಕೊಟ್ಟು ರೈತರ ಬೆನ್ನು ಬಗ್ಗಿಹೋಗಿದೆ. ಇಂತವರ ಮೇಲೆ ಮತ್ತೆ ಹೆಚ್ಚುವರಿ ತೆರಿಗೆಯನ್ನು ಹಾಕುವುದರ ಮೂಲಕ ಅವರನ್ನು ನೆಲಸಮ ಮಾಡಬೇಡಿ ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಸವಿನಯಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಜಮೀನಿನ ಮೇಲೆ ತೆರಿಗೆ ಹಾಕುವಾಗ ಸರ್ಕಾರದವರು ಒಂದು ವಿಚಾರವನ್ನು ಗಮನದಲ್ಲಿಟ್ಟು ಕೊಳ್ಳಬೇಕು.

"Law of diminishing returns" ಎಂಬ ತತ್ವ ಸರ್ಕಾರದವರಿಗೆ ಗೊತ್ತಿರಬಹುದು. ಈ ತತ್ವ ಜಮೀನಿಗೆ ವಿಶೇಷವಾಗಿ ಅನ್ವಯವಾಗುತ್ತದೆ ಜಮೀನಿನ ವರಮಾನ ಒಂದು ಮಿತಿ ಮೀರಿದ ಮೇಲೆ ಬಂಡವಾಳಕ್ಕೆ ಅನುಗುಣವಾಗಿ ಬರುವುದಿಲ್ಲ. ಆ "ಮಿತಿ' ಆದನಂತರ ಹೆಚ್ಚು ಬಂಡವಾಳ ನಿಷ್ಫಲ. ಆ "ಮಿತಿ" ಮೀರಿದ ಮೇಲೆ ಸಣ್ಣ ತೆರಿಗೆಯೂ ಕೂಡ ಒಂದು ಹೊರೆಯಾಗುತ್ತದೆ. ಜಮೀನಿನಲ್ಲಿ ಬೆಳೆಯುವ ಬೆಳೆಗಳ ಬಗ್ಗೆ ನಮ್ಮ ಜಿಲ್ಲೆಯನ್ನು ತೆಗೆದುಕೊಂಡರೆ Optimin income ಮಟ್ಟವನ್ನು ಮುಟ್ಟಲಾಗಿದೆ. ನಮ್ಮ ಕ್ಷೇತ್ರಗಳಲ್ಲಿ ಈ ದಿವಸ ಎಷ್ಟೇ ಹೆಚ್ಚಿನ ಬಂಡವಾಳವನ್ನು ಹೂಡಿ ಆಧುನಿಕ ಪದ್ಧತಿಯ ರೀತಿಯಲ್ಲಿ ಬೆಳೆದರೂ ಕೂಡ ಬೆಳೆದವರಿಗೆ ಹೆಚ್ಚಿನ ಪ್ರಮಾಣದಲ್ಲಿ ನಿವ್ವಳವರಮಾನ ಉಳಿಯುವುದಿಲ್ಲ. ಉಳಿಯದಿರುವುದಕ್ಕೆ ಕಾರಣ ಸರ್ಕಾರ ಹೆಚ್ಚುವರಿ ತೆರಿಗೆ ಮತ್ತು ಕಂದಾಯವನ್ನು ಕೊಡಬೇಕಾಗಿರುವುದರಿಂದ. ಈಗ ರೈತರ ಮೇಲೆ ಹಾಕುತ್ತಿರುವ ಕಂದಾಯ ದಭಾರಿ ಮಾತ್ರವಲ್ಲ, ಈ ಮೂಲಕ ರೈತರನ್ನು ನಿಸ್ಸಂಶಯವಾಗಿ ನಿರ್ನಾಮಮಾಡುವ ಪಿತೂರಿಯಾಗಿವೆ ಎಂದು ಹೇಳುತ್ತೇನೆ. ಸರ್ವೆಸೆಟಲ್‌ಮೆಂಟ್ ಮಾಡುವಾಗ ಅಳತೆ ವಿಂಗಡನೆ ಮತ್ತು ಅಸೆಸ್‌ಮೆಂಟ್ ಸರಿಯಾಗಿ ಆಗಿಲ್ಲ. 1932ನೇ ಇಸವಿಯಲ್ಲಿ ನನ್ನ ಖಾತೆಯಲ್ಲಿರುವ ಒಂದು ಜಮೀನು 4 ಎಕರೆ ಮೂರು ಗುಂಟೆ ಎಂದು ಇತ್ತು. ರಸ್ತೆಗಾಗಿ ಈ ಜಮೀನಿನಲ್ಲಿ ಸರ್ಕಾರದವರು 9 ಗುಂಟೆಯನ್ನು ಸ್ವಾಧೀನಪಡಿಸಿಕೊಂಡರು, ಪುನರ್ವಿಮರ್ಶಿತ ಲೆಕ್ಕದ ಪ್ರಕಾರದಲ್ಲೂ ಹಳೆಯ ಲೆಕ್ಕದಪ್ರಕಾರ ನಾಲ್ಕು ಎಕರೆ ಮೂರು ಗುಂಟೆಗೇ ಕಂದಾಯವನ್ನು ಮತ್ತು ನೀರಿನ ತೆರಿಗೆಯನ್ನು ವಿಧಿಸುತ್ತಿದ್ದಾರೆ. ಇದು ಸರಿಯೋ. ಇಂತಹ ತಪ್ಪುಗಳು ಸಾಮಾನ್ಯವಾಗಿ ಎಲ್ಲಾ ರೈತರಿಗೂ ಆಗಿವೆ. ಬಹು ರೈತರಿಗೆ ಹೇಳಲು ಬಾಯಿಲ್ಲ. ಹೇಳಿದ ದೂರುಗಳನ್ನು ಕೇಳುವವರೂ ಇಲ್ಲ. ತಾವು ಮಾಡಿರುವುದೇ ಸರಿ ಎನ್ನುವ ಕಾಲ ಇದು.

1932 ರಲ್ಲಿ ಹಿಂದೆ ಸರ್ವೆ ಮಾಡಿದಾಗ ನಾಲ್ಕು ಗುಂಟೆ ಜಮೀನಿಗೆ ಕಂದಾಯ ಏನು ಇತ್ತೋ ಅದೇ ಕಂದಾಯವನ್ನು ಈಗ ಹೆಚ್ಚು ಮಾಡಿ ಇಲ್ಲದ ಜಮೀನಿಗೆ ಕಂದಾಯ ತೆಗೆದು

ಕೊಳ್ಳುತ್ತಿದ್ದಾರೆ. ನಮ್ಮ ಹಳ್ಳಿಗಳಲ್ಲಿ ಸಾಮಾನ್ಯವಾಗಿ ನೋಡಿದರೆ ಪ್ರತಿಯೊಬ್ಬರಿಗೂ ಎರಡು ರೂಪಾಯಿಗಳು ಎಂದು ಕಂದಾಯ ಹಾಕಿದ್ದಾರೆ. ಹೊಸ ಕಂದಾಯ ಕಾನೂನಿನಲ್ಲಿ ಇದರಲ್ಲಿ ತೆಂಗಿಗೆ ಇಷ್ಟು, ಪ್ಲಾಂಟೇಷನ್‌ಗೆ ಇಷ್ಟು, ಗಾರ್ಡನ್ ಲ್ಯಾಂಡಿಗೆ ಇಷ್ಟು ಎನ್ನುವುದನ್ನು ಸರಿಯಾಗಿ ಅಸೆಸ್ ಮಾಡಿ ಹಾಕಬೇಕೆಂದು ಇದೆ. ಹಿಂದೆ ಕಂದಾಯ ಹಾ ುವಾಗ ಬಾಗಯತಿಗೆ ಜಾಸ್ತಿಯಾಗಿರಲಿಲ್ಲ. ಈಗ ಕನಿಷ್ಠ ಪಕ್ಷ ಎಲ್ಲ ಕಡೆಗಳಲ್ಲೂ ಕಂದಾಯ ಜಾಸ್ತಿ ಮಾಡಿದ್ದಾರೆ. ಖುಷ್ಕಿ ಜಮೀನಿಗೆ ಹಿಂದೆ ಒಂದೂವರಾಣೆಯಿಂದ 2—12—0 ವರೆಗೆ ಇದ್ದ ಕಂದಾಯವನ್ನು ನಾಲ್ಕು ರೂಪಾಯಿಗೆ ಹೆಚ್ಚು ಮಾಡಿದ್ದಾರೆ. ತರಿಭೂಮಿಗೆ 3--8—0 ಯಿಂದ 14—4—0 ವರೆಗೆ ಮಾಡಿದ್ದಾರೆ. ಇದ್ದ ಕಂದಾಯವನ್ನು ನೀರಿನ ತೆರಿಗೆ ಸೇರಿಸಿ 60 ರೂಪಾಯಿಗಳಿಗೆ ಹೆಚ್ಚಿಸಿದ್ದಾರೆ. ಬಾಗಯಾತಿಗೆ 7ರೂಪಾಯಿಂದ 20ರೂಪಾಯಿಗಳವರೆಗೆ ಇದ್ದದ್ದನ್ನು 23ರ ವರಗೆ ಹೆಚ್ಚು ಮಾಡಿದ್ದಾರೆ ಅಲ್ಲದೆ ಈ ಕಂದಾಯದ ಹೊರೆ ಸಮಾನವಾಗಿಲ್ಲ. ಕೆಲವು ಕಡೆ ಕೊಟ್ಟಿರುವ ಅಂಕೆ ಸಂಖ್ಯೆಗಳು ಕೂಡ ಸರಿಯಾದ ರೀತಿಯಲ್ಲಿಲ್ಲ. ಈ ಕಡೆಗೆ ಸರಕಾರ ಲಕ್ಷ ಕೊಟ್ಟು ಇವನ್ನೆಲ್ಲಾ ಸರಿಪಡಿಸಬೇಕು. ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6-00 P.M.

†ಶ್ರೀ ಎಸ್. ಭೀಮಣ್ಣ (ಭಾಲ್ಕಿ).—ಮಾನ್ಯ ಅಧ್ಯಕ್ಷರೇ, 1956ನೇ ನವಂಬರಿನಲ್ಲಿ ಸಂಯುಕ್ತ ಕರ್ಣಾಟಕವಾಯಿತು, ಇದಕ್ಕೆ ಮೊದಲು ಬೇರೆ ಬೇರೆ ಭಾಗದಲ್ಲಿ ಏನು ಒಂದು ಕಾನೂನಿತ್ತು ಅದರಂತೆ ಅಸೆಸ್‌ಮೆಂಟು ಕೂಡ ಬೇರೆ ಬೇರೆಯಾಗಿತ್ತು. ಆದರೆ ನಾವು ಇಲ್ಲಿಗೆ ಬಂದ ಮೇಲೆ ಒಂದೇ ಪ್ರಕಾರ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಕಂದಾಯ ಪದ್ಧತಿಯೂ ಆಗಬಹುದು ಎನ್ನುವ ಒಂದು ಆಸೆ ಇತ್ತು. ಆ ಪ್ರಕಾರ 1956 ರಿಂದ 1964ರ ವರೆಗೆ ಎಷ್ಟೋ ರಿವಿಜನ್‌ಗಳನ್ನೂ ಮಾಡಿದ್ದಾರೆ. ಇದನ್ನೆಲ್ಲಾ ಸೇರಿಸಿ 1964ರಲ್ಲಿ ಒಂದು ಬಿಲ್ ತಂದು ಇಲ್ಲಿ ಪಾಸು ಮಾಡಿಯಾಯಿತು. ಆದರೆ ಬೇರೆ ಬೇರೆ ಸ್ಟೇಟುಗಳಿಂದ ಇಲ್ಲಿಗೆ ಜನ ಬಂದಿರುವುದರಿಂದ ಅವರಿಗೆ ಇದರಿಂದ ಸಮಾಧಾನವಾಗಲಿಲ್ಲ. ಇದಕ್ಕಾಗಿ ಮಾನ್ಯ ಮಂತ್ರಿಗಳಲ್ಲಿ ಅಪೀಲೂ ಹೋಗಿ ಇಂತಹ ಕಾನೂನಿನಿಂದ ಸರಿಯಾದ ನ್ಯಾಯ ದೊರಕಲಿಲ್ಲ ಎಂದು ಹೇಳಿದ ಮೇಲೆ ಸರಕಾರದವರು ಇವನ್ನೆಲ್ಲಾ ವಿಚಾರ ಮಾಡಿ ಸೂಕ್ತವಾದ ಒಂದು ಬಿಲ್ಲು ತರುತ್ತೇವೆ ಎಂದು ಹೇಳಿದರು. 1964 ರಲ್ಲಿ ಡ್ರೈ ಲ್ಯಾಂಡು, ವೆಟ್ ಲ್ಯಾಂಡು, ಗಾರ್ಡನ್ ಲ್ಯಾಂಡು ಎಂದು ಬೇರೆ ಬೇರೆಯಾಗಿ ಜೋನುಗಳನ್ನು ಮಾಡುವಾಗಲೂ ಒಂದು ಸಲಹೆ ಕೊಟ್ಟಿದ್ದೆವು. ನಮ್ಮಲ್ಲಿ ಎಷ್ಟು ವಿಧವಾದಭೂಮಿ ಇದೆ ಎನ್ನುವುದನ್ನು ಪ್ರತ್ಯೇಕವಾಗಿ ನೋಡಬೇಕು. ನಮ್ಮಲ್ಲಿ ಬ್ಲ್ಯಾಕ್ ಕಾಟನ್ ಸಾಯಿಲ್‌ರಾ ಕಿಸಾಯಿಲ್ ಒಂದು ತರಹದ ಚೌಳು ಭೂಮಿ ಈರೀತಿ ನಾಲ್ಕೈದು ತರಹದ ಭೂಮಿಗಳ ಇವೆ. ಇವನ್ನೆಲ್ಲಾ ಎ. ಬಿ. ಸಿ. ಡಿ. ಇತ್ಯಾದಿ ಯಾಗಿ ಮಾಡುವುದನ್ನು ಬಿಟ್ಟು, ಜೋನುಗಳೆಂದು ಮಾಡಿ ತಂದಿದ್ದಾರೆ. ಇದನ್ನು ಮಾಡಿರುವುದರಿಂದ ಇಲ್ಲಿನ ಕ್ಲಾಸಿಫಿಕೇಷನ್‌ಗಳು ಸರಿಯಾಗುವುದಿಲ್ಲ. ನಾವು ಬಂದಿರುವ ಮೂರು ಜಿಲ್ಲೆಗಳಲ್ಲೂ ಯಾವ ರೀತಿಯಾದ ಒಂದು ಕಾನೂನು ಇತ್ತೋ ಅದರ ಪ್ರಕಾರ ನೋಡಿದರೆ ಈಗ ಕಂದಾಯ ಬಹಳ ಜಾಸ್ತಿಯಾಗಿರುತ್ತೆ. ಸೆಟಲ್‌ಮೆಂಟು ಆಗುವುದಕ್ಕೆ ಮೊದಲು ಒಂದೊಂದು ಎಕರೆಗೆ 8 ಆಣೆ ಕೊಡುವ ಭೂಮಿ ಒಂದು ರೂಪಾಯಿ ಕೊಡುವ ಭೂಮಿ ಮತ್ತು, ಎರಡು ರೂಪಾಯಿ ಕೊಡುವ ಭೂಮಿ ಇವೆಲ್ಲವನ್ನು ಕ್ಲಾಸಿಫೈ ಮಾಡುವಾಗ 1964ರಲ್ಲಿ ಒಂದು ಜೋನು ಎಂದು ಮಾಡಿದರು. ಹೀಗೆ ಜೋನುಗಳನ್ನು ಮಾಡಿರುವುದರಿಂದ ಎಂಟಾಣೆ ಕೊಡುತ್ತಿದ್ದ ಭೂಮಿಗೆ ಆರು ರೂಪಾಯಿಗಳವರಗೆ ಆಯಿತು- ಎಲ್ಲಿ ಮೂರು ರೂಪಾಯಿಗಳು ಇತ್ತೋ ಅಲ್ಲಿ ನಾಲ್ಕು ರೂಪಾಯಿ ಹೆಚ್ಚಾಯಿತು. ಈ ಪ್ರಕಾರ ಲ್ಯಾಂಡ್ ರೆವೆನ್ಯೂ ಕೊಡಬೇಕೆಂದು ಮಾಡವಾಗ ರಾಕೀ ಸಾಯಿಲ್ ಇರುವ ಭೂಮಿ ಇರುವ ಕಡೆಗಳಲ್ಲಿ ಒಂದಕ್ಕೆ ಎರಡು ಪಟ್ಟು ಕೆಲವು ಕಡೆ ಮೂರು ನಾಲ್ಕು ಪಟ್ಟುಗಳಷ್ಟು ಹೆಚ್ಚು ಮಾಡಿ ಕಂದಾಯ ಹಾಕಿದ್ದಾರೆ. ಇದು ಯಾವ ನ್ಯಾಯ ಎಂದು ಕೇಳಬೇಕಾಗಿದೆ. ಇದರ ಬಗ್ಗೆ ಇಲ್ಲಿ ಪದೇ ಪದೇ ಹೇಳುತ್ತಲೂ ಬರುತ್ತಿದ್ದೇವೆ. ಯಾವಾಗ ನಮ್ಮ ಹೈದರಾಬಾದು ಭಾಗದ ಪ್ರಶ್ನೆ ಬರುತ್ತದೋ ಲ್ಯಾಂಡ್ ರೆವೆನ್ಯೂ ಬಗ್ಗೆ ಒಂದು ಮಾತು ಇಲ್ಲಿ ಹೇಳಿ ಹುದು. ನಮ್ಮ ಕಡೆಗಳಲ್ಲಿ ಜಾಗೀರ್ ಲ್ಯಾಂಡ್ಸ್‌ಗಳಿದ್ದವು, ಮತ್ತು ಪಾಯಿಗಾ ಲ್ಯಾಂಡುಗಳಿದ್ದವು, ಹಾಗೂ ಇನ್ನಿತರ ವಿಧವಾದ ಭೂಮಿಗಳಿದ್ದವು. ಇವುಗಳ ಪ್ರಶ್ನೆ ಬಂದಾಗಲೆಲ್ಲಾ ಸರಕಾರ ಇವನ್ನು ಇನ್ನೂ ಸರಿಯಾಗಿ ಪರಿಶೀಲನೆ ಮಾಡಿಲ್ಲ ಎಂದು ಇದಕ್ಕೆ ಟೈಂ ತೆಗೆದುಕೊಂಡರು. ನಮ್ಮ ಹೈದರಾಬಾದು ಭಾಗದಲ್ಲಿ ಸ್ವಾತಂತ್ರ್ಯ ಸಂಗ್ರಾಮವಾಗುವುದಕ್ಕೆ ಮೊದಲು ಯಾವ ಸ್ಥಿತಿ ಇತ್ತು ಎನ್ನುವುದನ್ನು ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ವಿ. ಎನ್. ಪಾಟೀಲ್‌ರವರು ವಿವರವಾಗಿ ಹೇಳಿದ್ದಾರೆ. ಅವರೇ ಹೇಳಿದಂತೆ ಇಲ್ಲಿ ಜಹಗೀರು ಲ್ಯಾಂಡ್ಸ್, ಪಾಯಿಗಾ

(ಶ್ರೀ ಎಸ್. ಭೀಮಣ್ಣ)

ಲ್ಯಾಂಡ್ಸ್‌ಗಳು ಸರಪ್ ಎಖಾಸ್ ಲ್ಯಾಂಡುಗಳು ಹಾಗೂ ಖಾಲಸಾ ಲ್ಯಾಂಡುಗಳು ಇತ್ತು. ಇವಕ್ಕೆ ಬೇರೆ ಬೇರೆ ರೀತೀಯಾಗಿ ಲ್ಯಾಂಡು ರೆವೆನ್ಯೂ ಇತ್ತು. ಜಹಗೀರು ಭೂಮಿಗಳು ಸರಕಾರದ ಅಧೀನದಲ್ಲಿ ಮೊದಲು ಇರಲಿಲ್ಲ. ಇಲ್ಲಿದ್ದ ವತನುದಾರರುಗಳು ಅವರ ಸ್ವಂತ ಖರ್ಚಿಗಾಗಿ ಕಂದಾಯ ಹಾಕಿ ವಸೂಲು ಮಾಡುತ್ತಿದ್ದರು. ಆಗ ಒಂದು ಎಕರೆಗೆ ಸುಮಾರು 6—8 ರೂಪಾಯಿಗಳಷ್ಟು ಲ್ಯಾಂಡ್ ರೆವೆನ್ಯೂ ಎಂದು ಕೊಡುತ್ತಿದ್ದರು। ಇದು ನ್ಯಾಯವಾಗಿಲ್ಲ ಎಂದು ಮೂವ್ವತ್ತು ವರ್ಷಗಳ ಹಿಂದೆ ಒಂದು ರೀತಿಯಾಗಿ ಕ್ರಾಂತಿ ನಡೆಸುತ್ತಿದ್ದರು. ಸುಮಾರು ಹತ್ತು ಸಾವಿರ ಜನರ ಒಂದು ಮೋರ್ಚಾ ಬಂದು ಆಗ ಚೀಫ್ ಮಿನಿಸ್ಟರಾಗಿದ್ದ ಶ್ರೀ ಬಿ. ರಾಮಕೃಷ್ಣರಾಯರಿಗೆ ಮನವಿ ಮಾಡಿ ಒತ್ತಾಯ ಮಾಡಿದ ಮೇಲೆ ಜಾಗೀರ್ ಅಬಾಲಿಷನ್ ಆಕ್ಟ್ ಎಂದು 1951—52 ರಲ್ಲಿ ಪಾಸು ಮಾಡಿದರು. ಆಗಿನ ಕಾಲದಲ್ಲಿಯೇ ಮಳೆ ಬೆಳೆ ಬರಲಿಲ್ಲ ಹಾಕಿರುವ ಕಂದಾಯ ಬಹಳ ಜಾಸ್ತಿ. 8—10 ರೂಪಾಯಿ ಇರುವುದನ್ನು ಶೇಕಡಾ 25 ರಷ್ಟು ಕಡಿಮೆ ಮಾಡಬೇಕು ಎಂದು ನಾವು ಸರ್ಕಾರಕ್ಕೆ ಮನವಿ ಮಾಡಿದೆವು ಇದರಿಂದ ಕೆಲವು ಕಡೆಗಳಲ್ಲಿ ನಾಲ್ಕು ರೂಪಾಯಿ ಕಂದಾಯ ಕೊಡಬೇಕು ಉಳಿಕೆಯನ್ನು ರಿವಿಷನ್ ಮಾಡುತ್ತೇವೆ ಎಂದು ಸರ್ಕಾರದವರು ಹೇಳಿದರು. ನಮ್ಮ ಭಾಗಗಳು 1956 ರಲ್ಲಿ ಮೈಸೂರಿಗೆ ಸೇರಿದ ಮೇಲೆ 10-12 ವರ್ಷಗಳಾದರೂ ಕೆಲವು ಕಡೆ ರೈತರಿಗೆ ಕಂದಾಯವನ್ನು ರೈಟ್ ಆಫ್ ಮಾಡಿ ಸಸ್‌ಪೆಂಡು ಮಾಡುವ ಆರ್ಡರು ಮಾಡಿಲ್ಲ ಲ್ಯಾಂಡ್ ರೆವಿನ್ಯೂ ರಿಕಾರ್ಡಿನಲ್ಲ ರಿವಿಷನ್ ಕಡಿಮೆ ಮಾಡಬೇಕು ಎಂದು ಇದ್ದರು ಅದು ಕಡಿಮೆಯಾಗಲಿಲ್ಲ. ಇಲ್ಲಿ ಜೋನುಗಳನ್ನು ಮಾಡುವಾಗ ಕ್ಲಾಸಿಫಿಕೇಷನ್‌ಗಳೆಂದು ಮಾಡಿರುವುದು ಬಹಳ ಅನ್ಯಾಯವಾಗಿದೆ ಎಂದು ಹೇಳುತ್ತಿದ್ದರೂ ಸರಕಾರ ಇದರ ಕಡೆಗೆ ಗಮನ ಕೊಡುತ್ತಿಲ್ಲ. ಜೋನು ಮಾಡಿರುವುದರಿಂದ ಕೆಲವು ಕಡೆ ಒಂದಕ್ಕೆ ಎರಡು ಪಟ್ಟು, ಕೆಲವು ಕಡೆ ದೀಡು ಪಟ್ಟು ಜಾಸ್ತಿ ಮಾಡಿ ಕಂದಾಯ ನಿಗದಿ ಮಾಡಿದ್ದಾರೆ. ಇದರಿಂದ 15 ಲಕ್ಷ ಬರುತ್ತಿದ್ದುದು 25 ಲಕ್ಷ ಬರುವಂತೆ ಆಯಿತು ಎಂದು ಹೇಳುತ್ತಾರೆ. ಎಂದರೆ 1964 ರ ಆಕ್ಟ್ ಪ್ರಕಾರ ಇದು ಡಬ್ಬಲ್ ಆಯಿತು. ಇದರಲ್ಲೂ ಹೆಚ್ಚಿನ ಅನ್ಯಾಯ ನಮ್ಮ ಬಿದರು ಜಿಲ್ಲೆಯ ಜನತೆಗೆ ಆಗಿದೆ. ನಮಲ್ಲಿ ಗಾರ್ಡನ್ ಲ್ಯಾಂಡು ಎನ್ನುವುದು ಬಹಳ ಕಡಿಮೆ. ಒಂದು ಎಕರೆ ಜಮೀನಿಗೆ ಹಿಂದೆ 8 ರೂಪಾಯಿಗಳು ಇದ್ದದ್ದು ಇಂದು 92 ರೂಪಾಯಿಗಳು ಎಂದು ಕೊಡಬೇಕಾಗಿ ಬಂದಿವೆ. ಇದು ಒಂದಕ್ಕೆ ಎರಡು ಪಟ್ಟಿಗಿಂತ ಹೆಚ್ಚು ಆಯಿತು ಎನ್ನುವುದು ಇದರಿಂದ ಗೊತ್ತಾಗುತ್ತದೆ. ನಮ್ಮಲ್ಲಿ ಇನಾಂ ಅಬಾಲಿಷನ್ ಆಕ್ಟ್ ಬೇರೆ ಆಯಿತು. ಇದರಿಂದ ಸೋಷಿಯಲಿಸ್ಟ್ ಪ್ಯಾಟರನ್ ಮಾಡಲು ಆಯಿತೇ ಎಂದರೆ ಆ ರೀತಿ ಆಗಲಿಲ್ಲ. ಮತ್ತು ನಮ್ಮ ಸರಕಾರ ಇದನ್ನು ಮಾಡುವುದಕ್ಕೆ ಸಾಧ್ಯವೂ ಇಲ್ಲ. ನಮ್ಮಲ್ಲಿ ಇನಾಂಗಳನ್ನು ಹಿಂದೆ ಇದ್ದ ದೇಶಪಾಂಡೆಗಳು ಹಾಗೂ ದೇಶಮುಖರುಗಳು ಶೇಕಡ 20, 40, ಮತ್ತು 60 ರಷ್ಟು ಪ್ರಾಡ್ಯೂಸ್ಸನ್ನು ಟೆನೆಂಟುಗಳಿಂದ ವಸೂಲು ಮಾಡುತ್ತಿದ್ದರು. ಇದನ್ನು ಆಕ್ಟ್ ಪ್ರಕಾರ ಪರ್ಮನೆಂಟು ಟೆನೆಂಟೀ, ಪ್ರೊಟೆಕ್ಟೆಡ್ ಟೆನೆಂಟೀ ಎನ್ನುವುದನ್ನು ಸರಿಯಾಗಿ ವಿಚಾರ ಮಾಡಿ ಮಾಡಲಿಲ್ಲ. ಹೀಗಿರುವಾಗ ಲ್ಯಾಂಡ್ ರೆವಿನ್ಯೂವನ್ನು ಸರಕಾರ ಸರಿಯಾಗಿ ವಿಚಾರ ಮಾಡದೇ ತೆಗೆದುಕೊಳ್ಳುವುದು ನ್ಯಾಯವೇ ಎಂದು ಇಲ್ಲಿ ಕೇಳುತ್ತೇನೆ.

ಬೀದರ್ ಜಿಲ್ಲೆಯಲ್ಲಿ ಅಲ್ಲಿ ಜಾಗೀರ್‌ದಾರರಿಗೆ ಅನ್ಯಾಯ ನಡೆದಿದೆ. ಅದಕ್ಕಾಗಿ ಅವರಲ್ಲಾರಿಟ್ ಹಾಕಿದ್ದಾರೆ. ಹಳೇ ರೇಟಿನಲ್ಲಿ ವಸೂಲ್ಮಾಡಬೇಕು ಎಂದು ನನಗೆ ಅನಿಸುತ್ತದೆ. ಮತ್ತು ನಾರ್ತ್ ಕರ್ನಾಟಕದಲ್ಲೂ ಕೂಡ ಈ ಜಾಗೀರ್‌ದಾರರ ಒಂದು ಅಸೆಸ್‌ಮೆಂಟ್ ಹೋರಾಟ ದೊಡ್ಡದಾಗಿ ನಡೆದಿದ ಎಂದು ಹೇಳುತ್ತೇನೆ. ಸರ್ಕಾರದವರಿಗೆ ಇದರ ಬಗ್ಗೆ ಲಕ್ಷ ಇಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಈವೊತ್ತು ಕಂದಾಯ 4 ಪಟ್ಟು 6 ಪಟ್ಟು ಜಾಸ್ತಿಯಾಗಿದೆ. ಸರ್ಕಾರಕ್ಕೆ ಈ ವಿಚಾರ ತಿಳಿಯದೇ ಇದ್ದರೆ ಅದು ತಪ್ಪು ಎಂದು ನನಗೆ ಅನಿಸುತ್ತದೆ. ಇದರಲಿ ವಾಸ್ತವಿಕವಾಗಿ ನೋಡಿದರೆ, ಮೊದಲು ಒಂದು ಎಕರೆ ಭೂಮಿಗೆ 8 ಆಣೆ ಇದ್ದುದು, ಈವೊತ್ತು 5-6 ರೂಪಾಯಿ ಕೊಡಬೇಕಾಗಿದೆ. ಇದು ಬಹಳ ಅನ್ಯಾಯ. ಅದಕ್ಕೆ ನಾನು ಸಲಹೆ ಮಾಡುವುದು ಇದನ್ನು ಸರಿಪಡಿಸುವುದಕ್ಕೆ ಇಂಡಿವಿಜ್ಯೂಯಲ್ ಅಪ್ಲಿಕೇಷನ್ ನಿರೀಕ್ಷಣೆ ಮಾಡುವುದು ಏನೂ ಪ್ರಯೋಜನವಿಲ್ಲ ಬೀದರ್ ಡಿಸ್ಟ್ರಿಕ್ಟ್‌ನಿಂದ 10 ಸಾವಿರ ಅಪ್ಲಿಕೇಷನ್ ಬಂದಿವೆ. ಅವುಗಳ ಬಗ್ಗೆ ಏನೂ ವಿಚಾರ ಮಾಡಲಿಲ್ಲ. ಒಂದಕ್ಕೂ ಉತ್ತರವೂ ಕೊಡಲಿಲ್ಲ. ಕಾರಣ ಇದಕ್ಕೆ ಈಗ ಇರುವ ಸ್ಟಾಫ್ ಸಾಕಾಗುವುದಿಲ್ಲ. ಬೇರೆ ಸ್ಟಾಫ್, ತಗೆದುಕೊಳ್ಳಬೇಕಾಗುತ್ತದೆ. ಆ ಖರ್ಚನ್ನು ಜನಗಳೇ ಕೊಟ್ಟು ಲುಕ್ಸಾನೂ ಕೂಡ ಜನಗಳೇ ಕೊಡಬೇಕಾಗುತ್ತದೆ. ಇದರಿಂದ ಜನತೆಗೆ ಸಮಯವೂ ಅನಾವಶ್ಯಕವಾಗಿ ಹಾಳಾಗುತ್ತದೆ ಮತ್ತು ಸರ್ಕಾರದ ಅಧಿಕಾರಿಗಳ ಸಮಯವೂ ಅನಾವಶ್ಯಕವಾಗಿ

ಹಾಳಾಗುತ್ತದೆ. ಇದನ್ನು ಲಕ್ಷದಲ್ಲಿಡಬೇಕು. ಇವೆಲ್ಲಾ ಒಂದೇ ದಿನದಲ್ಲಿ ಮಾಡುವುದಕ್ಕಾಗುವುದಿಲ್ಲ. ಈ ಕ್ಲಾಸಿಫಿಕೇಷನ್ ಜನಗಳ ಒತ್ತಡವಿಲ್ಲದೆ ಮಾಡಬೇಕು. ಈ ಕ್ಲಾಸಿಫಿಕೇಷನ್‌ನಲ್ಲಿ ಲ್ಯಾಂಡ್ ರೆವಿನ್ಯೂ ಅಸೆಸ್‌ಮೆಂಟ್ ಏನು ಇದೆ ಅದು ವಾಸ್ತವಿಕವಾಗಿ 5 ಪಟ್ಟು 6 ಪಟ್ಟು ಜಾಸ್ತಿಯಾಗಿದೆಯೋ ಅದನ್ನು ತಿಳಿಸಬೇಕು. ಸರ್ಕಾರದವರು ಡೆಪ್ಯೂಟಿ ಕಮೀಷನರಿಗೆ ಒಂದು ಆದೇಶ ಕೊಡಬೇಕು. ಅಪ್ಲಿಕೇಷನ್ಸ್ ಏನು ಬಿದ್ದಿವೆ ಆ ಅಪ್ಲಿಕೇಷನ್ಸ್‌ನ್ನು ತ್ಯಾಜ್ಯ ಮಾಡಬೇಕು ಎಂದು ಬಿದರ್ ಡಿಸ್ಟ್ರಿಕ್‌ನಲ್ಲಿ ಒಂದೇ ಕ್ಲಾಸಿಫಿಕೇಷನ್ ಕೊಟ್ಟರೆ ಒಳ್ಳೆಯದು ಎಂದು ಹೇಳುತ್ತೇನೆ. ಅಂಥ ಟೇಬಲ್ ಇದ್ದರೆ ರೈತರೂ ಒಪ್ಪಿಕೊಳ್ಳುವುದಕ್ಕೂ ತಯಾರಾಗಿದ್ದಾರೆ.

ಉಪಾಧ್ಯಕ್ಷರು.—ಭಾಷಣ ಬೇಗ ಮುಗಿಸಬೇಕು.

ಶ್ರೀ ಎಸ್. ಭೀಮಣ್ಣ.—ನಮ್ಮ ಏರಿಯಾದಲ್ಲಿ ರೈತರಿಗೆ ಯಾವ ಪ್ರಕಾರ ಅನ್ಯಾಯವಾಗುತ್ತದೆ ಎಂದು ಹೇಳಲು ಯಾರೂ ಇಲ್ಲ. ಆದುದರಿಂದ ನನಗೆ ಮಾತನಾಡಲು ಸ್ವಲ್ಪ ವೇಳೆ ಕೊಡಬೇಕು. ಆದುದರಿಂದ ನೀವು ಬೆಳೆಗಳ ದೃಷ್ಟಿಯಿಂದ ನೋಡುವುದಕ್ಕಾಗುವುದಿಲ್ಲ. ಜನರು ಏನು ರೆಪ್ರೆಜೆಂಟೇಷನ್ಸ್ ಮಾಡುತ್ತಾರೆ ಅದನ್ನು ತಾವು ನೋಡಬೇಕು. ಕ್ಲಾಸಿಫಿಕೇಷನ್ ರಿಕಾರ್ಡ್ ಇದೆ, ಅದನ್ನು ತರಿಸಿ ನೋಡಿ ಬಹಳ ಅನ್ಯಾಯವಾಗಿದೆ. ಅದನ್ನು ಸರಿಪಡಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಮೈಸೂರು ರಾಜ್ಯದಲ್ಲಿ ಲ್ಯಾಂಡ್ ರೆವಿನ್ಯೂ ಅಸೆಸ್‌ಮೆಂಟ್ ಕೊಡಬೇಕಾದರೆ ಒಂದೇ ಪ್ರಕಾರ ಒಂದೇ ಕರ ಇರಬೇಕು. ಇಲ್ಲದಿದ್ದರೆ ತಪ್ಪಾಗುತ್ತದೆ. ಸಂಪೂರ್ಣವಾದ ಮಾಹಿತಿಯನ್ನು ಮುಂದಿಟ್ಟುಕೊಂಡು ಕ್ಲಾಸ್ ಆಫ್ ಲ್ಯಾಂಡ್, ಕ್ಲಾಸಿಫಿಕೇಷನ್ ಕೂಡ ಸರಿಯಾಗಿ ಮಾಡಬೇಕು. ಭೂಮಿ ಸವಲತ್ತುಗಳನ್ನು ನೋಡಿಕೊಂಡು ಅದಕ್ಕೆ ಎಲ್ಲಿ ಬಾವಿಯಲ್ಲಿ ನೀರು ಬರುತ್ತದೋ, ಎಲ್ಲಿ ಟ್ಯಾಂಕ್‌ನಲ್ಲಿ ನೀರು ಬರುತ್ತದೋ, ಎಲ್ಲಿ ಕೆನಾಲ್‌ನಲ್ಲಿ ನೀರು ಬರುತ್ತದೋ ಅದರ ಮೇಲೆ ನಿರ್ದಿಷ್ಟವಾಗಿ ಕ್ಯಾಟಗಿರಿ ಆಫ್ ಲ್ಯಾಂಡ್ ಮಾಡಿ ರೆವಿನ್ಯೂ ಅಸೆಸ್‌ಮೆಂಟ್ ಮಾಡಿಸಿದರೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಈ ಅನ್ಯಾಯವನ್ನು ಸರಿಪಡಿಸಲಿಕ್ಕೆ ಕಷ್ಟವಾಗುತ್ತದೆ. ಅಮೇಲೆ ನೀವು ಸರಿಪಡಿಸುವುದಕ್ಕೆ ಹೊರಟರು ಸಾಧ್ಯವಾಗಲಿಕ್ಕಿಲ್ಲ. ಆದುದರಿಂದ ರಿಕಾರ್ಡ್‌ನೆಲ್ಲಾ ತರಿಸಿ ತಮ್ಮ ಮುಂದಿಟ್ಟುಕೊಂಡು ಅದನ್ನು ಸರಿಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಬೋಳ ರಘುರಾಮಶೆಟ್ಟಿ.—ಮಾನ್ಯ ಸಭಾಪತಿಗಳೇ, ಮಾನ್ಯ ರೆವಿನ್ಯೂ ಮಂತ್ರಿಗಳು ಮೈಸೂರು ಲ್ಯಾಂಡ್ ರೆವಿನ್ಯೂ ಆಕ್ಟ್ ಅಮೆಂಡ್‌ಮೆಂಟ್ ಬಿಲ್ ತಂದಿದ್ದಾರೆ. ಈ ಅಮೆಂಡ್‌ಮೆಂಟ್ ಬಿಲ್ ಆಗಬೇಕು ಎನ್ನುವುದು ಈ ಸಭೆಯ ಅಭಿಪ್ರಾಯ ಮಾತ್ರವಲ್ಲ ಇಡೀ ರಾಜ್ಯದ ಅಭಿಪ್ರಾಯವಾಗಿದೆ, ಇದರಲ್ಲಿ ವಿಷಯ ಏನಾಗಿದೆ ಎಂದರೆ ಈ ಬಿಲ್ ಇವೊತ್ತು ಕಾಂಪ್ರೆಹೆನ್ಸೀವ್ ಆಗಿ ಉಂಟೋ ಇಲ್ಲವೋ ಎಂದು ಮಂತ್ರಿಗಳು ವಿಶೇಷವಾಗಿ ಸಮಾಧಾನ ಮಾಡಬೇಕಾಗಿದೆ. ಮುಖ್ಯವಾಗಿ ಈ ಅಮೆಂಡ್‌ಮೆಂಟ್ ಬಿಲ್ ತರುವ ಅವಶ್ಯಕತೆ ಏನು ಎಂದರೆ 1964ನೇ ಇಸವಿಯಲ್ಲಿ ಇದ್ದಂಥ ರೀಸೆಟಲ್‌ಮೆಂಟ್ ಜೋನ್ಸ್ ಮತ್ತು ಬೇರೆ ಬೇರೆ ಕ್ಲಾಸಿಫಿಕೇಶನ್ ಆಫ್ ಲ್ಯಾಂಡ್ ಮತ್ತು ಲ್ಯಾಂಡ್‌ಗಳಿಗೆ ಹಾಕಿದಂಥ ದರ ಸರಿಯಲ್ಲ. ನಮ್ಮ ರಾಜ್ಯದಲ್ಲಿ ಎಲ್ಲಾ ರೈತರಿಂದಲೂ ಸರ್ಕಾರಕ್ಕೆ ದೂರು ಬರುತ್ತಾ ಇದ್ದರೂ ಕೂಡ ನಮ್ಮ ಸರ್ಕಾರದವರು ಇಷ್ಟರವರೆಗೆ ಅವಕ್ಕೆ ಗಮನ ಕೊಡಲಿಲ್ಲ. ಆದರೆ ಈವೊತ್ತು ಈ ಗ್ರೂಪ್‌ನ ಕ್ಲಾಸಿಫಿಕೇಷನ್ ಸರಿಯಾಗಿಲ್ಲ ಎನ್ನುವುದನ್ನು ಅವರೇ ಒಪ್ಪಿಕೊಂಡಿದ್ದಾರೆ. ಈ ರೀತಿ ಅನ್ಯಾಯವನ್ನು ಹೋಗಲಾಡಿಸುವುದಕ್ಕೆ ಈ ಬಿಲ್‌ನಲ್ಲಿ ಸಮೃದ್ಧಿಯಾದ ಕಲಂ ಇದೆಯೋ ಎನ್ನುವುದನ್ನು ಮಾನ್ಯ ಮಂತ್ರಿಗಳು ಈ ಸಭೆಗೆ ಸಮಾಧಾನಮಾಡಬೇಕಾಗಿದೆ. ಈ ರಿಸೆಟಲ್‌ಮೆಂಟ್ ಆಗಬೇಕಾದ್ದು 30 ವರ್ಷಕ್ಕೆ ಒಂದು ಬಾರಿ ಆಗಬೇಕಾಗಿದೆ. ಆದುದರಿಂದ ಈ ಬಿಲ್ಲನ್ನು ವಿಮರ್ಶೆ ಮಾಡುವಾಗ ಈ ವಿಷಯವನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಈವೊತ್ತು ರಿಸೆಟಲ್‌ಮೆಂಟ್ ಸರಿಯಾಗಿಲ್ಲ. ರಿವಿಷನ್ ಸೆಟಲ್‌ಮೆಂಟ್ ಆದನಂತರ ಮುಂದಿನ 30 ವರ್ಷದವರೆಗೆ ಆ ಸೆಟಲ್‌ಮೆಂಟ್ ನಿಲ್ಲುತ್ತದೆ. ರೀಸೆಟಲ್‌ಮೆಂಟ್ ಮಾಡುವಾಗ ಮುಖ್ಯವಾಗಿ ಮಣ್ಣಿನ ಗುಣ, ಹವೆ ಗುಣ, ಮಳೆ, ಮಾರ್ಕೆಟಿಂಗ್ ಫೆಸಿಲಿಟಿ, ಕೂಲಿ, ಕ್ರಾಪ್ಸ್ ಉತ್ಪತ್ತಿ ಮತ್ತು ಬೆಲೆ ಇವನ್ನೆಲ್ಲಾ ಇಟ್ಟುಕೊಂಡು ಮಾಡಬೇಕೆಂದು ಕಾನೂನಿನಲ್ಲಿ ಹೇಳಿದೆ. ಇದರಲ್ಲಿ ಪಟೇಲ, ಶ್ಯಾನುಭೋಗರು ಸಾಗುವಳಿ ಚೀಟಿ ನೀಡಬೇಕು. ಕೃಷಿಗೂ ಕೂಡ ಸಾಗುವಳಿ ಚೀಟಿ ನೀಡಬೇಕು. ಹಿಂದಿನ 30 ವರ್ಷದ ಪರಿಸ್ಥಿತಿ ನೋಡಿಕೊಂಡು, ಸಾಗುವಳಿ ಖರ್ಚು ಇದನ್ನೆಲ್ಲಾ ನೋಡಿಕೊಂಡು ರೀಸೆಟಲ್‌ಮೆಂಟ್ ಮಾಡಬೇಕಾಗಿದೆ. 1964ನೇ ಇಸವಿಯಲ್ಲಿ ಮಾಡುವಾಗ ಬೇರೆ ಬೇರೆ ರೀಸೆಟಲ್‌ಮೆಂಟ್ ಆಫೀಸರನ್ನು ನೇಮಕ ಮಾಡಿದ್ದರು. ನಮ್ಮ ಸೌತ್ ಕೆನರಾ ಜಿಲ್ಲೆಯಲ್ಲಿ ಪುತ್ತೂರು, ಉಡುಪಿ ರೀಸೆಟಲ್‌ಮೆಂಟ್ ಆಫೀಸರ್ಸ್ ಅವರು ರಿಪೋರ್ಟ್ ಕೊಡುವ ಮೊದಲು, ಸ್ಥಳಕ್ಕೆ ಹೋಗಿ ಸರಿಯಾಗಿ ತನಿಖೆ ಮಾಡಿ ಸರಾಸರಿ ಉತ್ಪತ್ತಿ ನೋಡಿ

(ಶ್ರೀ ಬೋಳ ರಘುರಾಮ ಶೆಟ್ಟಿ)

ಸಂಬಂಧಪಟ್ಟವರನ್ನು ವಿಚಾರಣೆ ಮಾಡಿ ರೀಸೆಟಲ್‌ಮೆಂಟ್ ಮಾಡಬೇಕು ಎಂದು ಕಾನೂನಿನಲ್ಲಿ ಹೇಗೆ ಇದೆಯೋ ಆ ರೀತಿ ಮಾಡಿದ್ದಾರೆಯೇ ? ಹಾಗೆ ಮಾಡದೆ 1964ನೇ ಇಸವಿಯಲ್ಲಿ ರೀಸೆಟಲ್ ಮೆಂಟ್ ಆಫೀಸರ್ಸ್ ನಮ್ಮ ಜಿಲ್ಲೆಯ ಬಗ್ಗೆ ರಿಪೋರ್ಟ್ ಕೊಡುವಾಗ ಈ ರೀತಿ ತನಿಖೆ ಮಾಡುತ್ತೇನೆಂದು ಅವರು ಅಲ್ಲಿ ಸ್ಥಳದಲ್ಲಿ ತಿಳಿಸಲಿಲ್ಲ. ಅದಲ್ಲದೆ ಸ್ಥಳಕ್ಕೆ ಹೋಗಿ ಬೇರೆ ಬೇರೆ ಮಣ್ಣಿನ ಪರಿಸ್ಥಿತಿಯನ್ನು, ಬೆಳೆ ಕಟಾವು ಮಾಡುವಾಗ ಎಷ್ಟು ಉತ್ಪತ್ತಿ ಆಗುತ್ತದೆ ಎನ್ನುವುದನ್ನೂ ಸಹ ಕೂಲಂಕಷವಾಗಿ ನೋಡಲಿಲ್ಲ.

ಇಷ್ಟು ಮಾತ್ರವಲ್ಲದೆ ಅವರು ತೀರ್ವೆ ಹಾಕುವಾಗ ಬೆಳೆ ಏನು, ಮಣ್ಣಿನ ಸಾರವೇನು ಎಂದು ವಿಮರ್ಶೆ ಮಾಡಲಿಲ್ಲ. ಕೇವಲ ಹಿಂದಿನ ಐದಾರು ವರ್ಷಗಳ ಸರಾಸರಿ ಬೆಲೆ, ಮಂಗಳೂರು ಪೇಟೆಯ ಬೆಲೆಯನ್ನು ನೋಡಿ ರಿಪೋರ್ಟ್ ಕೊಟ್ಟಿದ್ದರು ಮತ್ತು ಆ ರಿಪೋರ್ಟ್ ಮೇಲೆ ಸಾವಿರಗಟ್ಟಲೆ ರೈತರು ಮತ್ತು ಸಂಘ ಸಂಸ್ಥೆಗಳವರು ಆಕ್ಷೇಪ ಕೊಟ್ಟಿದ್ದರು. ಡೆಪ್ಯುಟಿ ಕಮಿಷನರು ಕೊಟ್ಟಂಥ ರಿಪೋರ್ಟಿನಲ್ಲಿ, ಅವರೆ ಒಪ್ಪಿಕೊಂಡ ಹಾಗೆ, ಆಕ್ಷೇಪಗಳು ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಬಂದುದರಿಂದ ರಿಪೋರ್ಟನ್ನು ವಿಮರ್ಶೆ ಮಾಡಿ ಕೊಡಲಿಕ್ಕೆ ಸಾಧ್ಯವಾಗಲಿಲ್ಲ ಎಂದು ಒಪ್ಪಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಬಾಗಾಯತು ಜಮೀನು ಮೂರನೇ ವರ್ಗದ ವೆಟ್ ಲ್ಯಾಂಡ್. ಇದು 1904ನೇ ಇಸವಿಯ ಮದ್ರಾಸ್ ಸೆಟಲ್‌ಮೆಂಟ್ ಮತ್ತು 1934ನೇ ಇಸವಿಯ ರೀ ಸೆಟಲ್‌ಮೆಂಟ್‌ನಲ್ಲಿ ಕೂಡ ಕಾಣುತ್ತದೆ. ಈಗ ಏನು ಮಾಡಿದ್ದಾರೆಂದರೆ ನಮ್ಮಲ್ಲಿ ಉಡುಪಿ ಮತ್ತು ಪುತ್ತೂರು ಎಂದು ಎರಡು ಜೋನ್ ಮಾಡಿರುವುದರಲ್ಲಿ ಉಡುಪಿ ಜೋನ್‌ನಲ್ಲಿ 18-92 ರೂಪಾಯಿ ಬಾಗಾಯತು ಜಮೀನಿಗೆ ಹಾಕಿದ್ದಾರೆ. ಪುತ್ತೂರು ಭಾಗದಲ್ಲಿ 12—31 ರೂಪಾಯಿ ಹಾಕಿದ್ದಾರೆ. ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಗಾರ್ಡನ್ ಲ್ಯಾಂಡ್ ಎಂದರೆ ಏನು ಎಂದು ಡಿಫೈನ್ ಮಾಡಿದ್ದಾರೆ. ಅದರಲ್ಲಿ ಡ್ರೈ ಗಾರ್ಡನ್ ಲ್ಯಾಂಡ್, ವೆಟ್‌ಗಾರ್ಡನ್ ಲ್ಯಾಂಡ್ ಎಂದು ಹೇಳಿದ್ದಾರೆ. ಇಷ್ಟು ಮಾತ್ರವಲ್ಲದೆ ಹಿಂದಿನ ಮೈಸೂರು ರಾಜ್ಯದಲ್ಲಿ ಸೇರಿದಂಥ ಪ್ರದೇಶದಲ್ಲಿ ಹಿಂದಿನ ಕಾಲದಲ್ಲಿ ಯಾವುದಾದರೂ ಬಾಗಾಯತು ಜಮೀನಿನ ಅರ್ಥ ವಿವರಣೆ ಇದ್ದರೆ ಅದೂ ಕೂಡ ಈ ಡೆಫಿನಿಷನ್ ಒಳಗೆ ಸೇರಬೇಕು ಎಂದು ಹೇಳಿದ್ದಾರೆ. ಹಾಗಾಗಿ ನಮ್ಮ ಜಿಲ್ಲೆಯಲ್ಲಿನ ಎಲ್ಲ ಬಾಗಯತು ಜಮೀನುಗಳೂ ಈ ಡೆಫಿನಿಷನ್‌ನಲ್ಲಿ ಬರುತ್ತವೆ; ಮತ್ತು ಅವೆಲ್ಲವೂ ಈ ಹೊತ್ತು ಬಾಗಯತು ಜಮೀನಾಗಿ ನಿಂತಿವೆ. ಹಿಂದೆ ಬಾಗಯತು ಜಮಿನಿಗೆ ಅಲ್ಲಿ ಇದ್ದಂಥ ದರ ಒಂದು ರೂಪಾಯಿನಿಂದ ಮೂರು ರೂಪಾಯಿವರೆಗೆ. ಅದನ್ನು ವೆಟ್ ಲ್ಯಾಂಡ್ ಫಸ್ಟ್ ಕ್ಲಾಸ್‌ಗಿಂತ ಉತ್ತಮವಾದುದು ಎಂದು ಅದರ ಪ್ರಕಾರ ದರವನ್ನು ಈಗ ಹಾಕಿದ್ದಾರೆ. ಇದು ಇಡೀ ಜಿಲ್ಲೆಗೆ ಅನ್ವಯವಾಗಿದೆ. ನಮ್ಮ ಜಿಲ್ಲೆಯಲ್ಲಿ ಮೊದಲಿನ ಕ್ಲಾಸಿಫಿಕೇಷನ್ ಪ್ರಕಾರ ಬಾಗಾಯತು ಲ್ಯಾಂಡ್ ಆಗಬೇಕಾದರೆ ಅದರಲ್ಲಿ ಯಾವುದೋ ಒಂದು ಫಲ ಬಿಡುವಂಥ ಎರಡು ಮೂರು ಮರವಿದ್ದರೆ ಸಾಕು. ಈ ಹೊತ್ತಿನ ರೇಟ್ ನೋಡಿದರೆ ಆ ಬಾಗಯತು ಉತ್ಪತ್ತಿ ಕೂಡ ಅಷ್ಟು ಬರಲಿಕ್ಕೆ ಸಾಧ್ಯವಿಲ್ಲ.

ಇನ್ನು ವೆಟ್ ಲ್ಯಾಂಡ್ಸ್ ವಿಷಯ ನೋಡುವುದಾದರೆ ಅದನ್ನು ನಿರ್ಣಯ ಮಾಡುವಾಗ ಮಣ್ಣಿನ ಪರಿಸ್ಥಿತಿ, ಅದರಲ್ಲಿ ಆಗುವಂಥ ಬೆಳೆ, ಆ ಸ್ಥಳಕ್ಕೆ ಇರುವ ಮಾರುಕಟ್ಟೆಯ ಸವಲತ್ತು ಇದನ್ನೆಲ್ಲ ನೋಡಿಕೊಂಡು ಕ್ಲಾಸಿಫಿಕೇಷನ್ ಮಾಡಬೇಕು ಎಂದು ಹೇಳಿದ್ದಾರೆ. ಉಡುಪಿ ಜೋನ್‌ನಲ್ಲಿ ಕರಾವಳಿ ತಾಲ್ಲೂಕುಗಳಾದ ಮಂಗಳೂರು, ಉಡುಪಿ, ಕುಂದಾಪುರ ಇವು ಬರುತ್ತವೆ. ಪುತ್ತೂರು ಜೋನ್ ಘಾಟ್ ಮತ್ತು ಸಬ್ ಘಾಟ್ ಪ್ರದೇಶ. ಉಡುಪಿ ಜೋನ್‌ನಲ್ಲಿ 9—44 ರೂಪಾಯಿ ಹಾಕಿದ್ದರೆ. ಪುತ್ತೂರು ಜೋನ್‌ನಲ್ಲಿ 9—47 ರೂಪಾಯಿ ಹಾಕಿದ್ದಾರೆ. ನಿಜವಾಗಿ ಪುತ್ತೂರಿಗಿಂತ ಉಡುಪಿ ಜೋನ್‌ನಲ್ಲಿ ಹೆಚ್ಚಾಗಿರಬೇಕು. ಮಣ್ಣಿನ ಗುಣ, ಬೆಳೆ ಮತ್ತು ಇತರ ಸೌಕರ್ಯಗಳು ಉಡುಪಿ ಜೋನಿಗೆ ಹೆಚ್ಚಾಗಿದ್ದು ಅಲ್ಲಿ ಹೆಚ್ಚಾಗಿ ಹಾಕಬೇಕಾಗಿತ್ತು. ಆದರೆ ಆ ರೀತಿ ಹಾಕಿಲ್ಲ.

ವೆಟ್ ಲ್ಯಾಂಡ್ಸ್‌ನಲ್ಲಿ ಮೂರು ತರಹ ಇದೆ. ಒಂದು ಬೆಳೆ ಬರುವಂಥದು, ಎರಡು ಬೆಳೆ ಬರುವಂಥದು ಮತ್ತು ಮೂರು ಬೆಳೆ ಬರುವಂಥದು. ಅಲ್ಲಿ ಮಳೆ ನೀರಿನಿಂದ ಸಾಗುವಳಿಯಾಗುವಂಥ ವೆಟ್ ಲ್ಯಾಂಡ್ಸ್ ಜಾಸ್ತಿ. ವೆಟ್ ಲ್ಯಾಂಡ್ಸ್‌ಗೆ ಉಡುಪಿಯಲ್ಲಿ ಮೊದಲನೇ ವರ್ಗಕ್ಕೆ 9—44 ರೂಪಾಯಿ, ಎರಡನೇ ವರ್ಗಕ್ಕೆ 8—62 ರೂಪಾಯಿ ಮತ್ತು ಮೂರನೆ ವರ್ಗಕ್ಕೆ 7—48 ರೂಪಾಯಿ ಹಾಕಿದ್ದಾರೆ. ಎಂದರೆ ಒಂದು ಬೆಳೆ ಬರುವುದಕ್ಕಿಂತ ಎರಡು ಮತ್ತು ಮೂರು ಬೆಳೆ ಬರುವುದಕ್ಕೆ ಒಂದೊಂದು ರೂಪಾಯಿ ಮಾತ್ರ ಜಾಸ್ತಿ ಹಾಕಿದ್ದಾರೆ. ನಮ್ಮಲ್ಲಿ

ಒಂದು ಬೆಳೆಯಾಗುವ ಗದ್ದೆಗಳಲ್ಲಿ ಮಳೆ ಬಂದರೆ ಮಾತ್ರ ಬೆಳೆಯಾಗುತ್ತದೆ. ನಮಗೆ ಯಾವ ನೀರಾವರಿ ಅನುಕೂಲವೂ ಇಲ್ಲ. ಎರಡು ಬೆಳೆ ತೆಗೆಯುವವರಿಗೆ ನಮಗಿಂತ ಎರಡು ಪಾಲು, ಮೂರು ಬೆಳೆ ತೆಗೆಯುವವರಿಗೆ ಮೂರು ಪಾಲು ಉತ್ಪತ್ತಿ ಬರುತ್ತದೆ. ಆದರೆ ತೀರ್ವೆ ಹಾಕಿರುವುದನ್ನು ನೋಡಿದರೆ ಒಂದೊಂದು ರೂಪಾಯಿ ಮಾತ್ರ ಹೆಚ್ಚಾಗಿದೆ. ನಮ್ಮಲ್ಲಿ ಹೆಚ್ಚು ಅನುಕೂಲವಿದ್ದರೆ ನಾವು ಪ್ರತಿಭಟಿಸಿ ಹೇಳಬೇಕಾದ್ದಿಲ್ಲ ಎನ್ನುವುದನ್ನು ಎಲ್ಲರೂ ಕೂಡ ತಿಳಿದುಕೊಳ್ಳಬೇಕಾದ ವಿಷಯ. ಹಿಂದೆ ಆದಂಥ ಎರಡು ಸೆಟಲ್‌ಮೆಂಟುಗಳಲ್ಲಿ ಜಮೀನ ಕ್ಲಾಸಿಫಿಕೇಷನ್ ಮಾಡುವಾಗ ನೀರಾವರಿ ಸೌಕರ್ಯವನ್ನು ಗಣನೆಗೆ ತೆಗೆದುಕೊಂಡಿದ್ದರು. ವಾಟರ್ ಸೇರಿಸಿ ಆ ಕಾಲಕ್ಕೆ ಕಂದಾಯ ಹಾಕಿದ್ದರು. ಈಗ ವಾಟರ್ ಸೆಸ್ ಪ್ರತ್ಯೇಕವಾಗಿ ನಮ್ಮ ಸರ್ಕಾರ ಹಾಕುತ್ತಿದೆ. 1934ನೇ ಇಸವಿಯಲ್ಲಿ ಕೂಡ ಸೆಕಂಡ್ ಕ್ಲಾಸ್, ಫಸ್ಟ್ ಕ್ಲಾಸ್ ಜಮೀನಿಗೆ ವಾಟರ್ ಸೆಸ್ ಬಿಟ್ಟು ಅದರ ಮೇಲೆ ಕಂದಾಯ ಹಾಕುತ್ತಿದ್ದರು. ಸರ್ಕಾರ ಈಗ ಹಾಕಿರುವ ದರಗಳು ಸರಿಯಾಗಿಲ್ಲ. ಎಲ್ಲೆಲ್ಲಿ ಸರಿಯಾಗಿ ಆಗಿಲ್ಲ ಅಂಥ ಕಡೆ ಸರಿಯಾಗಿದೆ ಅಥವಾ ಇಲ್ಲ ಎಂದು ಹೇಳಿದರೆ ಅದನ್ನು ನೋಡಬಹುದು ಎಂದು ಸರ್ಕಾರದವರು ಹೇಳುವುದು ಎಷ್ಟರ ಮಟ್ಟಿಗೆ ಸರಿ ಆಗುತ್ತದೆಯೋ ಗೊತ್ತಿಲ್ಲ. ಯಾವ ಜೋನ್‌ನಲ್ಲಿ ಕೆಟ್ಟದ್ದಾಗಿದೆ ಎಂದು ತಿಳಿದಾಗ ಯಾವ ಅಧಿಕಾರಿಗಳು ರೀ ಸೆಟಲ್‌ಮೆಂಟ್ ಮಾಡಿದರೋ ಅದೇ ಅಧಿಕಾರಿಗಳಿಗೆ ರಿವಿಷನ್ ಸೆಟಲ್‌ಮೆಂಟ್ ಕೂಡ ಮಾಡುವ ಸವಲತ್ತನ್ನು ಈ ಬಿಲ್‌ನಲ್ಲಿ ತಂದಿದ್ದಾರೆ. ಹಾಗೆ ಮಾಡುವಾಗ ಯಾವ ಜೋನ್‌ನಲ್ಲಿ ಪುನಃ ಸೆಟಲ್‌ಮೆಂಟ್ ಆಗಬೇಕು ಎನ್ನುವ ಅಧಿಕಾರವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ತೀರ್ಮಾನ ಮಾಡುವಾಗ ಯಾವ ಸಂದರ್ಭದಲ್ಲಿ ರಿವಿಷನ್ ಸೆಟಲ್‌ಮೆಂಟ್ ಮಾಡಬೇಕು ಎಂದು ಸ್ಪಷ್ಟವಾಗಿ ಹೇಳಿಲ್ಲ. ಸರ್ಕಾರದವರೇ ಸುಮೊ ಮೋಟೋ ಮಾಡಬೇಕು ಎಂದರೆ ಯಾವ ಸಂದರ್ಭದಲ್ಲಿ ಮಾಡಬೇಕು ? ಇದರಲ್ಲಿ ರಾಜಕೀಯ ಪ್ರಭಾವ ಬೀರುವುದಕ್ಕೆ ಸಾಧ್ಯವುಂಟು.

ಡೆಪ್ಯುಟಿ ಕಮಿಷನರು ಅಥವಾ ಬೇರೆ ಅಧಿಕಾರಿಗಳಿಗೆ ಸಮಾಧಾನ ಕಂಡಲ್ಲಿ ರಿವಿಷನ್ ಮಾಡಬೇಕೆಂದು ಹೇಳಿದ್ದಾರೆ. ಆದರೆ ಯಾವ ಸಂದರ್ಭದಲ್ಲಿ ಅವರೇ ಮಾಡಬೇಕು, ಫಸ್ಟ್ ಕ್ಲಾಸ್ ವೆಟ್ ಲ್ಯಾಂಡ್ ಎಂದರೆ ಎಷ್ಟು ಬೆಳೆ ಬರಬೇಕು, ಬಾಗಾಯತು ಭೂಮಿಯಲ್ಲಿ ಎಷ್ಟು ಬೆಳೆ ಬರಬೇಕು, ಎಷ್ಟು ಬೆಳೆ ಬರುವುದಕ್ಕೆ ಎಷ್ಟು ರೇಟ್ ಹಾಕಬೇಕು, ಎಂದು ಯಾವ ಕಡೆಯೂ ಹೇಳಿಲ್ಲ. ಮಾನ್ಯ ಸದಸ್ಯರೊಬ್ಬರು ಹೇಳಿದ ಹಾಗೆ ಅವರ ಇಚ್ಛೆ ಪ್ರಕಾರ ಮಾಡಬಹುದು. ಯಾವುದನ್ನು ಫಸ್ಟ್ ಕ್ಲಾಸ್ ಲ್ಯಾಂಡ್ ಮಾಡಬೇಕು, ಯಾವುದನ್ನು ಸೆಕಂಡ್ ಕ್ಲಾಸ್ ಲ್ಯಾಂಡ್ ಮಾಡಬೇಕು, ಯಾವುದನ್ನು ಗಾರ್ಡನ್ ಲ್ಯಾಂಡ್ ಮಾಡಬೇಕು ಎನ್ನುವ ತಳಹದಿ ಹಾಕದೆ ಇದ್ದರೆ ಮತ್ತು ಯಾವುದಕ್ಕೆ ಯಾವ ರೇಟ್ ಹಾಕಬೇಕು ಎನ್ನುವ ತಳಹದಿ ಹಾಕದೇ ಇದ್ದರೆ ಅಧಿಕಾರಿಗಳು ಏನು ಮಾಡಬೇಕು ? ಅವರು ಅವರ ಖುಷಿ ಬಂದ ಹಾಗೆ ಮಾಡಬೇಕಾಗುತ್ತದೆ ಆದ್ದರಿಂದಲೇ ಈ ಬಿಲ್ಲನ್ನು ಸಾರ್ವಜನಿಕಾಭಿಪ್ರಾಯ ಸಂಗ್ರಹಣೆಗೆ ಕಳಿಸಬೇಕೆಂದು ಮಾನ್ಯ ಸದಸ್ಯರು ಸೂಚಿಸಿದ್ದುದು ಸರಿಯಾದ ಆಲೋಚನೆ. ಈ ಹೊತ್ತು ನಿರ್ಣಯ ಮಾಡುವುದು ಮುಂದಿನ 30 ವರ್ಷಗಳ ವರೆಗೆ ಇರುವ ವಿಷಯ. ಆದುದರಿಂದ ಇದರಲ್ಲಿ ಸರ್ಕಾರವಾಗಲಿ, ಅಧಿಕಾರಿಗಳಾಗಲೀ, ಅವಸರ ಮಾಡಿ ಒಂದೆರಡು ತಿಂಗಳೊಳಗೆ ತೀರ್ಮಾನಮಾಡಿ ಮುಗಿಸುವ ವಿಷಯವಲ್ಲ. ಈ ಹೊತ್ತು ಆಹಾರ ಧಾನ್ಯಗಳ ಕ್ರಯ ಅಥವಾ ಕೃಷಿಯಿಂದ ಬರುವ ಉತ್ಪತ್ತಿಯ ಕ್ರಯ ಸಾಧಾರಣ ಮಟ್ಟಕ್ಕೆ ಇದ್ದರೂ ಕೂಡ ಮುಂದಿನ 30 ವರ್ಷಗಳಲ್ಲಿ ಅದೇ ರೀತಿಯಾಗಿ ನಿಲ್ಲುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಸಂಬಂಧಪಟ್ಟವರ ಅಭಿಪ್ರಾಯವನ್ನು ಕೂಲಂಕಷವಾಗಿ ತಿಳಿದುಕೊಂಡು ಅದನ್ನು ನೆಲೆಯಾಗಿಟ್ಟುಕೊಂಡು ಸರಿಯಾದ ತೀರ್ಮಾನಕ್ಕೆ ಬರಬೇಕು. ಯಾವ ದೃಷ್ಟಿಯಿಂದ ನೋಡಿದರೂ ಕೂಡ 1964ರಲ್ಲಿ ರೀ-ಸೆಟ್ಲ್‌ಮೆಂಟ್ ಆದಾಗ ಮಾಡಿರುವ ತಪ್ಪನ್ನು ಮುಂದೆ ಕೂಡ ಮಾಡುವ ಹಾಗೆ ಕಾಣುತ್ತದೆ. 1964ರಲ್ಲಿ 25 ಲಕ್ಷಕ್ಕಿಂತ ಹೆಚ್ಚು ಖರ್ಚಾಗಿದೆ, ಈಗ 9 ಲಕ್ಷ ಆಗಬಹುದು. ಒಂದು ವಿಷಯ ತಿಳಿದುಕೊಳ್ಳಬೇಕು, ಜನರಿಂದ ದೂರು ಬಂದಾಗ ಈ ರೀತಿ ರಿವಿಷನ್ ಸೆಟ್ಲ್‌ಮೆಂಟ್ ಮಾಡುತ್ತಿದ್ದರೆ ನಷ್ಟವಾಗಬಹುದು. ಸರಕಾರ ಏನು ಮಾಡಿದರೂ ಸರಿಯಾಗಿರುವುದಿಲ್ಲ, ನ್ಯಾಯವಾದ ರೀತಿಯಲ್ಲಿ ಮಾಡುವುದಿಲ್ಲ ಎಂಬ ಅಭಿಪ್ರಾಯ ಬರುವ ರೀತಿಯಲ್ಲಿ ಕೆಲಸ ಮಾಡಬಾರದು, ಸರಕಾರ ಮಾಡಿರುವ ತಪ್ಪನ್ನು ಮುಂದುವರಿಸಿದರೆ ಸೇಕಡ 80 ಮಂದಿ ರೈತರಲ್ಲಿ ವಿಶ್ವಾಸ ಹುಟ್ಟುವುದಿಲ್ಲ, ಅವಿಶ್ವಾಸ ಬರುವ ಸಂದರ್ಭ ಬರಬಹುದು. ಆದುದರಿಂದ ಈ ರೀತಿ ಮಾಡಬಾರದು. ಸಾರ್ವಜನಿಕರ ಅಭಿಪ್ರಾಯಕ್ಕೆ ಈ ಬಿಲ್ಲನ್ನು ಕಳಿಸಬೇಕು. ಅನಂತರ ಯಾವ ರೀತಿ ರಿವಿಷನ್ ಸೆಟ್ಲ್‌ಮೆಂಟ್ ಮಾಡಬೇಕು ಎಂದು ನೋಡಿ ಸರಿಯಾದ ತಳಹದಿ ಹಾಕಿ ನಂತರ ಮಾಡಿದರೆ ನಿಜವಾದ ಸೆಟ್ಲ್‌ಮೆಂಟ್ ಅಫ್ ಲ್ಯಾಂಡ್ ರೆವೆನ್ಯೂ ಆಗಬಹುದು, ಇಲ್ಲದಿದ್ದರೆ ಅನ್ಯಾಯವಾಗಬಹುದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

6-30 P.M.

† ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಈ ದಿವಸ ಸಭೆಯ ಮುಂದಿರುವ ಭೂಕಂದಾಯದ ತಿದ್ದುಪಡಿ ವಿಧೇಯಕವನ್ನು ಸಂಪೂರ್ಣವಾಗಿ ಸ್ವಾಗತಿಸಿ ಕೆಲವು ವಿಷಯಗಳನ್ನು ಪ್ರಸ್ತಾಪಿಸಬೇಕೆಂದು ಯೋಚನೆಮಾಡಿದ್ದೇನೆ. ನಮ್ಮ ಸ್ನೇಹಿತರುಗಳಾದ ವಿರೋಧ ಪಕ್ಷದವರು ಸಾರ್ವಜನಿಕರ ಅಭಿಪ್ರಾಯಕ್ಕೆ ಈವಿಧೇಯಕವನ್ನು ಕಳಿಸಬೇಕೆಂದು ಮೇಲಿಂದಮೇಲೆ ಹೇಳಿದರು. 1964-65ರಲ್ಲಿ ರೀ ಸೆಟ್ಲ್‌ಮೆಂಟ್ ಆದಾಗ ಸಾರ್ವಜನಿಕ ಅಭಿಪ್ರಾಯ ಎಷ್ಟುಮಟ್ಟಿಗೆ ಸರಕಾರದ ಮುಂದೆ ಬಂತು, ಎಷ್ಟು ರೈತರು ಅಹವಾಲು ಕೊಟ್ಟಿರಬಹುದು ಎಂಬುದು ಬಹುಶಃ ಎಲ್ಲರಿಗೂ ಗೊತ್ತಿರಬಹುದು, ಮಾನ್ಯ ಸದಸ್ಯರು ಇದನ್ನು ಎಷ್ಟೋಬಾರಿ ಪ್ರಸ್ತಾಪಮಾಡಿರಬಹುದು. ಅಂದಮೇಲೆ ಪುನಃ ಇದನ್ನು ಸಾರ್ವಜನಿಕ ಅಭಿಪ್ರಾಯಕ್ಕೆ ಕಳಿಸಬೇಕೆಂಬುದಕ್ಕೆ ಬಹುಶಃ ಯಾವ ಕಾರಣವೂ ಕಾಣುವುದಿಲ್ಲ. ಸರಕಾರದವರು ನಿಜವಾಗಿಯೂ ಕೂಡ ಬಹಳ ದೊಡ್ಡ ಮನಸ್ಸು ಮಾಡಿ ತೀರ್ಮಾನಮಾಡಿದ್ದಾರೆಂದು ರೈತರೇ ಒಪ್ಪಿದ್ದಾರೆ. ಯಾವತ್ತೇ ಆಗಲಿ, ಕಾನೂನು ಮಾಡಿದಮೇಲೆ 30 ವರ್ಷದೊಳಗೆ ಪುನಃ ಯಾವ ರೀತಿಯಲ್ಲೂ ಕೈಹಾಕುವುದಕ್ಕೆ ಅವಕಾಶವಿಲ್ಲ, ಈ ದಿವಸ ಅದನ್ನು ಕೂಡ ಮೀರಿ ರೈತರಿಗೆ ಸಹಾಯ ಮಾಡಬೇಕೆಂಬ ದೃಷ್ಟಿಯಿಂದ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆಂದು ರೈತರು ಇದನ್ನು ಸ್ವಾಗತಿಸಿದ್ದಾರೆ. ಈ ಕಂದಾಯ ಇರಬೇಕೆ, ಬೇಡವೆ, ಎಂಬ ವಿಚಾರದಲ್ಲಿ ಅನೇಕರು ಹಿಂದೆಯೇ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇಂದು ಶೇಕಡ 99 ಜನರು ರೈತರು ಕಂದಾಯ ತೆಗೆಯಬೇಕೆಂದು ಖಂಡಿತ ಹೇಳುತ್ತಿಲ್ಲ. ಕಂದಾಯ ಕೊಡದಿದ್ದರೆ ಜಮೀನಿನ ಬಗ್ಗೆ ದಾಖಲಾತಿಯೇನು ಎಂಬ ಅನುಮಾನವಿರುವಾಗ ಏಕೆ ಹೀಗೆ ಚರ್ಚೆಮಾಡುತ್ತಿದ್ದೀರಿ ಎಂದು ರೈತರು ಕೇಳುತ್ತಿದ್ದಾರೆ. ಆದುದರಿಂದ ದೇಶದಲ್ಲಿ 85 ರಷ್ಟು ಜನರೇನು ವ್ಯವಸಾಯದ ಮೇಲಿದ್ದಾರೆ ಅವರಿಗೆ ಈ ವಿಚಾರದಲ್ಲಿ ಚರ್ಚೆಯಾಗುವುದರಲ್ಲಿ ಉತ್ಸಾಹವಿಲ್ಲ.

ಈ ತಿದ್ದುಪಡಿ ತಂದಿರುವ ವಿಷಯದಲ್ಲಿ ನಾನು ಮೊನ್ನೆ ಊರಿಗೆ ಹೋದಾಗ ರೈತರು ಪ್ರಶ್ನೆ ಮಾಡಿದರು, ಬಹಳ ವ್ಯಥೆಪಟ್ಟರು, ಕಂದಾಯ ವಸೂಲುಮಾಡಿದರೂ ಚಿಂತೆಯಿಲ್ಲ, ಈಗ ನೋಟೀಸ್ ಕೊಟ್ಟರೆ ಅಪೀಲು ಮಾಡಿದರೆ ಹತ್ತು ವರ್ಷ ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿಗೆ ತಿರುಗಬೇಕು, ಡಿ.ಸಿ. ಅಡ್‌ಜರ್ನ್ ಮಾಡುತ್ತಾರೆ, ಹೀಗಾಗಿ ಬಹಳ ದಿವಸ ಅಲ್ಲಿಗೆ ತಿರುಗಬೇಕು, ಈ ಗೋಳಿದೆ, ಇದು ತೀರ್ಮಾನವಾಗುವವರೆಗೆ ಕಂದಾಯ ನಿರ್ಧಾರ ಮಾಡುವುದಿಲ್ಲ, ಆ ಮೇಲೆ ಹೊರೆಯಾಗಿ ತೊಂದರೆಯಾಗುವುದು. ಇದರಿಂದ ಇನ್ನೂ ಕಿರುಕುಳವಾಗುವುದು ಎಂದು ಬಹಳ ವ್ಯಥೆಪಟ್ಟರು. ಹೇಗಾದರೂ ಮಾಡಿ ಒಂದೇ ಸಾರಿ ಕಂದಾಯ ನಿಗದಿ ಮಾಡಿದರೆ ಒಳ್ಳೆಯದು ಎಂದು ಹೇಳಿದರು. ಆದುದರಿಂದ ಈ ವಿಷಯದಲ್ಲಿ ಚರ್ಚೆಮಾಡಬೇಕಾದ ಅಗತ್ಯವಿದ್ದರೂ ಅಪೀಲು ಮಾಡುವಾಗ ರೈತರಿಗೆ ತೊಂದರೆಯಾಗುವುದು ನಷ್ಟವಾಗುವುದು ಎಂದು ಅನ್ನಿಸುತ್ತದೆ. ಅಪೀಲು ಮಾಡಿದರೆ ಲಾಯರ ಬಳಿಗೆ ಹೋಗಬೇಕು, ಕನಿಷ್ಠವಾಗಿ ಅವರಿಗೆ ನೂರು ರೂಪಾಯಿಗೆ ಕಡಮೆ ಕೊಡುವುದಕ್ಕಾಗುವುದಿಲ್ಲ. ಹೀಗೆ ಎಷ್ಟೋ ಖರ್ಚು ಬರುತ್ತದೆ. ಆದುದರಿಂದ ನೋಟೀಸ್ ಬೇಡ, ಸುಮ್ಮನೆ ಕಂದಾಯ ಕೊಡೋಣ, ಖಚಿತವಾಗಿ ಹೇಳಿ ಎಂದು ಹೇಳುತ್ತಾರೆ. ಈ ದೃಷ್ಟಿಯಿಂದ ಸರಕಾರದಲ್ಲಿ ನಾನು ವಿನಂತಿಮಾಡುವುದು ದಯಮಾಡಿ ಜಿಲ್ಲಾಧಿಕಾರಿಗಳಿಗೆ ಈಗಿರುವ ರೀತಿಯಲ್ಲಿ ಎರಡರಷ್ಟಕ್ಕಿಂತ ಕಂದಾಯ ಹೆಚ್ಚಾಗಿಲ್ಲದಿರುವ ಕಡೆಗಳಲ್ಲಿ ಎಂಟು ದಿವಸಗಳಲ್ಲಿಯೇ ತೀರ್ಮಾನ ಮಾಡುವುದು ಬಹಳ ಒಳ್ಳೆಯದು ಎಂದು ತಿಳಿಸಬೇಕು. ಏಕೆಂದರೆ ದಿನವೂ ರೈತರು ತಿರುಗುವುದಕ್ಕೆ ಅವಕಾಶ ಮಾಡಬಾರದು. ಅಪೀಲುಗಳಿಗಾಗಿ ಒಂದು ವಾರ ನಿಗದಿಮಾಡಿ, ಆ ದಿವಸ ಅಕಸ್ಮಾತ್ ಮಂತ್ರಿಗಳು ಪ್ರವಾಸ ಬಂದರೆ ಅವರನ್ನು ಭೇಟಿಮಾಡಿ ಬಂದು ಅಪೀಲುಗಳನ್ನು ಇತ್ಯರ್ಥಮಾಡಲು ಅವಕಾಶ ಇರಬೇಕು. ಅಪೀಲಿನ ದಿವಸ ಲಾಯರು ಬಂದಿರುತ್ತಾರೆ, ಮಂತ್ರಿಗಳು ಆಗಾಗ್ಯೆ ಪ್ರವಾಸ ಬರುವುದು ಸ್ವಾಭಾವಿಕ, ಆಗ ಮಂತ್ರಿಗಳ ಜೊತೆಯಲ್ಲಿ ಹೋದರೆ, ಕೇಸು ನಡೆಸುವುದಕ್ಕಾಗುವುದಿಲ್ಲ, ಎಷ್ಟೋ ದೂರದಿಂದ ಬಂದಿರುವವರಿಗೆ ತೊಂದರೆಯಾಗುವುದು. ಆದುದರಿಂದ ತೊಂದರೆಯಾಗುವುದಕ್ಕೆ ಅವಕಾಶ ಕೊಡಬಾರದು. ಗೊತ್ತುಮಾಡಿರುವ ದಿವಸ ತೀರ್ಮಾನಮಾಡಲು ಅವಕಾಶ ಕಲ್ಪಿಸಬೇಕು.

ಆಮೇಲೆ ಈ ದಿವಸ ದರ ನಿಗದಿಮಾಡುತ್ತೀರಿ. ಮಲೆನಾಡಿನ ಕಡೆ ಶ್ರೀ ರಾಚಯ್ಯನವರಿಗೆ ತೋರಿಸಿದೆ, ಮನೆಯ ಪಕ್ಕದಲ್ಲಿ ನಾಲ್ಕು ಬಾಳೆಯ ಗಿಡ ಹಾಕುವುದುಂಟು, ಯಾರಾದರೂ ಮನೆಗೆ ಬಂದರೆ ಊಟಕ್ಕೆ ಬಾಳೆಯ ಎಲೆ ಬೇಕಾಗುವುದು ಎಂದು ಮನೆಯ ಮುಂದೆ ತೆಂಗಿನ ಗಿಡ ಮಾವಿನ ಗಿಡ ಬೆಳೆಸುವುದುಂಟು, ಇಂದು ಹಾರ್ಟಿಕಲ್ಚರಲ್ ಇಲಾಖೆ ಇದಕ್ಕೆ ಪ್ರೋತ್ಸಾಹ ಕೊಡುತ್ತಿದೆ. ಹೀಗೆ ಒಂದೆರಡು ಗಿಡಗಳಿದ್ದರೆ ಆ ಜಮೀನನ್ನು ಬಾಗಾಯ್ತು ಎಂದು ಪರಿಗಣಿಸಿ ಬಾಗಾಯ್ತು

ಕಂದಾಯ ಹಾಕಿದರೆ ಗತಿಯೇನು ? ಈ ವಿಷಯ ವಿಮರ್ಶೆ ಮಾಡುವಂತೆ ಅದರಲ್ಲೂ ಸ್ಪೆಷಲ್ಲಾಗಿ ಮಲೆನಾಡು ಕಡೆಗೆ ಗಮನ ಕೊಡುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಿದರೆ ಬಹಳ ಒಳ್ಳೆಯದಾಗುತ್ತದೆ.

ಈಗ ಕಂದಾಯ ವಸೂಲುಮಾಡುವ ವಿಧಿಯನ್ನು ಸಡಿಲಮಾಡುವುದಕ್ಕೆ ಬಡವರು ಮತ್ತಿತರರು ಮೊನ್ನೆ ನನಗೆ ತಿಳಿಸಿದರು. ಇದು ನನಗೆ ಟೆಲಿಗ್ರಾಂ ಬಂದಿದೆ. ನಿಂತಿರುವ ಕಂದಾಯವನ್ನೆಲ್ಲಾ ಒಂದೇ ಸಲ ಕೊಡಬೇಕೆಂದು ಹೇಳುತ್ತಿದ್ದಾರೆ. ಇದರಿಂದಾಗುವ ತೊಂದರೆಯನ್ನು ಸ್ವಲ್ಪ ಯೋಚನೆ ಮಾಡಬೇಕು. ಹಿಂದೆ ಕೂಡ ಅನೇಕರು ಡೆಲಿಗೇಷನ್ ಬಂದು 2-3 ವರ್ಷದ ಕಂದಾಯ ಒಂದೇ ಸಲ ಕೊಡುವುದಕ್ಕಾಗುವುದಿಲ್ಲ, ಕಂತುಗಳಲ್ಲಿ ಕೊಡಲು ಅವಕಾಶ ಕೊಡಬೇಕು ಎಂದು ಕೇಳಿಕೊಂಡರು. ವಜಾಮಾಡಿ ಎಂದು ಕೇಳುವುದು ಕಡಮೆ. ಇದರ ಜೊತೆಗೆ ನೋಟೀಸು ಕೊಟ್ಟರೆ ಅಪೀಲು ಹಾಕಿ ತೀರ್ಮಾನವಾಗಲು ಸಾವಕಾಶವಾಗುವುದು, ಹಣ ಖರ್ಚು ಮಾಡಬೇಕಾಗುವುದು. ಆದುದರಿಂದ ತೀವ್ರವಾಗಿ ಈ ವಿಚಾರವನ್ನು ಯೋಚನೆಮಾಡಿ ಒಂದು ತೀರ್ಮಾನಕ್ಕೆ ಬರಬೇಕು. ನೋಟೀಸು ಕೊಟ್ಟು ತಕ್ಷಣ ಆಕ್ಷನ್ ತೆಗೆದುಕೊಂಡರೆ ಕಷ್ಟವಾಗುವುದು ಇದನ್ನು ಯೋಚನೆಮಾಡಿ ಜಿಲ್ಲಾಧಿಕಾರಿಗಳು ತೊಂದರೆಯಾಗುವಂತೆ ಒಂದು ತೀರ್ಮಾನ ಕೊಡಬೇಕು. ಬಹುಶಃ ಈಗ ಹೊಸದಾಗಿ ನೋಟೀಸು ಕೊಡುವುದರಿಂದ ಕೋರ್ಟಿಗೆ ಹೋಗಿ ಯಾವ ರೀತಿ ವೆಚ್ಚ ಮಾಡಬೇಕಾಗುವುದೋ ಏನೋ. ಈ ದೃಷ್ಟಿಯಿಂದ ಸರಿಯಾದ ವ್ಯವಸ್ಥೆ ಮಾಡಬೇಕು. ಪದೇ ಪದೇ ಸರಕಾರದ ಮುಂದೆ ಬರುವಂತೆ ಮಾಡಬಾರದು ಎಂದು ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ವಾಟರ್ ಟ್ಯಾಕ್ಸ್, ಇದು ನಮ್ಮಲ್ಲಿ ಅಸಾಧ್ಯವಾಗಿದೆ. 300 ರೂಪಾಯಿ ಕಂದಾಯ ಕೊಡತಕ್ಕ ಒಬ್ಬ ರೈತ ಹಿಸ್ಸೆ ಮಾಡಿಕೊಂಡ, ಆತನಿಗೆ 1700 ರೂಪಾಯಿಗೆ ನೋಟೀಸು ಹೋಗಿದೆ. ವಾಟರ್‌ರೇಟು ಮೇನಟೆನನ್ಸ್ ಚಾರ್ಜನ್ನು ಇದೆಲ್ಲಾ ಸೇರಿಕೊಂಡು ಇದನ್ನು ನೋಡಿ ಅವನು ಬಹಳ ಗಾಬರಿಯಾಗಿದ್ದಾನೆ. ಇದನ್ನು ಹೇಗೆ ಕೊಡುವುದು, ಜಮೀನು ಮಾರಬೇಕೆ ಅಥವಾ ಏನು ಮಾಡಬೇಕು ಅಂತ ಅನ್ನುವುದು ಅವನಿಗೆ ಗೊತ್ತಾಗದಂತೆ ಆಗಿದೆ. ತಾವು ಇವತ್ತು ಪರಿಶೀಲನೆ ಮಾಡಿ ನೋಡಬೇಕು, ಮಲೆನಾಡಿನಲ್ಲಿ ಹಾಕಿರುವುದು ಸಂಪೂರ್ಣವಾಗಿ ತರೀ ಕಂದಾಯ. ಮಾನ್ಯ ರೆವಿನ್ಯೂ ಮಂತ್ರಿಗಳು ಅಲ್ಲಿ ಅಂತಹ ಪ್ರದೇಶದಲ್ಲಿ ಖುಷ್ಕಿ ಕಂದಾಯವನ್ನೇ ಕೊಡಬಹುದು, ತರೀ ಕಂದಾಯ ಕೊಡಬೇಕಾದ ಅವಶ್ಯಕತೆ ಇಲ್ಲ ಎಂದು ಹೇಳಿದ್ದರು. ಅಧಿಕಾರಿಗಳು ಮಾತ್ರ ನಮಗೆ ಆ ರೀತಿ ಯಾವ ಸೂಚನೆಯೂ ಬಂದಿಲ್ಲ ಎಂದು ಹೇಳಿ ತರೀ ಕಂದಾಯ, ಅದರಮೇಲೆ ವಾಟರ್ ರೇಟು, ಇದೆಲ್ಲವನ್ನೂ ಹಾಕಿದ್ದಾರೆ. ಮಳೆ ಬಂದಾಗ ನೀರು ಹೊಂಡದಲ್ಲಿ ನಿಂತಿರುತ್ತದೆ. ಅದಕ್ಕೆ ಈಚೆಗೆ ತೂಬು ಹಾಕಿಕೊಂಡು ಅಕ್ಟೋಬರ್ ನವಂಬರ್ ಎರಡು ತಿಂಗಳು ಮಾತ್ರ ಆ ಜಮೀನಿಗೆ ನೀರನ್ನು ಉಪಯೋಗಿಸಿಕೊಳ್ಳುತ್ತಾರೆ. ಇದಕ್ಕೆ ಮೇನಟೆನನ್ಸ್ ಚಾರ್ಜು, ವಾಟರ್‌ರೇಟು ಎಲ್ಲವನ್ನೂ ಹಾಕಿದ್ದಾರೆ. ಆದ್ದರಿಂದ ಜಾಗ್ರತೆ ಒಂದು ಸರ್ಕ್ಯುಲರ್ ಕಳುಹಿಸಿ ನಾಲೆ ನೀರು ಉಪಯೋಗ ಮಾಡಲು ಸಣ್ಣ ಅಣೆಕಟ್ಟು ಕಟ್ಟಿದ್ದರೆ ಅದಕ್ಕೆ ಖುಷ್ಕಿ ಕಂದಾಯ ವಸೂಲು ಮಾಡಬೇಕೆಂದು ತಿಳಿಸಬೇಕು. ವಾಟರ್ ಸೆಸ್ ನಮಗೆ ಸಂಬಂಧವಿಲ್ಲ, ಪಿ.ಡಬ್ಲ್ಯೂ.ಡಿ. ಅವರು ವಸೂಲು ಮಾಡುತ್ತಾರೆ ಎಂದು ಹೇಳುತ್ತಾರೆ, ವಸೂಲು ಮಾಡುವುದಕ್ಕೆ ನೋಟೀಸ್ ಕೊಡುವವರು ರೆವಿನ್ಯೂ ಡಿಪಾರ್ಟಮೆಂಟನವರಾದ್ದರಿಂದ ಇವರಿಗೆ ಬರುತ್ತದೆಯೇ ಹೊರತು ಅವರಿಗೆ ಬರುವುದಿಲ್ಲ. ಆದ್ದರಿಂದ ಈ ವಿಷಯದಲ್ಲಿ ತಮ್ಮ ಅಧಿಕಾರಿಗಳಿಗೆ ಸೂಕ್ತವಾದ ಸೂಚನೆಗಳನ್ನು ಕೊಡಬೇಕೆಂದು ಹೇಳುತ್ತೇನೆ. ಈಗಾಗಲೇ ಭದ್ರಾ ಪ್ರಾಜೆಕ್ಟಿನಲ್ಲಿ ಅನೇಕರ ಜಮೀನು ಮುಳುಗಡೆಯಾಗಿ ಬಹಳ ಕಷ್ಟಪಟ್ಟಿದ್ದಾರೆ. ತಾವು ಈ ತಿದ್ದುಪಡಿಯನ್ನು ಏಪ್ರಿಲ್ ಮೊದಲನೆ ವಾರದಲ್ಲಿ ತರುತ್ತೇವೆ ಎಂದು ವಿರೋಧ ಪಕ್ಷದವರಿಗೆ ಆಶ್ವಾಸನೆ ಕೊಟ್ಟಿದ್ದೀರಿ, ಆ ಪ್ರಕಾರ ತಂದಿದ್ದೀರಿ, ಇದು ಪಾಸ್ ಆಗುತ್ತದೆ ಪಾಸ್ ಆದಮೇಲೆ ಇದರಲ್ಲಿತಕ್ಕ ತೊಂದರೆಗಳನ್ನು ನಿವಾರಣೆ ಮಾಡಲು ತಾವು ಒಂದು ಸರ್ಕ್ಯುಲರ್ ಮೂಲಕ ತಮ್ಮ ಅಧಿಕಾರಿಗಳಿಗೆ ಸರಿಯಾದ ಸೂಚನೆಯನ್ನು ಕೊಡಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ನಾಲ್ಕು ಮಾತುಗಳನ್ನು ಆಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಮೈಸೂರು ಲ್ಯಾಂಡ್ ರೆವಿನ್ಯೂ ಆಕ್ಟಿಗೆ ಈ ದಿನ ಮೈಸೂರು ಲ್ಯಾಂಡ್ ರೆವಿನ್ಯೂ ಸೆಕೆಂಡ್ ಅಮೆಂಡ್‌ಮೆಂಟ್ ಮಸೂದೆಯನ್ನು ಸರ್ಕಾರದವರು ಏನು ತಂದಿದ್ದಾರೆ ಅದನ್ನು ವಿರೋಧಿಸಿ ಕೆಲವು ಮಾತುಗಳನ್ನು ಹೇಳ ಬಯಸುತ್ತೇನೆ. ಈ ಮಸೂದೆಯ ಬಗ್ಗೆ ನಿನ್ನೆ ದಿನ ಆಳುವ ಪಕ್ಷದವರ ಪರವಾಗಿ ಚರ್ಚೆಯನ್ನು ಪ್ರಾರಂಭ ಮಾಡಿದ

(ಶ್ರೀ ಪಿ. ವೆಂಕಟಗಿರಿಯಪ್ಪ)

ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ಮಾತನಾಡುತ್ತಾ ಮಂತ್ರಿಗಳಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಈ ಮಸೂದೆ ಸಮರ್ಪಕವಾಗಿದೆ, ಇದನ್ನು ಒಪ್ಪಿಕೊಳ್ಳಬೇಕೆಂಬ ವಿಷಯ ಅಷ್ಟೇ ಹೇಳಲಿಲ್ಲ, ವಿರೋಧ ಪಕ್ಷದವರ ಬಗ್ಗೆ ಏನೇನು ಹೇಳಬಾರದಾಗಿತ್ತೊ ಅದನ್ನೆಲ್ಲಾ ಹೇಳಿದ್ದಾರೆ. ಏನೋ ಒಂದು ತಪ್ಪು ಮಾಡಿ ಅದನ್ನು ಫೇಸ್ ಸೇವಿಂಗ್ ಡಿವೈಸ್ ಅಂತ ಹೇಳಿ ಅದನ್ನು ಮುಚ್ಚಿಕೊಳ್ಳುವುದಕ್ಕೆ ನಾವು ಈ ಮಸೂದೆಯನ್ನು ವಿರೋಧ ಮಾಡುತ್ತಾ ಇದ್ದೇವೆ, ಇದು ಬಹಳ ಸಮಗ್ರವಾಗಿದೆ, ಬಹಳ ಸರಿಯಾಗಿದೆ ಶ್ರೀಮಾನ್ ನಂಜೇಗೌಡರು ತಂದಂತಹ ಮಸೂದೆಗಿಂತ ಬಹಳ ಉತ್ತಮವಾಗಿದೆ, ಇದನ್ನು ವಿರೋಧ ಮಾಡುವುದಕ್ಕೆ ಯಾವ ಕಾರಣವೂ ಇಲ್ಲ, ಯಾವ ಆಧಾರವೂ ಕೂಡ ಇಲ್ಲ ಎನ್ನುವ ಧಾಟಿಯಲ್ಲಿ ಶ್ರೀಮಾನ್ ಶ್ರೀನಿವಾಸ್‌ರವರು ಮಾತನಾಡಿದರು, ಅಷ್ಟೇ ಅಲ್ಲದೆ ಇನ್ನೂ ಮುಂದೆ ಹೋಗಿ ಏನು ಎಂದರೆ ಈ ಭೂಕಂದಾಯ ಪದ್ಧತಿಯನ್ನು ಶ್ರೀಮಾನ್ ಗೋಪಾಲಗೌಡರು ಮತ್ತು ಇನ್ನೂ ಕೆಲವರು ವಿರೋಧ ಮಾಡಿದರು, ವಿರೋಧ ಮಾಡುವುದಕ್ಕೆ ಏನು ಕಾರಣವೂ ಇಲ್ಲ ಅವರಷ್ಟಕ್ಕೆ ಮಾತ್ರ ಅವರು ಮಾತನಾಡುತ್ತಾ ಇದ್ದಾರೆ, ಮೈಸೂರು ರಾಜ್ಯದ ನಮ್ಮ ರೈತರು ಈ ಭೂಕಂದಾಯ ಪದ್ಧತಿ ಇರಬೇಕೆಂದು ನಮಗೆ ತಿಳಿಸಿದ್ದಾರೆ ಎಂಬ ಧಾಟಿಯಲ್ಲೂ ಕೂಡ ಹೇಳಿದರು. ಈ ದಿನ ರೈತರ ಪರವಾಗಿ ಮಾತನಾಡುವುದಕ್ಕೆ ವಿರೋಧಪಕ್ಷದವರಿಗೇ ಅಲ್ಲ ತಮಗೂ ಅಧಿಕಾರ ಇದೆ, ಆದ್ದರಿಂದ ಈ ಭೂಕಂದಾಯದ ಪದ್ಧತಿಯನ್ನು ಉಳಿಸಿಕೊಳ್ಳಬೇಕೆಂದು ರೈತರ ಅಭಿಪ್ರಾಯ ಇದೆ ಎಂದು ಮಾನ್ಯ ಸದಸ್ಯರಾದ ಶ್ರೀಮಾನ್ ಶ್ರೀನಿವಾಸ್‌ರವರು ತಿಳಿಸಿದರು. ಈ ಭೂಕಂದಾಯವನ್ನು ತೆಗೆದುಹಾಕಿದರೆ ರೈತರ ಮೇಲೆ ವ್ಯವಸಾಯದ ವರಮಾನ ತೆರಿಗೆಯನ್ನು ಹಾಕಬೇಕಾಗುತ್ತದೆ ಆ ವರಮಾನ ತೆರಿಗೆಯನ್ನು ಹಾಕಬಾರದು ಎಂಬುದು ಕೂಡ ರೈತರ ಅಭಿಪ್ರಾಯ ಎಂಬುದನ್ನು ಕೂಡ ಅವರು ತಿಳಿಸಿದರು. ಅವರು ಹಾಗೆ ಹೇಳುವುದರಲ್ಲೇನೂ ವಿಶೇಷವಿಲ್ಲ. ಕಾಂಗ್ರೆಸ್ಸಿನವರ ನಿಜಸ್ವರೂಪದಲ್ಲಿ ರೈತನೆಂದರೆ ಯಾರು ಎಂಬುದನ್ನು ಅವರೀಗ ತಿಳಿಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷದವರ ಗಮನದಲ್ಲಿ ಇರತಕ್ಕ ರೈತರೆಂದರೆ ಅವರು ಕಾಫೀಪ್ಲಾಂಟರುಗಳಿರಬೇಕು ಇಲ್ಲವೇ ನೂರಾರು ಎಕರೆ ಜಮೀನ್ದಾರರಾಗಿರಬೇಕು. ಹಾಗಿದ್ದರೆ ಮಾತ್ರ ಅವರಕಣ್ಣಿಗೆ ರೈತ ಕಾಣಿಸುತ್ತಾನೆ, ಇಲ್ಲದಿದ್ದರೆ ಇಲ್ಲ. ಇನ್ನು ರಾಜ್ಯದಲ್ಲಿ ಶೇಕಡ 90 ರಷ್ಟು ಇರತಕ್ಕ ಈ 5—10 ಎಕರೆಗಳ ಸಣ್ಣ ಪುಟ್ಟ ರೈತರೇನಿದ್ದಾರೆ ಅವರು ಇವರ ಕಣ್ಣಿಗೇ ಕಾಣಿಸುವುದಿಲ್ಲ. ಈ ದಿವಸ ರಾಜ್ಯದಲ್ಲಿರತಕ್ಕ ಸುಮಾರು ನೂರಕ್ಕೆ 90 ರಷ್ಟು ಜನ ಕೇವಲ 5—10 ಎಕರೆ ಭೂಮಿಯನ್ನು ಇಟ್ಟುಕೊಂಡು ಅದರಲ್ಲಿ ಸಾಕಷ್ಟು ಬೆಳೆ ಇಲ್ಲದೆ ಅವರು ತಮ್ಮನ್ನು ಜಮೀನ್ದಾರರು ಎಂತ ಕರೆದು ಕೊಂಡರೂ ದಿನಕ್ಕೆ ಎರಡು ಹೊತ್ತು ಊಟಕ್ಕಿಲ್ಲದೆ, ಅರೆಹೊಟ್ಟೆ ಅರೆಬಟ್ಟೆ, ಹೆಂಡತಿಗೆ ಸೀರೆ ತರುವುದಕ್ಕೆ ಗತಿಯಿಲ್ಲ; ಮಕ್ಕಳಿಗೆ ವಿದ್ಯೆ ಕಲಿಸುವುದಕ್ಕೆ ಹಣವಿಲ್ಲ ಮತ್ತು ಮನೆಯಲ್ಲಿ ಕಾಯಿಲೆ ಬಿದ್ದವರಿಗೆ ಔಷಧಿ ಕೊಡಿಸಿ ಚಿಕಿತ್ಸೆ ನಡೆಸುವುದಕ್ಕೆ ಊತ್ಸವಿಲ್ಲ, ಇಂಥ ಭೂಮಾಲೀಕರು ನಮ್ಮ ರಾಜ್ಯದಲ್ಲಿ ಬೀದಿ ಬೀದಿಗಳಲ್ಲಿ ಅಲೆಯುತ್ತಿದ್ದಾರೆ, ಇನ್ನು ವ್ಯವಸಾಯದ ಲೈನಿನಲ್ಲಿ ಕೂಲಿ ಮಾಡಿಕೊಂಡಿರತಕ್ಕ ಕಾರ್ಮಿಕರ ವಿಷಯವನ್ನಂತೂ ಹೇಳುವುದಕ್ಕೆ ಸಾಧ್ಯವೇ ಇಲ್ಲ. ಇಂಥ ದೀನದರಿದ್ರರ ಅವಸ್ಥೆಯಲ್ಲಿರತಕ್ಕ ರೈತ ಎಂದಾದರೂ ಸರ್ಕಾರಕ್ಕೆ ಕಂದಾಯವನ್ನು ರದ್ದು ಮಾಡಬೇಡಿ ಎಂದು ಕೇಳಿಕೊಂಡಿರಲಾರ. ಹಾಗೆ ಕೇಳತಕ್ಕ ಸಂದರ್ಭಗಳೂ ಇಲ್ಲ. ಆದಾಗ್ಯೂ ರೈತ ಕಂದಾಯ ಕೊಡುವುದಕ್ಕೆ ಯಾವತ್ತೂ ತಯಾರಾಗಿದ್ದಾನೆ ಎಂದು ಕಾಂಗ್ರೆಸ್ಸಿನವರು ಇಲ್ಲಿ ಹೇಳುತ್ತಿರಬೇಕಾಗಿದ್ದರೆ ಆ ರೈತನು ಯಾರಿರಬೇಕು ? ಹಾಗೆ ಹೇಳಿರಬೇಕಾಗಿದ್ದರೆ ಅವರು ಭಾರಿ ಭಾರಿ ಕಾಫೀ ಪ್ಲಾಂಟರುಗಳಾಗಿರಬೇಕು ಇಲ್ಲವೇ ನೂರಾರು ಎಕರೆ ಭೂ-ಮಾಲಿಕರಾಗಿರಬೇಕು. ಅಂಥವರೇ ಈ ದಿವಸ ಆ ಕಾಂಗ್ರೆಸನ್ನು ಬೆಳೆಸುತ್ತಿರುವ ಜನ. ರಾಜ್ಯದಲ್ಲಿರತಕ್ಕ ಶ್ರೀಮಂತರೈತರ ಬಲದ ಮೇಲೆ ರಾಜ್ಯಾಡಳಿತ ನಡೆಸುತ್ತಿರುವ ಈ ಕಾಂಗ್ರೆಸ್ ಸರ್ಕಾರ ಈ ದಿವಸ ದೇಶದಲ್ಲಿರತಕ್ಕ ಲಕ್ಷಾಂತರ ಜನ ಸಣ್ಣ ಪುಟ್ಟ ರೈತರನ್ನು ತೃಣೀಕರಿಸಿ ಅವರ ಮೇಲೆ ಹೊರಲಾರದ ಕಂದಾಯದ ಹೊರೆಯನ್ನು ಹೇರುವುದಕ್ಕೆ ಹೊರಟಿರತಕ್ಕದ್ದು ಬಹಳ ಅನ್ಯಾಯ. ಕಾಂಗ್ರೆಸ್ ಪಕ್ಷದಲ್ಲಿ ಇರತಕ್ಕ ಒಂದು ವರ್ಗದ ಜನ ರಾಜ್ಯದಲ್ಲಿರತಕ್ಕ ದೊಡ್ಡ ದೊಡ್ಡ ಉದ್ದಿಮೆದಾರರುಗಳನ್ನು ಕೈಬಿಟ್ಟು ಆ ಶ್ರೀಮಂತರ ಗೋಜಿಗೇ ಹೋಗದೆ ರಾಜ್ಯದಲ್ಲಿರತಕ್ಕ ಸಣ್ಣ ಪುಟ್ಟ ಜಮೀನ್ದಾರರ ಮೇಲೆ ಅವಷ್ಟೂ ಕಂದಾಯದ ಹೊರೆಯನ್ನು ಹೇರ ಬೇಕು ಎನ್ನತಕ್ಕ ಒಂದು ವಾದವನ್ನು ಬಹಳ ಹಿಂದಿನಿಂದಲೂ ಮಾಡುತ್ತಲೇ ಬಂದಿದ್ದಾರೆ. ಆದರೆ ಅದೇನೋ ಇತ್ತೀಚೆಗೆ ಇದ್ದಕ್ಕಿದ್ದಹಾಗೆ ಇದೇ ಸಭೆಗೆ ಮಾನ್ಯ ಹಣಕಾಸಿನ ಸಚಿವರು ಭೂ ಕಂದಾಯವನ್ನು ರದ್ದುಮಾಡುತ್ತೇವೆ, ಇನ್ನುಮುಂದಕ್ಕೆ ಈ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗುವುದಿಲ್ಲ, ಎಂಬ ಭರವಸೆಯನ್ನು ಕೊಟ್ಟಿದ್ದರು. ಆದರೆ ಈ ಮಾನ್ಯ ರೆವಿನ್ಯೂ ಸಚಿವರು ಹಿಂದೆ ಈ ಸರ್ಕಾರ ಯಾವತ್ತೂ ಅಂಥ ಒಂದು ಭರವಸೆಯನ್ನು ಕೊಟ್ಟೇ

ಇಲ್ಲ ಎಂದು ಹೇಳುತ್ತಿದ್ದಾರೆ. ಅಷ್ಟೇ ಅಲ್ಲ ಸರ್ಕಾರದವರು ಇನ್ನೂ ಏನು ಹೇಳುತ್ತಿದ್ದಾರೆ ಎಂದರೆ ವಿರೋಧ ಪಕ್ಷಗಳವರು ಒಂದು ರಾಜಕೀಯ ನಡೆಸಲು ಹೀಗೆ ಹೇಳದೆ ಇದ್ದುದನ್ನು ಹೇಳಿ ವಾದ ಮಾಡುವುದಕ್ಕೆ ಪ್ರಾರಂಭಮಾಡಿದ್ದಾರೆಂದು ಹೇಳುತ್ತಿದ್ದಾರೆ. ಈ ದಿವಸ ಕಾಂಗ್ರೆಸ್ ಸರ್ಕಾರ ಹಾಗೆ ಒಂದು ವಾದವನ್ನು ಎತ್ತುತ್ತಿದ್ದರೆ ಅದಕ್ಕೆ ನನ್ನ ಉತ್ತರವಾದರೂ ಇಷ್ಟೆ: ಆ ದಿವಸ ಅವರೇನು ಹೇಳಿದ್ದಾರೆ ಎಂಬುದನ್ನು ಅವರ ಮಾತಿನಲ್ಲೇ ಹೇಳಬೇಕಾಗಿದ್ದರೆ ''ನಾವು ಈಗಿರತಕ್ಕ ಕಂದಾಯ ಪದ್ಧತಿಯನ್ನು ಇದೇ ರೂಪದಲ್ಲಿ ಮುಂದುವರಿಸಿಕೊಂಡು ಹೋಗುವುದಿಲ್ಲ. ಇದನ್ನು ಸಂಪೂರ್ಣವಾಗಿ ರದ್ದು ಮಾಡುತ್ತೇವೆ, ಇಲ್ಲವೆ ಬದಲಾವಣೆ ಮಾಡುತ್ತೇವೆ'' ಎಂಬುದಾಗಿ ಹೇಳಿದ್ದಾರೆ. ಈ ರೀತಿ ಅವರು ಹೇಳಿಲ್ಲ, ಅಧಿಕೃತ ವರದಿಯಲ್ಲಿ ಈ ಮಾತುಗಳನ್ನು ಸರ್ಕಾರದವರು ಹಿಂದೆ ಹೇಳಿಲ್ಲ ಅಂತ ತೋರಿಸಿದರೆ ನಾನು ಅವರ ವಾದವನ್ನು ಒಪ್ಪಿಕೊಂಡು ನನ್ನ ಮಾತುಗಳನ್ನು ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ. ದೇಶದಲ್ಲಿ ಹೊಟ್ಟೆಗಿಲ್ಲದೆ ಅರೆಹೊಟ್ಟೆ ಅರೆಬಟ್ಟೆಗಳಿಂದ ನರಳತಕ್ಕ ಜನತೆಗೆ ಭೂಕಂದಾಯವನ್ನು ರದ್ದು ಮಾಡುತ್ತೇವೆಂಬ ಆಸೆಯನ್ನು ತೋರಿಸಿ ಈ ಕಾಂಗ್ರೆಸ್ ಜನರು ಆ ಬಡಪಾಯಿಗಳಿಂದ ಓಟನ್ನು ಪಡೆದುಕೊಂಡು ಆ ಜನರಿಗೆ ಮಂಕುಬೂದಿ ಉರುವಿ ಮೋಸಮಾಡಿ ಚುನಾವಣೆಯಲ್ಲಿ ಗೆದ್ದನಂತರ ನಾವು ಹಾಗೆ ಯಾರಿಗೂ ಕಂದಾಯವನ್ನು ರದ್ದುಮಾಡುತ್ತೇವೆಂಬ ಮಾತನ್ನು ಕೊಟ್ಟಿರಲಿಲ್ಲ ಎಂಬ ವಾದವನ್ನು ಈ ದಿವಸ ಶ್ರೀಮಾನ್ ಕೆ. ಎಚ್. ಶ್ರೀನಿವಾಸ್ ಅವರು ಸಭೆಯ ಮುಂದೆ ಇಡುತ್ತಿರುವುದು ನ್ಯಾಯಕ್ಕೆ ದೂರವಾದ ಹೇಳಿಕೆಯಾಗಿದೆ. ಈ ಸಂದರ್ಭದಲ್ಲಿ ನಾನು ಕಾಂಗ್ರೆಸ್ ಪಕ್ಷದವರಿಗೆ ಹಾಕತಕ್ಕ ಸವಾಲಾದರೂ ಇಷ್ಟೇ: ಈ ದಿವಸ ಆ ಶ್ರೀ ಕೆ. ಎಚ್. ಶ್ರೀನಿವಾಸ್ ಅವರು ಮತ್ತು ಇನ್ನೂ ಕೆಲವು ನಮ್ಮ ಕಾಂಗ್ರೆಸ್ ಮಿತ್ರರು ಇತ್ತ ಕಡೆ ನಮ್ಮ ಕೆಲವು ಮಿತ್ರರು ಎಲ್ಲರೂ ಸೇರಿ ಯಾವ ಚುನಾವಣಾ ಕ್ಷೇತ್ರಕ್ಕಾದರೂ ಸರಿಯೇ ಅದು ವಿರೋಧಪಕ್ಷದವರ ಕ್ಷೇತ್ರ ಕಾಂಗ್ರೆಸ್ ಪಕ್ಷದವರ ಕ್ಷೇತ್ರ ಎನ್ನತಕ್ಕ ತಾರತಮ್ಯ ಮಾಡದೆ ಯಾರ ಕ್ಷೇತ್ರವಾದರೂ ಸರಿ ಅಲ್ಲಿಗೆ ಹೋಗೋಣ: ಅಲ್ಲಿರತಕ್ಕ ರೈತರನ್ನು ಕರೆದು ಸಭೆ ಸೇರಿಸಿ ಅವರನ್ನು ಕೇಳೋಣ ಅವರು ಕಂದಾಯ ಇನ್ನೂ ಹೆಚ್ಚುಮಾಡಿ ಅದರ ಬಗ್ಗೆ ನಮ್ಮ ತಕರಾರು ಇಲ್ಲ ಎಂದು ಹೇಳಿದರೆ ನಾನು ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ. ಇಲ್ಲವೇ ಆ ರೈತರು ಈ ಕಂದಾಯ ರದ್ದಾಗಬೇಕು ಇದು ಬಹಳ ಜಾಸ್ತಿ ಆಗಿದೆ ಎಂದರೆ ಈ ಕಾಂಗ್ರೆಸ್ಸಿನವರೆಲ್ಲರೂ ರಾಜೀನಾಮೆ ಕೊಡಬೇಕು. ಹಾಗೆ ಎಲ್ಲಿಯಾದರೂ ಸರಿ, ಒಂದು ಪಬ್ಲಿಕ್ ಮೀಟಿಂಗ್ ಮಾಡಿ ಒಂದು ತೀರ್ಮಾನಕ್ಕೆ ಬರುವುದಕ್ಕೆ ಈ ಸರ್ಕಾರ ಸಿದ್ಧವಾಗಿದೆಯೇ ಎಂಬುದೇ ನನ್ನ ಸವಾಲ್. ಹಾಲಿ ಇರತಕ್ಕ ಕಂದಾಯ ಪದ್ಧತಿ ಒಂದು ಪಾಳೇಗಾರತನದ್ದು. ನೂರು ರೂಪಾಯಿಗಳ ಉತ್ಪನ್ನ ಇರತಕ್ಕ ಒಂದು ಭೂಮಿಗೆ 20 ರೂಪಾಯಿ ಕಂದಾಯ ಹಾಕಿದ್ದಾರೆ. ಆದ್ದರಿಂದ ಇದು ಕೂಡಲೆ ರದ್ದಾಗಬೇಕು ಅನ್ನುವುದು ನನ್ನ ವಾದ.

ಶ್ರೀ ಡಿ. ದೇವರಾಜ್ ಅರಸ್.—ತಾವು ಹೇಳುತ್ತಿರುವ ವಾದ, ಸರ್ಕಾರದವರು ಈಗ ಇರತಕ್ಕ ಭೂ ಕಂದಾಯ ಪದ್ಧತಿ ಏನಿದೆ ಅದನ್ನು ರದ್ದುಮಾಡಿ ಕೈತೊಳೆದುಕೊಂಡು ಸುಮ್ಮನೆ ಇದ್ದುಬಿಡಿ ಎಂದು ಹೇಳುತ್ತೀರಾ ಅಥವಾ ಈ ಕಂದಾಯವನ್ನು ಬೇರೊಂದು ರೂಪದಲ್ಲಿ ಹಾಕಲಿ ಎಂದು ಸಲಹೆ ಮಾಡುತ್ತಿದ್ದೀರೋ? ನಿಮ್ಮ ವಾದದ ನಿಲುವು ಯಾವುದು ಎಂಬುದನ್ನು ಸ್ಪಷ್ಟಪಡಿಸಿ.

ಶ್ರೀ ಪಿ. ವೆಂಕಟಗಿರಿಯಪ್ಪ.—ಇಲ್ಲಿ ಈ ದಿವಸ ಈ ಸಭೆಯಲ್ಲಿರತಕ್ಕ ಆಡಳಿತಪಕ್ಷದಲ್ಲಿ ಹಾಗೂ ಇತ್ತ ವಿರೋಧ ಪಕ್ಷಗಳಲ್ಲಿರತಕ್ಕ ಸದಸ್ಯರಲ್ಲಿ ಕೆಲವರು ಕಂದಾಯವನ್ನು ಸಂಪೂರ್ಣವಾಗಿ ರದ್ದು ಮಾಡಬೇಕೆಂದು ವಾದ ಮಾಡುತ್ತಾರೆ. ಇನ್ನು ಕೆಲವು ಸದಸ್ಯರು ಅತ್ತ ಕಡೆ ಮತ್ತು ಇತ್ತ ಕಡೆ ಇರತಕ್ಕವರು ಇದನ್ನು ಹಾಲಿ ಇರತಕ್ಕ ರೂಪದಲ್ಲಿ ಇರುವುದು ಬೇಡ ಇದನ್ನು ಒಂದು ಹೊಸ ಯೋಜನೆಯಲ್ಲಿ ಜಾರಿಗೆ ತರಬೇಕೆಂದು ವಾದಮಾಡತಕ್ಕವರೂ ಇದ್ದಾರೆ. ಇದನ್ನು ಬೇರೆಂದು ರೂಪದಲ್ಲಿ ಅಂದರೆ ಕೆಲವರ ಹೇಳಿಕೆ ಪ್ರಕಾರ ಅದು ವ್ಯವಸಾಯದ ತೆರಿಗೆಯ ರೂಪದಲ್ಲಿರಬಹುದು ಇಲ್ಲವೇ ಅದು ಗೇಣಿ ರೂಪದಲ್ಲಿರಬಹುದು. ಆದರೆ ನಾನು ಹೇಳುತ್ತಿರುವುದು ಈಗ ಸರ್ಕಾರದವರು ಹೇರಲು ಹೊರಟಿರತಕ್ಕ ಭಾರಿ ಕಂದಾಯದ ಹೊರೆಯನ್ನು ಹೊರತಕ್ಕ ಶಕ್ತಿ ಯಾವ ರೈತರಿಗೆ ಇದೆಯೊ ಅಂಥ ರೈತರಿಗೆ ಮಾತ್ರ ಅದನ್ನು ಹಾಕಲಿ ಎಂಬುದು ನನ್ನ ವಾದ. ನಮ್ಮಲ್ಲಿರತಕ್ಕ ದೊಡ್ಡ ದೊಡ್ಡ ಭೂಮಾಲೀಕರಿಗೂ ಭಾರಿ ಭಾರಿ ತೆಂಗಿನ ಹಾಗೂ ಅಡಕೆಯ ತೋಟಗಳನ್ನು ಇಟ್ಟುಕೊಂಡಿರತಕ್ಕ ಭೂಮಾಲೀಕರಿಗೆ ವಿಧಿಸಿ ಅದರ ಬಗ್ಗೆ ನನ್ನ ಆಕ್ಷೇಪಣೆಯಿಲ್ಲ. ಈ ದಿವಸ ನಮ್ಮ ರಾಜ್ಯದಲ್ಲಿ ನನಗೆ ಗೊತ್ತಿರುವ ಹಾಗೆ ವ್ಯವಸಾಯದ ವರಮಾನ ತೆರಿಗೆಯನ್ನು ಕೊಡತಕ್ಕಂಥ, ಅರ್ಹರಾಗಿರತಕ್ಕಂಥ ಜನ ಏನಿದ್ದಾರೆ ಅವರು ಸುಳ್ಳು ಸುಳ್ಳು ಲೆಕ್ಕಗಳನ್ನಿಟ್ಟು ತೆರಿಗೆಯನ್ನು ತಪ್ಪಿಸಿಕೊಳ್ಳತಕ್ಕ ಜನರಿದ್ದಾರೆ. ಅಂಥ ಖದೀಮ ಕುಳಗಳ ಹತ್ತಿರ ಕಂದಾಯ ವಸೂಲ್ಮಾಡಲು ಹೋಗತಕ್ಕ ಅಧಿಕಾರಿಗಳಾದರೂ ಯಾರು ? ಅವರಿಗೆ ಎಷ್ಟು ಧೈರ್ಯ ಇರಬೇಕು ? ಕಳ್ಳಲೆಕ್ಕ ಇಡತಕ್ಕ ಜನರು

(ಶ್ರೀ ಪಿ. ವೆಂಕಟಗಿರಿಯಪ್ಪ)

ಯಾವಾಗಲೂ ತಾಶೀಲ್ದಾರ್, ಅಸಿಸ್ಟೆಂಟ್ ಕಮಿಷನರ್ ಅಥವಾ ಡೆಪ್ಯೂಟಿ ಕಮಿಷನರ್ ಇಂಥವರ ಬಳಿಯಲ್ಲೇ ತಿರುಗಾಡತಕ್ಕವರಾಗಿರುತ್ತಾರೆ. ನನಗೆ ಗೊತ್ತಿರುವ ಹಾಗೆ ಈ ದಿವಸ 200 ಎಕರೆ ಕಬ್ಬಿನ ತೋಟ ಇಟ್ಟುಕೊಂಡಿರತಕ್ಕ ಒಬ್ಬ ರೈತ ಯಾವ ಆದಾಯ ತೆರಿಗೆಯನ್ನೂ ಕೊಡುತ್ತಿಲ್ಲ, ಹಾಗೆ ಸರ್ಕಾರಕ್ಕೆ ಒಂದು ಬಿಡಿಗಾಸನ್ನೂ ತೆರಿಗೆ ಕೊಡದೆ ಇರತಕ್ಕಂಥ ರೈತರು ನಮ್ಮಲ್ಲಿ ಬಹಳ ಜನ ಇದ್ದಾರೆ. 20--30 ಸಾವಿರ ತೆಂಗಿನ ತೋಟ ಇಟ್ಟುಕೊಂಡಿರತಕ್ಕ ಭೂಮಾಲೀಕರೂ ಕೂಡ ಒಂದು ಬಿಡಿಗಾಸು ಆದಾಯ ತೆರಿಗೆಯನ್ನು ಕೊಡುತ್ತಿಲ್ಲ. ಹೀಗೆ ರಾಜ್ಯದಲ್ಲಿ ಒಂದು ವರ್ಗದ ಜನ ದಿನ ದಿನಕ್ಕೂ ಬಡಕಾಯುತ್ತಾ ಇರುವ ಸಣ್ಣ ಪುಟ್ಟ ರೈತರ ಭೂಮಿಗಳನ್ನು ನುಂಗಿ ನೀರು ಕುಡಿಯುತ್ತಿದ್ದಾರೆ. ನೂರಾರು ರೂಪಾಯಿಗಳ ಬೆಲೆ ಬಾಳದಿದ್ದ ಖುಷ್ಕಿ ಜಮೀನು ಕೂಡ ಈ ದಿವಸ ಈ ಶ್ರೀಮಂತರ ಭೂದಾಹ ಜಾಸ್ತಿಯಾದ್ದರಿಂದ ಎಕರೆಗೆ 4—5 ಸಾವಿರ ಬೆಲೆ ಆಗಿದೆ. ವಾಸ್ತವಾಂಶಗಳು ಹೀಗಿರುವಾಗ ಮುಂದೆ ದೇಶದಲ್ಲಿ ವ್ಯವಸಾಯದ ಆದಾಯ ತೆರಿಗೆಯನ್ನು ಜಾರಿಗೆ ತಂದರೆ ನೂರಾರು ಎಕರೆಗಳಲ್ಲಿ ಕಬ್ಬನ್ನು ಬೆಳೆಯುತಕ್ಕ ಜನರೂ ಮತ್ತು ಸಾವಿರಾರು ತೆಂಗಿನ ಗಿಡಗಳನ್ನು ಇಟ್ಟುಕೊಂಡಿರತಕ್ಕ ಜನರೂ ತೆರಿಗೆಯನ್ನು ತಪ್ಪಿಸಿಕೊಂಡು ರಾಜ್ಯದಲ್ಲಿ ಇರತಕ್ಕ ಸಣ್ಣ ಪುಟ್ಟ ಭೂಮಾಲೀಕರೇನಿದ್ದಾರೆ ಅವರು ಈ ಅನಾಹುತಕ್ಕೆ ತುತ್ತಾಗುತ್ತಾರೆ. ಈಗಿರತಕ್ಕ ಕಂದಾಯ ಪದ್ಧತಿಯನ್ನು ತಪ್ಪಿಸಿ ನಾಳೆ ಆದಾಯ ತೆರಿಗೆಯನ್ನು ಜಾರಿಗೆ ತಂದರೆ ಆಗತಕ್ಕ ಪರಿಣಾಮವೇ ಇದು.

ಶ್ರೀ ಬಿ. ರಾಚಯ್ಯ.—ತಾವು ಆಹಾರ ಧಾನ್ಯಗಳ ಮೇಲೂ ತೆರಿಗೆಯನ್ನು ಹಾಕಬೇಕೆಂದು ಹೇಳುತ್ತೀರಾ ?

ಶ್ರೀ ಪಿ. ವೆಂಕಟಗಿರಿಯಪ್ಪ.—ದೇಶದಲ್ಲಿ ಇನ್ನೂ ಲಕ್ಷಗಟ್ಟಲೆ ಜನರಿಗೆ ಓದುವುದಕ್ಕೆ ಮತ್ತು ಬರೆಯುವುದಕ್ಕೆ ಬರುವುದಿಲ್ಲ. ಅಂಥವರಿಗೂ ಮತ್ತು 15—20 ಎಕರೆ ಖುಷ್ಕಿ ಭೂಮಿ ಅಥವಾ 5 ಎಕರೆ ತರೀ ಭೂಮಿ ಇಟ್ಟುಕೊಂಡಿರತಕ್ಕ ಭೂಮಾಲೀಕರೆನ್ನೆಲ್ಲಾ ಈ ತೆರಿಗೆ ವರ್ಗದಿಂದ ತೆಗೆದು ಹಾಕಬೇಕು. ಅಂದರೆ ಇಷ್ಟು ಜನರಿಗೆ ಯಾವ ಕಂದಾಯವನ್ನು ಹಾಕಬಾರದೆಂದು ಹೇಳುತ್ತೇನೆ. ಭೂಕಂದಾಯ ಸಚಿವರು ಒಂದು ಕಾಂಪ್ರಹೆನ್ಸೀವ್ ಮಸೂದೆಯನ್ನು ತರಬೇಕಾಗಿತ್ತು. ಆದರೆ ಹಾಗೆ ಮಾಡಿಲ್ಲ.

7-00 P.M.

114 (ಎ) ಸಬ್ ಸೆಕ್ಷನ್ (ಎ)ನಲ್ಲಿ ಈ ರೀತಿ ಹೇಳಿದೆ:

"114A (a) if at any time after the introduction of a settlement of land revenue under Section 122 the State Government, for reasons to be recorded in writing, is of the opinion that in any zone, the settlement of land revenue requires modification, it may, by order, direct the revision of settlement of land revenue in such zone, and the provisions of this Chapter relating to a revision settlement of land revenue shall be applicable to such revision of settlement."

ಅಂದರೆ ಸರ್ಕಾರದವರಿಗೆ ಎಲ್ಲಿ ಅವಶ್ಯಕ ಕಂಡುಬಂದರೆ ಅಲ್ಲಿ ಇದನ್ನು ಬದಲಾವಣೆ ಮಾಡಬಹುದು ಎಂದು ಇದೆ. ಇದು ಸುಮಾರು 3-4 ದಿವಸಗಳಿಂದಲೂ ಚರ್ಚೆಯಾಗಿದೆ. ಹಿಂದಿನಿಂದಲೂ ಭೂಕಂದಾಯ ರದ್ದುಮಾಡಬೇಕೆಂಬ ಮೂಲಭೂತ ಬೇಡಿಕೆ ಇದ್ದರೂ ಕಾಂಗ್ರೆಸ್ ಅಧಿಕಾರದಲ್ಲಿರುವವರಿಗೂ ನೀವು ಅದನ್ನು ರದ್ದುಮಾಡುವುದಿಲ್ಲ, ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸನ್ನು ವಸೂಲು ಮಾಡುವುದಿಲ್ಲ. ಈ ಲ್ಯಾಂಡ್ ರೆವಿನ್ಯೂ ಸೆಟಲ್‌ಮೆಂಟಿನಲ್ಲಿ 2 ರೂಪಾಯಿಗಳ ಇದ್ದವರಿಗೆ 8 ರೂಪಾಯಿಗಳಿಂದ 10 ರೂಪಾಯಿಗಳವರೆಗೆ ಆಗಿದೆ. ಯಾವ ಭೂಮಿ ಸರಿಯಾಗಿದೆಯೋ ಇಲ್ಲವೇ ಎಂಬುದನ್ನು ಏನಾದರೂ ನೋಡಿ ಮಾಡುತ್ತೀರಾ? ಸರ್ಕಾರಕ್ಕೆ ಯಾವುದು ಸರಿಯಿಲ್ಲ ಎಂದು ತೋಚಿದರೆ ಅಲ್ಲಿ ಮಾಡುತ್ತೇವೆ ಎಂದು ಹೇಳುತ್ತೀರಿ. ಸರ್ಕಾರಕ್ಕೆ ಎಲ್ಲೆಲ್ಲಿ ಜಾಸ್ತಿಯಾಗಿದೆ ಯಾವ ಯಾವ ಜೋನುಗಳಲ್ಲಿ ಜಾಸ್ತಿಯಾಗಿದೆ ಎಂದು ಕಂಡು ಬರುತ್ತದೋ, ಅಂಥ ಕಡೆ ರೀ ಓಪನ್ ಮಾಡು

ತ್ತೇವೆಂದು ಹೇಳಿದರೆ ಆಗ ಅದು ಸರಿಹೋಗುತ್ತದೆಯೇ? ಸರ್ಕಾರವೇ ಈ ಅಧಿಕಾರವನ್ನು ತನ್ನ ಕೈಲಿ ತೆಗೆದುಕೊಂಡು ಇದರಲ್ಲಿ ರಾಜಕೀಯ ಮಾಡಿ ಬೇಕಾದ ಕಡೆಗಳಲ್ಲಿ ಸರ್ವೆ ಸೆಟಲ್‌ಮೆಂಟ್ ರೀ ಓಪನ್ ಮಾಡಿ, ಬೇಡದೇ ಇರುವ ಕಡೆ ಹಾಗೆಯೇ ಇಡುವುದು ಸರಿಯಲ್ಲ. ಸರ್ಕಾರದವರು ಈಗಲೇ ಎಲ್ಲೆಲ್ಲಿ ಇದನ್ನು ರೀ ಓಪನ್ ಮಾಡುತ್ತಾರೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಹೇಳಿದರೆ ಆಗ ನಾವು ಇದನ್ನು ಒಪ್ಪಿಕೊಳ್ಳಬಹುದೋ ಬೇಡವೋ ಎಂಬ ಪ್ರಶ್ನೆಯನ್ನು ಯೋಚನೆ ಮಾಡಬಹುದು. ಎಲ್ಲೆಲ್ಲಿ ಸರ್ಕಾರಕ್ಕೆ ಸರಿಯೆಂದು ತೋಚಿದರೆ, ಅಲ್ಲಿ ಸರ್ವೆ ಸೆಟಲ್‌ಮೆಂಟ್ ರೀ ಓಪನ್ ಮಾಡುತ್ತೇವೆಂದು ಹೇಳಿದರೆ ಅದು ಖಂಡಿತವಾಗಿ ಸಮಂಜಸವಾದ ತಿದ್ದುಪಡಿಯಾಗುವುದಿಲ್ಲ. ಈ ಒಂದು ತಿದ್ದುಪಡಿ ಸರಿಯಾಗಿರುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಷ್ಟೇ ಅಲ್ಲ. ಈ ದಿವಸ ಇಡೀ ಮೈಸೂರು ರಾಜ್ಯದಲ್ಲಿ ಬಹಳ ಕಡೆ ವ್ಯತ್ಯಾಸವಾಗಿದೆ. ಒಂದೊಂದು ಜೋನಿನಲ್ಲಿ ಇರತಕ್ಕ ಅಸೆಸ್‌ಮೆಂಟ್ ತೆಗೆದುಕೊಂಡರೆ, ಅಲ್ಲಿ ಹಿಂದಿನ ಅಸೆಸ್‌ಮೆಂಟಿಗಿಂತ ಕಡಿಮೆ ಇರಬಹುದು. ಮಾರ್ಕೆಟ್ ಸೌಲಭ್ಯವನ್ನೂ ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ಅಸೆಸ್‌ಮೆಂಟ್ ಮಾಡಿರುವುದರಿಂದ ಅನೇಕ ವ್ಯತ್ಯಾಸವಾಗಿದೆ. ಈಗ ನಡೆದಿರತಕ್ಕದ್ದು ಅವೈಜ್ಞಾನಿಕವಾಗಿಯಾಗಿದೆ. ಯಾವ ಒಂದು ವೈಜ್ಞಾನಿಕವಾದ ಆಧಾರವಿಲ್ಲ. ಇಡೀ ರಾಜ್ಯದಲ್ಲಿ ಸರ್ವೆ ಸೆಟಲ್‌ಮೆಂಟ್ ವಿಷಯ ತುಂಬಾ ಅಸಮರ್ಪಕವಾಗಿದೆ. ಇದನ್ನು ಕೈಬಿಟ್ಟು ಇಡೀ ರಾಜ್ಯದಲ್ಲಿ ಈ ಸರ್ವೆ ಸೆಟಲ್‌ಮೆಂಟ್ ಕಾರ್ಯವನ್ನು ಪುನರ್ವಿಮರ್ಶೆ ಮಾಡಬೇಕು. ಯಾವುದೇ ವಿಧದಲ್ಲಿ ಕೋಲಾರ ಜಿಲ್ಲೆಯಲ್ಲಿ ಕಂದಾಯವನ್ನು ಹೆಚ್ಚು ಮಾಡಬಾರದು. ಹಿಂದೆ ಮಾನ್ಯ ಶ್ರೀ ಕೆ. ಸಿ. ರೆಡ್ಡಿಯವರು ಈ ದೇಶದ ಮುಖ್ಯಮಂತ್ರಿಗಳಾಗಿದ್ದಾಗ, ಕೋಲಾರ ಜಿಲ್ಲೆಯಲ್ಲಿ ಕಂದಾಯ ಕಡಿಮೆ ಮಾಡಬೇಕೆಂದು ಸುಮಾರು ಹತ್ತಾರು ವರ್ಷಗಳಿಂದಲೂ ಹೋರಾಟ ಮಾಡಿದ್ದೇವೆ. ಈ ಕಾಂಗ್ರೆಸ್ ಸರ್ಕಾರ ಬಂದಮೇಲೆ 3-4 ರೂಪಾಯಿಗಳಂತೆ ಕಂದಾಯ ತರೀ ಜಮೀನಿಗೆ ಇದ್ದುದು ಈಗ 9 ರೂಪಾಯಿಗಳಿಗೇರಿದೆ. ಇದು ಖಂಡಿತವಾಗಿ ನ್ಯಾಯವಲ್ಲ. ಕೋಲಾರದಲ್ಲಿ ಮೇಜರ್ ಇರ್ರಿಗೇಷನ್ ತೆಗೆದುಕೊಂಡಿಲ್ಲ. ಕೇವಲ 24 ಇಂಚು ಮಳೆಯೂ ಸಹ ಬರುವುದಿಲ್ಲ. ಆದ್ದರಿಂದ ಈ ಪ್ರದೇಶದಲ್ಲಿ ಯಾವ ರೀತಿಯಲ್ಲಿಯೂ ಜಾಸ್ತಿ ತೆರಿಗೆಯನ್ನು ಹಾಕಬಾರದು. ಕೆರೆ ಕಟ್ಟುವುದಕ್ಕೆ ಹಣ ಖರ್ಚು ಮಾಡಿದ್ದೇವೆಂದು ಹೇಳಬಹುದು. ಎಲ್ಲೆಲ್ಲಿ ಕೆರೆಗಳನ್ನು ಕಟ್ಟಿದ್ದಾರೋ ಅವರಿಗೆ ಜಾಸ್ತಿ ಮಾಡಿ, ಬಾವಿಗಳಿಗೆ ಸಾಲ ಕೊಟ್ಟಿದ್ದರೆ, ಬಾಗಾಯಿತು ಜಮೀನು ಮಾಡಿದರೆ ಅವರಿಗೆ ಜಾಸ್ತಿ ಮಾಡಿ. ಆದರೆ ಖುಷ್ಕಿ ಜಮೀನಿಗೆ ಏನೂ ಮಾಡಬೇಡಿ. ಅಲ್ಲಿ ಮಳೆ ಬಿದ್ದರೆ ಉಂಟು. ಇನ್ನು ನಾಲ್ಕೈದು ವರ್ಷಗಳವರೆಗೆ ಖುಷ್ಕಿ ಜಮೀನುಗಳ ಕಂದಾಯವನ್ನು ಯಾವ ಕಾರಣದಿಂದಲೂ ಹೆಚ್ಚು ಮಾಡಬಾರದು. ಲ್ಯಾಂಡ್ ರೆವಿನ್ಯೂ ಸೆಟಲ್‌ಮೆಂಟ್ ಇಡೀ ರಾಜ್ಯದಲ್ಲಿ ಖಂಡಿತವಾಗಿ ಸಮರ್ಪಕವಾಗಿಲ್ಲ. ಇದನ್ನು ರೀ ಓಪನ್ ಮಾಡಿ ಸರಿಯಾದ ರೀತಿಯಲ್ಲಿ ನ್ಯಾಯ ದೊರಕಿಸಿಕೊಡಬೇಕೆಂದು ಹೇಳಿ ನನಗೆ ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. DEPUTY SPEAKER.—The discussion will continue tomorrow. Now the Calling Attention notice by Sri S. R. Bommai.

Calling Attention to Matters of Public Importance

re: Refusal to issue a fitness certificate in respect of a Breeding Bull.

SRI M. K. BOMME GOWDA (Krishnarajapet).—I call the attention of the Minister of State for Veterinary Services, Animal Husbandry and Dairy Development to the following matter:

"That the Veterinary Assistant Surgeon of K. R. Pet taluk has purposely rejected the issue of certificate to one Mr. Srikante Gowda and another Hore Bette Gowda for bullocks purchased and there by preventing them to obtain grant of Rs. 500 each from Taluk Board K. R. Pet, Mandya District."